
# ವರನಸಿ

## ತಿಂಗಳ ಪತ್ರಿಕೆ

ಆಗಸ್ಟ್ : 1998



# ಮಾನಸ

ತಿಂಗಳ ಪತ್ರಿಕೆ

ಸಂಪುಟ : 13 ಸಂಚಿಕೆ : 7

ಆಗಸ್ಟ್ : 1998





ವಿಳಾಸ :

**"ಮಾನಸ"** ತಿಂಗಳ ಪತ್ರಿಕೆ

ಪಂಚಾಯಿತಿ ರಸ್ತೆ

ಕಾಡುಗೋಡಿ ಪೋಸ್ಟ್

ಬೆಂಗಳೂರು - 560 067

ಸೂಚನೆ : ಬಿಡಿ ಪ್ರತಿ **3-00** ರೂ.

ವಾರ್ಷಿಕ ಚಂದಾ **40-00** ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ

ಒಟ್ಟು ಹನ್ನೊಂದು ಸಂಚಿಕೆಗಳು


**ಈ ಸಂಚಿಕೆಯಲ್ಲಿ....**







ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ

ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - ೫೬೦ ೦೬೭

# ಸಂಪಾದಕೀಯ



ಮಹಿಳೆಯರ ಬದುಕನ್ನು ಅಲುಗಾಡಿಸುತ್ತಿರುವ ಸಂಗತಿಗಳು ಇಂದು ಹಲವಾರು. 33% ಮಹಿಳಾ ಮೀಸಲಾತಿ ಚರ್ಚೆ ಸಂಸತ್ತಿನಲ್ಲಿ ಬಂದರೆ ಕುರ್ಚಿಗಳು ತೂರಾಡಲ್ಪಡುತ್ತಿವೆ, ಮಸೂದೆಯನ್ನು ಮಂಡಿಸುವ ಹಾಳೆಗಳು ಚೂರು ಚೂರಾಗಿ ಈ ದೇಶದ ಮಹಿಳೆಯರ ಹಕ್ಕಿನ ಮೇಲೆ ಸವಾರಿ ಮಾಡತೊಡಗಿವೆ. ಪಕ್ಷದ ರಾಜಕಾರಣಿಗಳು, ಕಾರ್ಯಕರ್ತರೂ ಸಹ ಇತರರಂತೆ ಬೀದಿ ಬೀದಿಗಳಲ್ಲಿ ಚಿಕ್ಕ ಚಿಕ್ಕ ಹುಡುಗಿಯರ ಮೇಲೆ ದ್ವೇಷಕ್ಕೆ, ರೋಷಕ್ಕೆ, ಜೊತೆಗೆ ಖಯಾಲಿಗೆ - ಒಬ್ಬೊಬ್ಬರೇ ಸಾಲದೆಂಬಂತೆ ಒಟ್ಟೊಟ್ಟಾಗಿ ಅತ್ಯಾಚಾರವೆಸಗಿ ತಮಾಷೆಯಂತೆ ದೇಹ ಬಿಸಾಕತೊಡಗಿದ್ದಾರೆ. ಹಿಂಸೆಯ ಈ ರೂಪಗಳು ಸಾಲದೆಂಬಂತೆ ಬಿ.ಜೆ.ಪಿ. ಸರ್ಕಾರ ಪೋಕ್ರಾನ್‌ನಲ್ಲಿ ಅಣು ಸ್ಫೋಟ ನಡೆಸಿದೆ, ಶಾಂತಿಯ ಹೆಸರಿನಲ್ಲಿ ಅಣುಶಕ್ತಿ ಕೇಂದ್ರಗಳು ತಲೆಯೆತ್ತತೊಡಗಿವೆ. ನಮ್ಮ ಬದುಕುವ ಹಕ್ಕನ್ನು ಕಸಿದುಕೊಂಡು ಬಿಡುವ ಉದಾಹರಣೆಗಳಲ್ಲಿ ಇದೂ ಒಂದು.

ಚರ್ನೋಬೈಲ್, ತ್ರಿಮೈಲ್ ಐಲ್ಯಾಂಡ್‌ನಲ್ಲಿ ನಡೆದ ಅಣುಸ್ಫೋಟದ ಭೀಕರ ದುರಂತಗಳು ನಮ್ಮ ಎದೆಯನ್ನು ನಡುಗಿಸುತ್ತವೆ. ಬಸಿರು, ಬಸಿರೊಳಗಿನ ಮಗೂ ಕೂಡಾ ಉರಿದು ದೈಹಿಕ ನ್ಯೂನತೆಯಲ್ಲಿ ಹುಟ್ಟುವ ಸಾಧ್ಯತೆ ಹೊಂದಿದ ರೇಡಿಯೋ ಆಕ್ಟೀವ್‌ನ ಕಿರಣಗಳು ಅಣುಸ್ಫೋಟದ ದುರಂತದಲ್ಲಿ ಮಾತ್ರವಲ್ಲ, ಶಾಂತಿಯ ಬಳಕೆಗಾಗಿ ಎಂದು ಕರೆಯಲ್ಪಡುವ ಅಣುಶಕ್ತಿ ಕೇಂದ್ರಗಳಲ್ಲಿ ಕೂಡಾ ಕಾಣಬಹುದಾಗಿದೆ. ಅಣುಸ್ಥಾವರದ ಪ್ರದೇಶಗಳಲ್ಲಿ ದುಡಿಯುವ ಕಾರ್ಮಿಕರ ಹಾಗೂ ಸುತ್ತ-ಮುತ್ತ ವಾಸಿಸುವ ಜನರ ಬದುಕು ಅಸಹನೀಯವಾಗತೊಡಗಿದೆ. ರೇಡಿಯೋ ಆಕ್ಟೀವ್‌ನ ಕಿರಣದಿಂದಾಗಿ ಕೇರಳದ IRE ಸುತ್ತ ವಾಸಿಸುವ ಕುಟುಂಬಗಳ ಮಕ್ಕಳು ದೈಹಿಕ ನ್ಯೂನತೆಯಿಂದಲೇ ಹುಟ್ಟಿ ಬೆಳೆಯುತ್ತಿರುವುದು ನಮ್ಮ ಕಣ್ಣ ಮುಂದಿರುವ ಉದಾಹರಣೆಯಾಗಿದೆ. ಇದು ಒಂದು ಉದಾಹರಣೆಯಷ್ಟೇ. ಅಣುಸ್ಫೋಟದ ವಿಕಿರಣಗಳು ತಲೆಮಾರಿನಿಂದ ತಲೆಮಾರಿನವರೆಗೂ ಮಹಿಳೆಯರ ಆರೋಗ್ಯ, ಬಸಿರು ಹಾಗೂ ಮಕ್ಕಳ ದೈಹಿಕ ಸಮತೋಲನವನ್ನು ವಿಷವರ್ತುಲದಲ್ಲಿ ಸಿಲುಕಿಸಿ ಅವರು ಬದುಕಿರುವವರೆಗೂ ನರಳುವಂತೆ ಮಾಡುತ್ತವೆ.

ಬದುಕನ್ನೇ ಕಸಿದುಕೊಂಡುಬಿಡುವ ಅಣುಸ್ಫೋಟ ಇಂದು ದೇಶದ ಪ್ರಗತಿ ಹಾಗೂ ಸುಭದ್ರತೆಯ ಹೆಸರಿನಲ್ಲಿ ವಿಜೃಂಭಿಸತೊಡಗಿದೆ. ಆರೋಗ್ಯ ಸೇವೆಗೆ, ಆಹಾರಕ್ಕೆ ಖರ್ಚು ಮಾಡಬೇಕಾದ ಹಣವೆಲ್ಲವನ್ನೂ ಮಿಲಿಟರಿ ಉದ್ದೇಶಕ್ಕಾಗಿ ಪೋಲುಮಾಡಲಾಗುತ್ತಿದೆ. ಅಣುಶಕ್ತಿ ಕೇಂದ್ರದ ತ್ಯಾಜ್ಯ ವಸ್ತುವಿನ ವಿಲೇವಾರಿ ಸರಿಯಾಗಿ ಮಾಡದೇ ಸುತ್ತಮುತ್ತ ಬದುಕುವವರ ಬದುಕಿಗೆಲ್ಲಾ ವಿಷಲೇಪನ ಮಾಡಲಾಗುತ್ತಿದೆ. ಮಾನವೀಯತೆಯನ್ನೇ ವಿನಾಶದ ಅಂಚಿಗೆ ನೂಕುವ ಅಣುಸ್ಫೋಟದ ಸಮರ್ಥನೆಯನ್ನು ಆಳುವ ಸರ್ಕಾರವು ಧರ್ಮ, ಸುಭದ್ರತೆ ಇಂತಹ ಕಾರಣಗಳನ್ನು ಮುಂದಿಟ್ಟುಕೊಂಡು ಜನತೆಯನ್ನು ದಾರಿ ತಪ್ಪಿಸಲು ಪ್ರಯತ್ನ ಮಾಡುತ್ತಿದೆ. ಈ ಪ್ರಯತ್ನವು ಧಾರ್ಮಿಕ, ದೇಶ ಪ್ರೇಮದ ಹೆಸರಿನಲ್ಲಿ ಪ್ರತಿಪಾದಿಸಲ್ಪಡುತ್ತಿರುವ ಮತಾಂಧತೆಯ ಅತಿರೇಕವೇ ಸರಿ. 'ಜೈ ವಿಜ್ಞಾನ್' ಘೋಷಣೆ ಜನಸಾಮಾನ್ಯರ ಬದುಕಿಗಾಗಲೀ, ಮೂಲಭೂತ ಸೌಲಭ್ಯಗಳಿಗಾಗಲೀ ಬಳಕೆಯಾಗುವುದಿಲ್ಲ.

ವಿಶ್ವದ ಮಹಿಳೆಯರು ಅಣುಶಕ್ತಿ, ಅಣುಸ್ಫೋಟದ ಬಗ್ಗೆ ಪ್ರಥಮ ಹಾಗೂ ದ್ವಿತೀಯ ಮಹಾಯುದ್ಧದ ಕಾಲದಿಂದಲೂ ಪ್ರತಿಭಟಿಸುತ್ತಲೇ ಬಂದಿದ್ದಾರೆ. ಯುದ್ಧದ ಎದುರಿನಲ್ಲೂ ನಾವೆಲ್ಲರೂ ಮಹಿಳೆಯರೂ ಒಟ್ಟಾಗಿಯೇ ಇದ್ದು ಶಾಂತಿಗಾಗಿ ಹೋರಾಡಬೇಕೆಂಬುದನ್ನು ಕಲಿಸಿದ್ದಾರೆ. 'ಶಾಂತಿ ಚಳುವಳಿ'ಯನ್ನು ಹಮ್ಮಿಕೊಂಡು ಶಾಂತಿಗಾಗಿ ಬದ್ಧತೆಯಿಂದ ಹೋರಾಡಿದ್ದಾರೆ. ಅಣುಬಾಂಬಿನ ಯುದ್ಧ, ಅದರ ವಿನಾಶದ ಬಗ್ಗೆ ಹೆದರಿದ ಮಹಿಳೆಯರು ಶತಮಾನಗಳಿಂದಲೂ ಸಾರ್ವತ್ರಿಕ ಹಾಗೂ ಅಂತರ್‌ರಾಷ್ಟ್ರೀಯ ನಿಶ್ಶಸ್ತ್ರೀಕರಣದ ಬಗ್ಗೆ ಮನವಿ ಮಾಡಿಕೊಳ್ಳುತ್ತಲೇ ಬಂದಿದ್ದಾರೆ. ಮನೆಗಳು, ಆಸ್ಪತ್ರೆಗಳು, ಶಾಲೆಗಳು, ಆಹಾರಕ್ಕಾಗಿ ಖರ್ಚು ಮಾಡಬೇಕಾದ ಹಣವನ್ನು ಮಿಲಿಟರಿ ಉದ್ದೇಶಕ್ಕಾಗಿ ಪೋಲುಮಾಡಬಾರದೆಂದು ಪ್ರಪಂಚದ ಅಣುಬಾಂಬಿನ ಶಕ್ತಿಗಳ ಮೇಲೆ ಒತ್ತಡ ಹಾಕಿದ್ದಾರೆ. ಐತಿಹಾಸಿಕವಾಗಿರುವ ಈ ಪರ್ಯಾಯ ಶಾಂತಿ ಚಳುವಳಿಯ ಸ್ಫೂರ್ತಿಯಲ್ಲಿಯೇ ನಾವಿಂದು ಅಣುಸ್ಫೋಟ ಹಾಗೂ ಶಾಂತಿಗಾಗಿ ಎಂದು ಕರೆಯಲ್ಪಡುವ ಅಣುಶಕ್ತಿ ಕೇಂದ್ರಗಳ ವಿರುದ್ಧ ಧ್ವನಿ ಎತ್ತಿ ಮಾತನಾಡಬೇಕಿದೆ. ನಮ್ಮ ಮುಂದಿನ ಜನಾಂಗಕ್ಕೆ ಶಾಂತಿ ಹಾಗೂ ದೃಢವಾದ ಜಗತ್ತು ಸೃಷ್ಟಿಸಲು ಈ ಅಣುಶಕ್ತಿ ಹಾಗೂ ಅಣುಸ್ಫೋಟದ ವಿರುದ್ಧ ನಾವೆಲ್ಲರೂ ಸೇರಿ ಹೋರಾಡಬೇಕಾಗಿದೆ.

●

# ಭಾರತದ ಅಣ್ವಸ್ತ್ರ ಪರೀಕ್ಷೆಗಳು

**ಭಾರತದ ಅಣ್ವಸ್ತ್ರ ಯೋಜನೆಗಳ ರಾಜಕೀಯ ಇತಿಹಾಸ :**

ಭಾರತದ ಇತ್ತೀಚಿನ ಅಣ್ವಸ್ತ್ರ ಪರೀಕ್ಷೆಗಳು 50 ವರ್ಷಗಳ ಹಿಂದೆಯೇ ಪ್ರಾರಂಭಗೊಂಡ ಯೋಜನೆಯ ಫಲ. ಈ ಪರೀಕ್ಷೆಗಳು, ಪ್ರಾದೇಶಿಕ ಪ್ರಾಬಲ್ಯವಾಗಿ ಬೆಳೆಯಬೇಕೆನ್ನುವ ಭಾರತೀಯ ಆಳುವ ವರ್ಗದ ಪ್ರಯತ್ನವನ್ನು ಎತ್ತಿ ತೋರಿಸುತ್ತದೆ. ಈ ಮಾರ್ಗವನ್ನು ಎಲ್ಲ ಸರ್ಕಾರಗಳು ವಿವಿಧ ಹಂತದಲ್ಲಿ ಅನುಸರಿಸಿವೆ.

ಭಾರತದ ಅಣುಶಕ್ತಿ ಆಯೋಗವು (Atomic energy Commission) 1948ರಲ್ಲಿ ಪ್ರಾರಂಭವಾಯ್ತು. ಅದರ ಉದ್ದೇಶ ಅಣು ಸಂಬಂಧಿ ಚಟುವಟಿಕೆಗಳನ್ನು ಸಮನ್ವಯ ಗೊಳಿಸುವದಾಗಿತ್ತು. ಹಿಂದಿನ AEC ಚೇರ್ಮನ್ ಆಗಿದ್ದ ಡಾ. ರಾಜಾರಾಮಣ್ಣನವರ ಪ್ರಕಾರ AECಯ ಗುರಿಗಳನ್ನು ಸ್ಪಷ್ಟವಾಗಿ ವಿವರಿಸಲಾಗಿತ್ತು. ಬಹುಶಃ ಈ ವಿವರಣೆಯು 1947ರಲ್ಲಿ ಪಂಡಿತ್ ನೆಹರುರವರ - "ಅಣುಶಕ್ತಿಯನ್ನು ಎಲ್ಲಾ ಉದ್ದೇಶಗಳಿಗಾಗಿ ಅಭಿವೃದ್ಧಿ ಪಡಿಸಬೇಕು" ಎಂಬ ಟಿಪ್ಪಣಿಯನ್ನು ಆಧರಿಸಿತ್ತು. ನೆಹರು ಮತ್ತು ವಿಜ್ಞಾನಿ ಬಾಬಾ ಅವರು ಭಾರತದ ಅಣುಶಕ್ತಿ ಯೋಜನೆಯ ಶಿಲ್ಪಿಗಳು. ಪ್ರಧಾನ ಮಂತ್ರಿಯಲ್ಲದೆ ನೆಹರು ಅವರು ಅಣುಶಕ್ತಿ ಇಲಾಖೆಯ ಮಂತ್ರಿಗಳೂ ಆಗಿದ್ದರು ಮತ್ತು ಬಾಬಾ ಅವರು AECಯ ಚೇರ್ಮನ್ ಅಲ್ಲದೆ ಅಣುಶಕ್ತಿ ಇಲಾಖೆಯ ಕಾರ್ಯದರ್ಶಿಗಳೂ ಆಗಿದ್ದರು.

ಮಿಲಿಟರಿ ಉದ್ದೇಶಗಳಿಗಾಗಿ ಅಣುಶಕ್ತಿಯನ್ನು ಬಳಸಿಕೊಳ್ಳುವ ಸಾಧ್ಯತೆಯನ್ನು ಒಂದು ಕಾರ್ಯ ನೀತಿಯ ಆಯ್ಕೆಯಾಗಿ ಮಾಡಿಕೊಂಡದ್ದು ನೆಹರು ಕಾಲದಲ್ಲಿ. 1960ರಲ್ಲಿ ನೆಹರುರವರು ಲೋಕಸಭೆಯಲ್ಲಿ ಈ ಹೇಳಿಕೆ ನೀಡಿದರು - "ಇಲ್ಲಿಯವರೆಗೆ ನಾವು ಅಣುಬಾಂಬ್ ತಯಾರಿಕೆಯ ಕುರಿತು ದೃಢ ನಿಲುವು ತೆಗೆದುಕೊಂಡಿದ್ದೆವು. ಆದರೆ ಈ ಹೊಸಶಕ್ತಿಯ ಬೆಳವಣಿಗೆಯಲ್ಲಿ ನಾವು ಹಿಂದೆ ಬೀಳಬಾರದು ಎಂಬ ಬಗ್ಗೆಯೂ ನಮ್ಮ ನಿಲುವು ದೃಢವಾಗಿದೆ." 2 ವರ್ಷಗಳ ನಂತರ ಅಣುಶಕ್ತಿ ವಿಶಯ ಕುರಿತು ಬಾಬಾ ಅವರಿಗೆ ಬರೆದ ಟಿಪ್ಪಣಿಯಲ್ಲಿ ನೆಹರುರವರು 'ಶಕ್ತಿ ಸ್ಥಾವರ ಸ್ಥಾಪನೆ ಮತ್ತು ವಿದ್ಯುತ್‌ಚ್ಛಕ್ತಿ ಉತ್ಪಾದನೆಯಲ್ಲದೆ ಅವಶ್ಯಕತೆಬಂದಾಗ ರಕ್ಷಣೆಯ ಉದ್ದೇಶಕ್ಕಾಗಿ ಬಳಸಿಕೊಳ್ಳಬಹುದಾದ ಸಾಧ್ಯತೆಯನ್ನು ಪರಿಗಣಿಸಬೇಕು" ಎಂದು ಬರೆದರು. 1964ರಲ್ಲಿ ಟ್ರಾಂಬೆಯಲ್ಲಿ ಪೂರ್ಣಗೊಂಡ ಪ್ಲುಟೋನಿಯಂ ತೆಗೆಯುವ ಸ್ಥಾವರವು, ಭಾರತದ ಅಣುಶಕ್ತಿ ಯೋಜನೆಯು ಶಸ್ತ್ರಾಸ್ತ್ರಗಳ ತಯಾರಿಕೆ ವಿಭಾಗವನ್ನ, ತನ್ನ ಮೊದಲ ಹಂತದಲ್ಲೆ ಹೊಂದಿತ್ತೆಂಬುದನ್ನು ತಿಳಿಸುತ್ತದೆ. ಪೋಕ್ರಾನ್‌ನಲ್ಲಿ 1974ರಲ್ಲಿ ನಡೆಸಿದ ಅಣ್ವಸ್ತ್ರ ಸ್ಫೋಟಕ್ಕೆ ಬಳಸಲಾದ ಪ್ಲುಟೋನಿಯಂ ಬಂದದು ಈ ಸ್ಥಾವರದಿಂದಲೇ. ನಂತರ ಇನ್ನೆರಡು ಪ್ಲುಟೋನಿಯಂ ಸ್ಥಾವರಗಳನ್ನು ತಾರಪುರ ಮತ್ತು ಕಲ್ಪಾಕಂನಲ್ಲಿ ಸ್ಥಾಪಿಸಲಾಯ್ತು. 1964ರಲ್ಲಿ ಚೀನಾ ನಡೆಸಿದ ಅಣ್ವಸ್ತ್ರ ಪರೀಕ್ಷೆಯು, ಭಾರತವು ತನ್ನದೇ ಅಣ್ವಸ್ತ್ರ ಪರೀಕ್ಷೆ ನಡೆಸುವ ಸಿದ್ಧತೆಗೆ ಉತ್ತೇಜಿಸಿತು. ಭಾರತದ ಅಣುಶಕ್ತಿ ಆಯ್ಕೆ (India's nuclear option - ನ್ಯೂಯಾರ್ಕ್ 1976) ಪುಸ್ತಕದ ಲೇಖಕರಾದ ಕಪೂರ್ ಅವರ ಪ್ರಕಾರ - 1965ರ ಕೊನೆಯಲ್ಲಿ ಅಂದಿನ ಭಾರತದ ಪ್ರಧಾನ ಮಂತ್ರಿಯಾಗಿದ್ದ ಶಾಸ್ತ್ರಿಯವರು, ಭೂಮಿಯೊಳಗೆ ಅಣ್ವಸ್ತ್ರ ಸ್ಫೋಟಿಸುವ ಬಾಬಾರವರ ಯೋಜನೆಗೆ ಸಮ್ಮತಿ ನೀಡಿದರು. ಇನ್ನೆರಡು ಕಾಂಗ್ರೆಸ್ ಸರಕಾರಗಳು 1981 ಮತ್ತು 1995ರಲ್ಲಿ ಅಣ್ವಸ್ತ್ರ ಪರೀಕ್ಷೆ ನಡೆಸಲು ಯೋಚಿಸಿದ್ದವೆಂದು ವರದಿಯಾಗಿವೆ. ಆದರೆ ಅಮೆರಿಕ ಸರ್ಕಾರದ ಒಡಂಬಡಿಕೆಯಿಂದಾಗಿ ಅದು ಸಾಧ್ಯವಾಗಲಿಲ್ಲ. ಅಣುಶಕ್ತಿ ವಿಷಯ ಕುರಿತು ಬಿ.ಜೆ.ಪಿ.ಯ ನಿಲುವು ಇತರೆ ಯಾವ ಪಕ್ಷಗಳಿಗಿಂತಲೂ ಕಠೋರವಾದುದು. ಬಿ.ಜೆ.ಪಿ. ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಅಣ್ವಸ್ತ್ರ ಉಪಯೋಗದ ಪರವಾಗಿರುವುದಾಗಿ ಹೇಳಿತ್ತು. ಹಾಗು ಅದನ್ನು ಸಾಮಾನ್ಯ ರಾಷ್ಟ್ರೀಯ ಕಾರ್ಯಕ್ರಮದ ಭಾಗವಾಗಿಸಲು ಮೈತ್ರಿ ಪಕ್ಷಗಳನ್ನು ಒಪ್ಪಿಸುವಲ್ಲಿ ಸಫಲವಾಗಿತ್ತು. ಆದರೂ ಇತ್ತೀಚಿನ ಪರೀಕ್ಷೆಗಳು ಅನೇಕರ ಆಶ್ಚರ್ಯಕ್ಕೆ ಕಾರಣವಾಯ್ತು. ಅಧಿಕಾರಕ್ಕೆ ಬಂದ ಎರಡೇ ತಿಂಗಳಲ್ಲಿ ವಿಜ್ಞಾನಿಗಳಿಗೆ ತಮ್ಮ ಕೆಲಸ ಮುಂದುವರೆಸಲು ಸಮ್ಮತಿಸಿದ್ದನ್ನು ಕೆಲವರಾದರೂ (ಇದ್ದರೆ) ನಿರೀಕ್ಷಿಸಿರಲಿಲ್ಲ. ಈ ಹಿನ್ನೆಲೆಯಲ್ಲಿ ಅಣ್ವಸ್ತ್ರ ಪರೀಕ್ಷೆಯು, ತನ್ನ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ಬಿ.ಜೆ.ಪಿ. ನಾಯಕರುಗಳು ನಡೆಸಿದ ಪೂರ್ವಸಿದ್ಧತೆ ಎಂಬುದನ್ನು ತಿಳಿಸುತ್ತದೆ. ತನ್ನೊಂದಿಗಿದ್ದ ವಿಭಿನ್ನ ಮೈತ್ರಿಕೂಟಗಳ ಒತ್ತಡವು ಬಿ.ಜೆ.ಪಿ.ಗೆ ಸಮಸ್ಯೆಯಾಗಿತ್ತು. ರಕ್ಷಣಾ ಮಂತ್ರಿ ಜಾರ್ಜ್ ಫರ್ನಾಂಡಿಸ್

ಅವರು ಚೈನಾದಿಂದ ಬರಬಹುದಾದ ಬೀತಿ ಕುರಿತು ಹೇಳಿಕೆ ನೀಡಿದ್ದು ಬಿಜೆಪಿ ಕಾರ್ಯತಂತ್ರಕ್ಕೆ ಸರಿಯಾಗಿ ಹೊಂದಿಕೊಂಡಿತು. ವಾಜ್‌ಪೇಯಿ ಬಿಲ್‌ಕ್ಲಿಂಟನ್‌ಗೆ ಬರೆದ ಪತ್ರದಲ್ಲಿ, ಚೈನಾದಿಂದ ಬರಹುದಾದ ಬೆದರಿಕೆ ಕುರಿತು ಒತ್ತಿ ಹೇಳಿ ಅದೆ ಭಾರತದ ಅಣ್ವಸ್ತ್ರ ಪರೀಕ್ಷೆಗೆ ಮೂಲಕಾರಣವೆಂದು ಬರೆದಿದ್ದರು. ನಂತರ ಚೈನಾದೊಂದಿಗಿನ ಸಂಬಂಧ ಸುಧಾರಿಸುತ್ತಿದೆ ಎಂಬ ಹೇಳಿಕೆ ನೀಡಿದ್ದು ಅವರ ದ್ವಂದ್ವ ಮಾತಿಗೆ ಒಳ್ಳೆ ಉದಾಹರಣೆ. ಇದು, ಬಿಜೆಪಿ ತಕ್ಷಣವೇ ಅಣ್ವಸ್ತ್ರ ಪರೀಕ್ಷೆ ಕೈಗೊಂಡಿದ್ದು ತನ್ನ ಸದ್ಯದ ಪರಿಸ್ಥಿತಿಯನ್ನು ಕ್ರೂಡಿಕರಿಸಿಕೊಳ್ಳುವದಾಗಿತ್ತೆಯೇ ವಿನಹಃ ಪಕ್ಷದ ವಕ್ತಾರರು ಹೇಳುತ್ತಿರುವಂತೆ ರಾಷ್ಟ್ರೀಯ ಭದ್ರತೆಯ ಪ್ರಶ್ನೆಯಲ್ಲ ಎಂಬುದನ್ನು ತಿಳಿಸುತ್ತದೆ.

**ಅಣ್ವಸ್ತ್ರ ಪರೀಕ್ಷೆಯ ನಂತರದ ಪರಿಣಾಮಗಳು**

ಆಸ್ಪೋಟ ಕುರಿತು ಸಾರ್ವಜನಿಕರ ಪ್ರತಿಕ್ರಿಯೆ ಕುತೂಹಲಕಾರಿ. ಮುಖ್ಯವಾಹಿನಿಯಲ್ಲಿರುವ ಎಲ್ಲಾ ರಾಜಕೀಯ ಪಕ್ಷಗಳು ಬಾಂಬ್ ಅನ್ನು ರಾಷ್ಟ್ರೀಯ ಹೆಮ್ಮೆಯ ಪ್ರತೀಕವಾಗಿಸಿದ್ದರಿಂದ ಜನರ ಪ್ರತಿಕ್ರಿಯೆ ಆಶ್ಚರ್ಯವೇನಲ್ಲ. ದೇಶಾದ್ಯಂತ ಪ್ರತಿಷ್ಠೆ ಹಮ್ಮಿನ ಅಲೆಯನ್ನು ಮೂಡಿಸಿದ ಕೀರ್ತಿಯಿಂದ ಬಿ.ಜೆ.ಪಿ. ಬೀಗಿತು. ಸ್ವತಃ ವಾಜಪೇಯಿಯವರೇ ಅಣ್ವಸ್ತ್ರ ಪರೀಕ್ಷೆಯನ್ನು ಮಹಾನ್ ವೈಜ್ಞಾನಿಕ ಸಾಧನೆಯೆಂದು ಶ್ಲಾಘಿಸಿದರು. 'ಜೈ ವಿಜ್ಞಾನ್' ಎಂಬ ಹೊಸ ನುಡಿಕಟ್ಟನ್ನು ನೀಡಿದರು. ಇದನ್ನೇ ಇತರ ವಿರೋಧ ಪಕ್ಷಗಳು ಪ್ರತಿಧ್ವನಿಸಿದವು- ಕೆಲವರು ಇನ್ನೂ ಮುಂದುವರೆದು, ಪರೀಕ್ಷೆಗೆ ತಮ್ಮ ಬೆಂಬಲ ಸೂಚಿಸಿದರು. ಭಾರತ ಮತ್ತು ನೆರೆರಾಷ್ಟ್ರಗಳೊಂದಿಗೆ ಶಾಂತಿಯುತ ಬಾಳ್ವೆ ಸಾಧ್ಯವಾಗಬೇಕೆಂಬ ಸಿದ್ಧಾಂತದ ಪ್ರತಿಪಾದಕ ಹಿಂದಿನ ಪ್ರಧಾನಿ ಗುಜ್ರಾಲ್ ಅವರು ಸಹ ಪರೀಕ್ಷೆಯನ್ನು ಬೆಂಬಲಿಸಿದರು. ಪರೀಕ್ಷೆಗಳು ಭದ್ರತೆಯ ಕಾರಣಕ್ಕೆ ಭಾರತಕ್ಕೆ ಅಗತ್ಯವಾಗಿದೆಯೆಂಬ ವಿವರಣೆ ನೀಡಿದರು. ಪ್ರತಿಷ್ಠೆಯ ಅಮಲಿನಲ್ಲಿ ಬಿಜೆಪಿ ನಾಯಕರುಗಳು ಭಾರತ ಜಾಗತಿಕ ಶಕ್ತಿಯಾಗುವುದರಲ್ಲಿದೆ ಎಂದು ಸಾರಿಕೊಂಡರು. ಗೃಹ ಮಂತ್ರಿ ಅದ್ವಾನಿಯವರು ಭಾರತದ ಅಣುಶಕ್ತಿ ಸಾಧ್ಯತೆಗಳನ್ನು ಕಾಶ್ಮೀರದ ಪ್ರಶ್ನೆಯೊಂದಿಗೆ ತಳಕು ಹಾಕಿ ಪಾಕಿಸ್ತಾನಕ್ಕೆ ಬೆದರಿಕೆ ಹಾಕಿದರು. ಸಂಸದೀಯ ವಿಷಯಗಳ ಮಂತ್ರಿ ಮದನ್‌ಲಾಲ್ ಖುರಾನ ಅವರು "ಪಾಕಿಸ್ತಾನಕ್ಕೆ 4ನೇ ಯುದ್ಧ ಬೇಕಿದ್ದರೆ, ಜಾಗ ಮತ್ತು ವೇಳೆಯನ್ನು ಅವರು ತಿಳಿಸಲಿ ನಾವಲ್ಲಿರುತ್ತೇವೆ ಎಂದು ಕೆಣಕುವ ಸವಾಲು ಹಾಕಿದರು. ಕೆಲವು ರಾಜಕೀಯ ಪಕ್ಷಗಳು ಬಿಜೆಪಿಯ ನ್ಯೂಕ್ಲಿಯರ್ ಆಕ್ರಮಣಕಾರಿ ನೀತಿಯನ್ನು ಮೆತುವಾಗಿ ವಿರೋಧಿಸಿದವು.

ಬಿಜೆಪಿ ಮೈತ್ರಿ ಸರ್ಕಾರವು ಅಣ್ವಸ್ತ್ರಗಳನ್ನು ಬೆಳೆಸುವ ಉಪಯೋಗಿಸುವ ತಮ್ಮ ನಿಲುವನ್ನು ಸ್ಪಷ್ಟಪಡಿಸಿತು. ಇದು ಭಾರತ ಮತ್ತು ಪಾಕಿಸ್ತಾನದ ನಡುವೆ ಶಸ್ತ್ರಾಸ್ತ್ರ ಪೈಪೋಟಿಯನ್ನು ಹುಟ್ಟುಹಾಕುವುದರಲ್ಲಿ ಸಂಶಯವಿಲ್ಲ. ಅಲ್ಲದೆ ಅಣ್ವಸ್ತ್ರ ಯುದ್ಧಕ್ಕೂ ದಾರಿಮಾಡಿಕೊಟ್ಟು ಎರಡೂ ದೇಶಗಳಲ್ಲಿ ಮಾರಣಹೋಮಕ್ಕೆ ದಾರಿ ಮಾಡಿಕೊಡುತ್ತದೆ. ಆದ್ದರಿಂದ ರಾಜಕೀಯ ಸಾಧ್ಯತೆಯ ಮೂಲಕ ಎರಡು ದೇಶಗಳ ನಡುವಿರುವ ತಿಕ್ಕಾಟದ ಮೂಲಗಳನ್ನು ಕಡಿಮೆಗೊಳಿಸುವದು ಮುಖ್ಯ ವಾಗುತ್ತದೆ. ಈ ಸಂದರ್ಭದಲ್ಲಿ ಕಾಶ್ಮೀರ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದು ವಿಶೇಷ ಮಹತ್ವ ಪಡೆಯುತ್ತದೆ. ಈ ಸಮಸ್ಯೆಗಿರುವ ನ್ಯಾಯಯುತ ಪರಿಹಾರವೆಂದರೆ ಕಾಶ್ಮೀರದ ಜನರ ಆತ್ಮ ಗೌರವದ ಹಕ್ಕನ್ನು ಒಳಗೊಳ್ಳುವುದು.

ಅಣು ಬೆದರಿಕೆ ಸಿದ್ಧಾಂತವನ್ನು ಎರಡೂ ದೇಶಗಳಲ್ಲಿನ ತಂತ್ರ-ವಿಶ್ಲೇಷಣಾಕಾರರು ಮುಂದಿಡುತ್ತಿದ್ದಾರೆ. ಇದು, ಎರಡೂ ದೇಶಗಳು ಸಾಕಷ್ಟು ಅಣ್ವಸ್ತ್ರಗಳನ್ನು ಹೊಂದಿದಲ್ಲಿ ಒಂದು ದೇಶ ಇನ್ನೊಂದು ದೇಶದ ಮೇಲೆ ಆಕ್ರಮಣ ಮಾಡಲು ಮರು ಆಕ್ರಮಣದ ಬೆದರಿಕೆಯಿಂದಾಗಿ ಸುಮ್ಮನಿರುತ್ತದೆ ಎಂಬ ಕಲ್ಪನೆಯನ್ನು ಆಧರಿಸಿದೆ. ಈ ರೀತಿ ಅಣ್ವಸ್ತ್ರಯುದ್ಧಗಳನ್ನು ತಡೆಯುವ ವಿಧಾನದಲ್ಲಿ ಅನೇಕ ದೋಷಗಳಿವೆ. ಮೊದಲಿಗೆ ಈ ವಿಧಾನವು ಅಪಘಾತಗಳು ಹುಟ್ಟುಹಾಕುವ ಸಾಧ್ಯತೆಗಳನ್ನು ಪರಿಗಣಿಸುವುದಿಲ್ಲ ಅಥವಾ ಆಜ್ಞೆ ಹತೋಟಿ, ಸಂವಹನ ಮತ್ತು ಇಂಟೆಲಿಜೆನ್ಸ್ ವ್ಯವಸ್ಥೆಗಳಲ್ಲಿನ ದೋಷಗಳನ್ನು ಗಮನಿಸುವುದಿಲ್ಲ. ಎರಡನೆಯದಾಗಿ ಪೈಪೋಟಿಯಲ್ಲಿ ಒಬ್ಬರನ್ನೊಬ್ಬರು ಮೀರಿಸುವ ಹಂತದಲ್ಲಿ, ಲೇಸರ್ ಅಥವಾ ಅಣು ಕಿರಣಗಳ ಮೂಲಕ ತಮ್ಮದೇ ಶಕ್ತಿ ಶಸ್ತ್ರಾಸ್ತ್ರಗಳನ್ನು ಸ್ಥಾಪಿಸಿ ತಮ್ಮ ದೇಶಕ್ಕೆ ಗುರಿಮಾಡಿರುವ ಕ್ಷಿಪಣಿಗಳನ್ನು ನಾಶಪಡಿಸುವ ಸಾಧ್ಯತೆಯನ್ನು ಇದು ಪರಿಗಣಿಸುವುದಿಲ್ಲ. ಅಣುಬೆದರಿಕೆ ನೀತಿಗೆ ಅನೇಕ ಮಿತಿಗಳಿವೆ ಎಂಬುದನ್ನು ಇತಿಹಾಸ ಸಾಬೀತು ಪಡಿಸಿದೆ. 1977 ಮತ್ತು 1984ರ ನಡುವೆ ಅಮೇರಿಕದಲ್ಲಿ ಮುನ್ನೆಚ್ಚರಿಕೆ ನೀಡುವ ರಡಾರ್ ಸಿಸ್ಟಂಗಳು ಸುಮಾರು 2000 ಸುಳ್ಳು ಅಲಾರಂಗಳನ್ನು ಸೂಚಿಸಿತು. (ಅಮೇರಿಕದ ಮೇಲಿನ ಕ್ಷಿಪಣಿದಾಳಿ ಕುರಿತು) ಅವುಗಳಲ್ಲಿ 1000ಕ್ಕು ಹೆಚ್ಚನ್ನು ಅಣುಬಾಂಬ್ ಹಾಕುವ ವ್ಯವಸ್ಥೆಯ ಚಾಲನೆಗೆ ಎಚ್ಚರಿಕೆ ನೀಡುವಷ್ಟು ಗಂಭೀರವಾಗಿ ಪರಿಗಣಿಸಲಾಗಿತ್ತು.

ಅಮೇರಿಕ ಸೇರಿದಂತೆ ಐದು ಅಣ್ವಸ್ತ್ರ ರಾಷ್ಟ್ರಗಳು ತಮ್ಮಲ್ಲಿ ಬೃಹತ್ ಅಣ್ವಸ್ತ್ರಗಳನ್ನು ತುಂಬಿಕೊಂಡು, ಭಾರತ ಮತ್ತು

ಪಾಕಿಸ್ತಾನದ ಅಣ್ವಸ್ತ್ರ ಪರೀಕ್ಷೆಗಳನ್ನು ಖಂಡಿಸಿರುವುದು ಆ ದೇಶಗಳ ಕಪಟನೀತಿಯನ್ನು ತೋರಿಸುತ್ತದೆ. ಅಣ್ವಸ್ತ್ರ ಉತ್ಪಾದನ ನಿಷೇಧ ಒಪ್ಪಂದ[1] (Nuclear Non-Prolifiration Treaty)ಯ ಆರ್ಟಿಕಲ್ 6ರ ತದ್ವಿರುದ್ಧವಾಗಿ ಈ ದೇಶಗಳು ತಮ್ಮ ದೇಶದಲ್ಲಿರುವ ಅಣ್ವಸ್ತ್ರಗಳನ್ನು ಕಡಿಮೆ ಮಾಡಲು ಯಾವ ಪ್ರಯತ್ನವನ್ನೂ ಮಾಡಿಲ್ಲ. ಇದನ್ನು ಬಳಸಿಕೊಂಡು ಭಾರತ ಅಣ್ವಸ್ತ್ರ ಉತ್ಪಾದನ ನಿಷೇಧ, ಅಣ್ವಸ್ತ್ರ ಪರೀಕ್ಷೆ ನಿಷೇಧ ಒಪ್ಪಂದ (Comprehensive test ban treaty)[2]ಕ್ಕೆ ಸಹಿ ಹಾಕಲು ನಿರಾಕರಿಸುತ್ತಿದೆ. ಅಣ್ವಸ್ತ್ರ ಪರೀಕ್ಷೆ ನಿಷೇಧಕ್ಕೆ ಸಹಿ ಹಾಕದಿರಲು ಭಾರತ ನೀಡುತ್ತಿರುವ ಮತ್ತೊಂದು ಕಾರಣವೆಂದರೆ ಈ ಒಪ್ಪಂದವು ಭೂಮಿಯೊಳಗೆ ನಡೆಸುವ ಅಣ್ವಸ್ತ್ರ ಪರೀಕ್ಷೆಯನ್ನು ನಿಷೇಧಿಸುತ್ತದೆ. ಆದರೆ ಕಂಪ್ಯೂಟರ್‌ಗಳ ಮೂಲಕ ನಡೆಸುವ ಪರೀಕ್ಷೆಗಳಿಗೆ ಎಡೆಮಾಡಿಕೊಡುತ್ತದೆ. ಈ ಆಪಾದನೆಯಲ್ಲಿ ಹುರುಳಿದೆ. Stockfile Stewarship Programme and Management (SSPM)[3] ಅಡಿಯಲ್ಲಿ ಅಮೇರಿಕವು, ಜಗತ್ತಿನ ಅತ್ಯಂತ ತೀಕ್ಷ್ಣ ಪ್ರಬಲ ಕಂಪ್ಯೂಟರ್‌ಗಳನ್ನು ಬಳಸಿಕೊಂಡು ಹೊಸ ಯುದ್ಧ ಅಣ್ವಸ್ತ್ರಗಳನ್ನು ತಯಾರಿಸಲು 60 ಬಿಲಿಯನ್ ಡಾಲರ್‌ಗಳ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಇದರ ಜೊತೆಗೆ ಜಗತ್ತಿನ ಅತ್ಯಂತ ತೀಕ್ಷ್ಣವಾದ ಲೇಸರ್ ಬಳಸಿ ಜಲಜನಕ ಬಾಂಬ್ ಆಸ್ಫೋಟವನ್ನು ಉದ್ದೀಪಿಸುವ ಲೇಸರ್ ಸಂಶೋಧನೆಗಳನ್ನು ಸಂಶೋಧನಾಲಯಗಳಲ್ಲಿ ನಡೆಸುವ ಸಾಧ್ಯತೆಗೂ SSPM ಸಹಾಯಕವಾಗಿದೆ. ಹೇಗೆಂದರು ಅಣ್ವಸ್ತ್ರ ಪರೀಕ್ಷೆ ನಿಷೇಧ ಒಪ್ಪಂದ ಕುರಿತ ಭಾರತದ ವಿರೋಧವು ಯಾವ ನೈತಿಕ ತತ್ವಗಳನ್ನು ಆಧರಿಸಿಲ್ಲ. ಭಾರತವನ್ನು ಅಣ್ವಸ್ತ್ರ ರಾಷ್ಟ್ರವನ್ನಾಗಿ ಗುರುತಿಸುವುದಾದರೆ ಅಣ್ವಸ್ತ್ರ ಪರೀಕ್ಷೆ ನಿಷೇಧ ಒಪ್ಪಂದಕ್ಕೆ ಸಹಿ ಹಾಕುವುದನ್ನು ಪರಿಗಣಿಸಬಹುದೆಂಬ ಅಭಿಪ್ರಾಯವನ್ನು ಅನೇಕ ಭಾರತೀಯ ಅಧಿಕಾರಿಗಳು ವ್ಯಕ್ತ ಪಡಿಸಿದ್ದಾರೆ. ಅಂದರೆ ಐದು ಅಣ್ವಸ್ತ್ರ ರಾಷ್ಟ್ರಗಳ (ಅಮೇರಿಕಾ, ರಷ್ಯಾ, ಯುನೈಟೆಡ್ ಕಿಂಗ್‌ಡಂ, ಫ್ರಾನ್ಸ್ ಮತ್ತು ಚೈನಾ) ಅಣ್ವಸ್ತ್ರ ಸಂಘಕ್ಕೆ ತನ್ನನ್ನು ಸೇರಿಸಿಕೊಳ್ಳಬೇಕೆಂಬುದು. ಇದು ಅಣ್ವಸ್ತ್ರಗಳ ಯೋಜನೆಯನ್ನು ಮುಂದುವರೆಸಿಕೊಂಡು ಹೋಗಲು ಭಾರತಕ್ಕಿರುವ ಆಸಕ್ತಿಯನ್ನು ತೋರಿಸುತ್ತದೆಯೇ ಹೊರತು ಅಂತರರಾಷ್ಟ್ರೀಯ ಅಣು ಸಂಬಂಧಿ ಕಾರ್ಯಕ್ರಮದಲ್ಲಿನ ತಾರತಮ್ಯ ಕುರಿತು ಪ್ರಾಮಾಣಿಕ ವಿರೋಧವನ್ನಲ್ಲ.

ಭಾರತ ಮತ್ತು ಪಾಕಿಸ್ತಾನದ ಮೇಲೆ ನಿರ್ಬಂಧ ಹೇರಿರುವ 8 ರಾಷ್ಟ್ರಗಳನ್ನು ಖಂಡಿಸಬೇಕು. ನಿರ್ಬಂಧ ಹೇರುವ ಮೂಲಕ, ಈಗಿನ ಅಂತರರಾಷ್ಟ್ರೀಯ ಕ್ರಮ ಅಥವಾ ಅಮೇರಿಕದ ಜಾಗತಿಕ ಅಧಿಕಾರವನ್ನು ವಿರೋಧಿಸುವ ಪ್ರಯತ್ನ ಮಾಡಿದವರು ಶಿಕ್ಷಿಸಲ್ಪಡುತ್ತಾರೆ ಎಂಬ ಸಂಕೇತಗಳನ್ನು ಮೂರನೆ ಜಗತ್ತಿನ ದೇಶಗಳಿಗೆ ಮುಟ್ಟಿಸಲಾಗುತ್ತಿದೆ. ಇದರರ್ಥ ಮೂರನೆ ಜಗತ್ತಿನ ದೇಶಗಳು ಅಣ್ವಸ್ತ್ರದಾರಿಯನ್ನು ಹಿಡಿಯಬೇಕೆಂಬುದಲ್ಲ. ಬದಲಾಗಿ ಅಣ್ವಸ್ತ್ರಗಳ ಬೆಳವಣಿಗೆ ಮತ್ತು ಪರೀಕ್ಷೆಗಳು ಪ್ರಯೋಜನಕಾರಿಯಲ್ಲವೆಂಬುದನ್ನು ತಿಳಿದುಕೊಳ್ಳಬೇಕು ಮತ್ತು ಆರ್ಥಿಕ ಮಾರ್ಗವನ್ನು ಅನುಸರಿಸುವ ಬಗ್ಗೆ ಗಂಭೀರವಾಗಿ ಆಲೋಚಿಸಬೇಕು. ಆ ಮೂಲಕ ಸಾಮ್ರಾಜ್ಯಶಾಹಿಗಳ ಹಿಡಿತದಲ್ಲಿರುವ ವಿಶ್ವ ಬ್ಯಾಂಕ್ ಮತ್ತು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯಂತಹ ಸಂಸ್ಥೆಗಳ ಮೇಲಿನ ಅವಲಂಬನೆಯನ್ನು ನಿವಾರಿಸಿಕೊಳ್ಳಬೇಕು.

ಭಾರತದಲ್ಲಿ ಅಣ್ವಸ್ತ್ರ ಪೈಪೋಟಿಯು ಹುಟ್ಟುಹಾಕುವ ಆರ್ಥಿಕ ಪರಿಣಾಮಗಳು ಅಪತ್ಕಾರಿ. ಚೈನಾದಲ್ಲಿ ಕೂಡಿಟ್ಟಿರುವ ಅಣ್ವಸ್ತ್ರಗಳಿಗೆ ಸಮನಾಗುವ ಭಾರತದ ಪ್ರಯತ್ನ ಇನ್ನೂ ಗಂಡಾಂತಕಾರಿಯಾಗಬಹುದು. ಸಮರ್ಪಕ ವ್ಯವಸ್ಥೆಯುಳ್ಳ ಕನಿಷ್ಠ ವಿಘ್ನಕಾರಿ ಅಣ್ವಸ್ತ್ರಗಳಿಗೆ ತಗುಲುವ ವೆಚ್ಚ 2000ಕೋಟಿ, ಸ್ಥಾಪಿಸಲು 15 ವರ್ಷಗಳು ಬೇಕು. ಜೊತೆಗೆ ಅವುಗಳ ನಿರ್ವಹಣೆ ವೆಚ್ಚ. ಇದರಲ್ಲಿ ಆಜ್ಞೆ, ಹತೋಟಿ ಮತ್ತು ಇಂಟೆಲಿಜೆನ್ಸ್ ವ್ಯವಸ್ಥೆಗಳಿಗೆ ತಗುಲುವ ವೆಚ್ಚ ಒಳಗೊಂಡಿಲ್ಲ. ಅಷ್ಟು ದೊಡ್ಡ ಮೊತ್ತವನ್ನು ಅಣ್ವಸ್ತ್ರಗಳಿಗೆ ವ್ಯಯಮಾಡಲು ಸಾಧ್ಯವಾಗುವುದು ಮೂಲಭೂತ ಮಾನವ ಅಗತ್ಯಗಳ ವೆಚ್ಚಕ್ಕೆ ಬದಲಿಗೆ. ಇದರ ಜೊತೆಗೆ ಭಾರತದಲ್ಲಿ ಕಳೆದ ಕೆಲವು ವರ್ಷಗಳಲ್ಲಿ ಕಂಡು ಬರುತ್ತಿರುವ ಹೊಸ ಉದಾರವಾದಿ ನೀತಿ (neo liberal line) ಹೆಚ್ಚಿನ ಬಡತನ ಮತ್ತು ಕೊರತೆ (deprivation)ಗೆ ಕಾರಣವಾಗುತ್ತದೆ. ಈ ವರ್ಷದ ಬಜೆಟ್‌ನಲ್ಲಿ ಮೂರು ಅಣು ಸಂಬಂಧಿ ಇಲಾಖೆಗಳಾದ ಅಣುಶಕ್ತಿ ಇಲಾಖೆ (Department of atomic energy) ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಇಲಾಖೆ (Defence research and development organisation) ಮತ್ತು ಬಾಹ್ಯಾಕಾಶ ಇಲಾಖೆ (Department of Space)ಗಳಿಗೆ ವೆಚ್ಚವನ್ನು ಗಣನೀಯವಾಗಿ ಹೆಚ್ಚಿಸಲಾಗಿದೆ. DAEಗೆ 2600ಕೋಟಿ ಅಂದರೆ 30%ನಷ್ಟು ಹೆಚ್ಚಳ, ಇಡಿ ಇತಿಹಾಸದಲ್ಲೆ ಇದು ಹೆಚ್ಚಿನ ಹೆಚ್ಚಳ. DRDO ಮತ್ತು DOSಗೆ ಕ್ರಮವಾಗಿ 2500ಕೋಟಿ ಮತ್ತು 1600 ಕೋಟಿ ನೀಡಲಾಗಿದೆ. ಅಂದರೆ

ಕ್ರಮವಾಗಿ 24% ಮತ್ತು 52% ನಷ್ಟು ಹೆಚ್ಚಳ. ಈ ಮೂರು ಇಲಾಖೆಗಳು (Nuclear weapons & delivery sys) ಅಣ್ವಸ್ತ್ರ ಮತ್ತು ಅವುಗಳ ಬಟವಾಡೆ ವ್ಯವಸ್ಥೆಯೊಂದಿಗೆ ನೇರ ಸಂಬಂಧ ಹೊಂದಿದೆ.

**ಅಣ್ವಸ್ತ್ರ ಸಂಬಂಧಿ ವೈಜ್ಞಾನಿಕ ವಿಷಯಗಳು :**

ಅಣ್ವಸ್ತ್ರಗಳಿಗೆ ಸಂಬಂಧಿಸಿದ ವೈಜ್ಞಾನಿಕ ವಿಷಯಗಳನ್ನು ಪರಿಗಣಿಸದೆ ಯಾವುದೇ ವಿಶ್ಲೇಷಣೆಯು ಪೂರ್ಣವೆನಿಸಿಕೊಳ್ಳುವುದಿಲ್ಲ. ಬಿಜೆಪಿ ಮುಂದಾಳತ್ವದ ಸರ್ಕಾರ ಮತ್ತು CPI ಮತ್ತು CPI(M) ಸೇರಿದಂತೆ ಇತರ ವಿರೋಧ ಪಕ್ಷಗಳು ಅಣ್ವಸ್ತ್ರ ಪರೀಕ್ಷೆಗಳನ್ನು "ವೈಜ್ಞಾನಿಕ ಸಾಧನೆ"ಯೆಂದು ಶ್ಲಾಘಿಸಿದ್ದು ನಾಚಿಕೆಗೇಡು. ಇದೆ ತರ್ಕವನ್ನಿಟ್ಟುಕೊಂಡರೆ ಹಿರೋಶಿಮಾ ಮತ್ತು ನಾಗಾಸಾಕಿಯಲ್ಲಿ ಎರಡು ಲಕ್ಷ ಜನರನ್ನು ಬಲಿತೆಗೆದುಕೊಂಡ ಬಾಂಬ್‌ಗಳನ್ನು ಅಗ್ರಗಣ್ಯ ವೈಜ್ಞಾನಿಕ ಸಾಧನೆ ಎನ್ನಬೇಕಾಗುತ್ತದೆ. ಜನಸಮೂಹವನ್ನು ಧ್ವಂಸ ಮಾಡುವ ಬಾಂಬ್‌ಗಳನ್ನು ಮಾಡಿ ಪರೀಕ್ಷಿಸುವುದನ್ನು ವೈಜ್ಞಾನಿಕ ಸಾಧನೆ ಎನ್ನುವುದು ಅಸಂಬದ್ಧವೇ ಸರಿ. ಆದರೆ ಈ ಶಸ್ತ್ರಾಸ್ತ್ರಗಳನ್ನು ರಾಷ್ಟ್ರೀಯ ಭದ್ರತೆಯೊಂದಿಗೆ ತಳುಕುಹಾಕಿದಾಗ (ಭಾರತದಲ್ಲಿ ಈಗಾಗಲೆ ಆಳುವ ಸರ್ಕಾರ ಮಾಡಿರುವಂತೆ) ಅದು ಸಾಮಾನ್ಯ ಜನರಿಗೆ ಪ್ರತಿಷ್ಠೆಯ ಮೂಲವಾಗಿಬಿಡುತ್ತದೆ. ರಾಷ್ಟ್ರೀಯ ಭದ್ರತೆ ಮತ್ತು ಪ್ರಾಬಲ್ಯದಂತಹ ವಾದಗಳು ಮುಖ್ಯ ನೈತಿಕ ವಿಷಯಗಳನ್ನು ಕಡೆಗಣಿಸಲು ಒತ್ತಾಯಿಸುತ್ತವೆ. ಇದಾಗುವುದು ಈ ವಾದಗಳು ಹುಟ್ಟುಹಾಕುವ ಭಾವೋದ್ರೇಕತೆಗೆ ಜನರು ಬಲಿಯಾದಾಗ. ಬಹುಶಃ ಇದೊಂದು ಮುಖ್ಯ ಕಾರಣವೇ ಅಣ್ವಸ್ತ್ರ ತಯಾರಿಕೆಯಲ್ಲಿ ನಿರತರಾಗಿರುವ ವಿಜ್ಞಾನಿಗಳು ತಾವು ಮಾಡುತ್ತಿರುವುದನ್ನು ದೃಢವಾಗಿ ನಂಬಲು ಆಧಾರವಾಗಿರಬೇಕು. ಆಕ್ಷೇಪಣೆ ಎಂಬಂತೆ. ಕೆಲವು ವಿಜ್ಞಾನಿಗಳು ಹೃದಯ ಪರಿವರ್ತನೆ ಹೊಂದಿ ಶಸ್ತ್ರಾಸ್ತ್ರ ತಯಾರಿಕೆಯನ್ನು ಬಿಟ್ಟು, ಅವನ್ನು ವಿರೋಧಿಸಿದ ಕೆಲವೆ ಕೆಲವು ನಿದರ್ಶನಗಳಿವೆ. ಹಿರೋಶಿಮಾ ಮತ್ತು ನಾಗಾಸಾಕಿ ಘಟನೆಯು ಜಗತ್ತಿನಾದ್ಯಂತ ವಿಜ್ಞಾನಿಗಳು ಧ್ವಂಸಕಾರಿ ಯುದ್ಧಾಸ್ತ್ರಗಳ ತಯಾರಿಕೆಯಲ್ಲಿ ಪಾಲ್ಗೊಳ್ಳುವದನ್ನು ತಡೆಯಲು ಸಾಧ್ಯವಾಗಲಿಲ್ಲ.

ವಿಜ್ಞಾನಿಗಳು ಶಸ್ತ್ರಾಸ್ತ್ರ ತಯಾರಿಕೆಯಲ್ಲಿ ಪಾಲ್ಗೊಳ್ಳಲು ಇನ್ನೂ ಅನೇಕ ಕಾರಣಗಳಿವೆ. ಉದಾಹರಣೆಗೆ ಅಮೆರಿಕಾದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆಂದಿರುವ ಬಜೆಟ್‌ನಲ್ಲಿ 2/3 ಭಾಗದಷ್ಟು ಮಿಲಿಟರಿ ಸಂಬಂಧಿ ಕೆಲಸಗಳಿಗೆ ವ್ಯಯವಾಗುತ್ತದೆ. ಬಹುಪಾಲು ವಿಜ್ಞಾನಿಗಳು, ಮುಖ್ಯವಾಗಿ ತಮ್ಮ ವೃತ್ತಿಯ ಉಳಿವಿಗಾಗಿ ಅಲ್ಲಿ ಕೆಲಸ ಮಾಡುತ್ತಾರೆ. ಭಾರತದಲ್ಲಿ DAE ಮತ್ತು DRDOನಲ್ಲಿ ಕೆಲಸ ಮಾಡುವ ವಿಜ್ಞಾನಿಗಳು, ಇತರ ವಿಜ್ಞಾನ ಇಲಾಖೆಗಳಲ್ಲಿ ಕೆಲಸಮಾಡುತ್ತಿರುವ ವಿಜ್ಞಾನಿಗಳಿಗಿಂತ ಹೆಚ್ಚಿನ ಸೌಲಭ್ಯ ಮತ್ತು ಉದ್ಯೋಗ ಭದ್ರತೆಯನ್ನು ಅನುಭವಿಸುತ್ತಾರೆ. ಆ ಕಾರಣದಿಂದಲೆ ಅನೇಕ ಯುವವಿಜ್ಞಾನಿಗಳು ಅಣುಶಕ್ತಿ ಅಥವಾ ರಕ್ಷಣಾ ವಿಜ್ಞಾನ ಇಲಾಖೆಗಳನ್ನು ಸೇರಲಿಚ್ಚಿಸುತ್ತಾರೆ. ಕೇವಲ ತಂತ್ರಜ್ಞಾನದ ದೃಷ್ಟಿಯಿಂದಲೇ ಭಾರತದ ಅಣುಬಾಂಬ್‌ಗಳ ಅಭಿವೃದ್ಧಿ ಮತ್ತು ಪರೀಕ್ಷೆಗಳನ್ನು ನೋಡಿದರೂ ಸಹ ಬಾಂಬ್‌ಗಳನ್ನು ವೈಜ್ಞಾನಿಕ ಸಾಧನೆ ಎಂದು ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ. ಅವು ಒಳಗೊಂಡಿರುವ ಹೊಸ ವಿಜ್ಞಾನ ಮತ್ತು ತಂತ್ರಜ್ಞಾನ ಬಹಳ ಕಡಿಮೆ. ಅದು ಒಳಗೊಂಡಿರುವ ತಂತ್ರಜ್ಞಾನ ಹಳೆಯದು, ಹೊಸತೇನೂ ಇಲ್ಲ. ಅಣು ಆಧರಿಸಿರುವ ಮೂಲಭೂತ ವಿಷಯಗಳ ಕುರಿತು ಕಳೆದೆರಡು ದಶಮಾನದಲ್ಲಿ ಅನೇಕ ಪುಸ್ತಕ ಮತ್ತು ಲೇಖನಗಳು ಪ್ರಕಟಗೊಂಡಿವೆ.

**ಭಾರತದಲ್ಲಿನ ಅಣುಶಕ್ತಿ ವಿರೋಧಿ ಚಳುವಳಿ ಎದುರಿಸುತ್ತಿರುವ ವಿಷಯಗಳು :**

ದಕ್ಷಿಣ ಏಶಿಯಾದಲ್ಲಿ ತನ್ನ ಪ್ರಾಬಲ್ಯವನ್ನು ಹೆಚ್ಚಿಸಿಕೊಳ್ಳಲು ಸ್ವಾತಂತ್ರ್ಯ ಪಡೆದುಕೊಂಡಾಗಿನಿಂದಲೂ ಭಾರತ ಅಮೂಲ್ಯ ಆರ್ಥಿಕ ಮತ್ತು ವೈಜ್ಞಾನಿಕ ಸಂಪನ್ಮೂಲಗಳನ್ನು ವ್ಯಯಿಸುತ್ತಿದೆ. ಇತ್ತೀಚಿನ ಪರೀಕ್ಷೆಗಳು ಪ್ರಾಬಲ್ಯದ ದುರಾಶೆಯನ್ನು ಸಮರ್ಥಿಸುತ್ತವೆ. ಹಾಗೆ ಮಾಡುವ ಮೂಲಕ ಇಡೀ ಉಪ-ಖಂಡದಲ್ಲಿ ಅಸ್ಫೋಟನ ಪರಿಸ್ಥಿತಿಯನ್ನು ರೂಪಿಸಿದೆ. ಇದಕ್ಕೆ ಬಿಜೆಪಿಯೇ ಕಾರಣವೆಂದು ಅನೇಕರು ಆಪಾದಿಸುತ್ತಿದ್ದಾರೆ. ಆದರೆ ಸರಳ ಸತ್ಯವೆಂದರೆ ಎಲ್ಲಾ ಭಾರತೀಯ ಸರ್ಕಾರಗಳೂ ಅದಕ್ಕೆ ಜವಾಬ್ದಾರರು ಎಂಬುದು. ಜಪಾನಿನ ಜುನ್ಸುಯಿಕಿನ್ ಎಂಬ ಅಣುವಿರೋಧಿ ಸಂಘಟನೆಯ ಸದಸ್ಯರಾದ ಮಾಸಾಟಕಬೊ ಅವರು ಫ್ರಂಟ್‌ಲೈನ್ ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಹೀಗೆ ಹೇಳಿದ್ದಾರೆ. "ಸಾಧ್ಯತೆಯನ್ನು ಅಭಿವೃದ್ಧಿಪಡಿಸುತ್ತೇವೆ ಆದರೆ ಶಸ್ತ್ರೀಕರಣವನ್ನಲ್ಲ ಎಂದು ಹೇಳುವುದು ಅಪಾಯಕಾರಿ ಆಯ್ಕೆ. ಅಣುತಂತ್ರಜ್ಞಾನ ಒಂದು ಟೈಂಬಾಂಬ್ ಇದ್ದಂತೆ. ಅದನ್ನು ಪ್ರತಿ ಹಂತದಲ್ಲೂ ವಿರೋಧಿಸಬೇಕಾಗುತ್ತದೆ.'' ಅಂದರೆ ಅಣು ತಂತ್ರಜ್ಞಾನ ಪ್ರಾರಂಭದಿಂದ ಪ್ರತಿಹಂತದಲ್ಲೂ ಅಪಾಯಕಾರಿಯಾದುದು. ಸದ್ಯದ ಪರಿಸ್ಥಿತಿಯಲ್ಲಿ ಶಕ್ತ ಅಣು ವಿರೋಧಿ ಚಳುವಳಿಯ ತುರ್ತು ಅಗತ್ಯವಿದೆ. ಅಂತಹ ಚಳುವಳಿ ಒಟ್ಟಾರೆ ಆಳುವ ವರ್ಗಗಳನ್ನು ವಿರೋಧಿಸುವ, ನಿರ್ದಿಷ್ಟವಾಗಿ ಹಿಂದುತ್ವ ಶಕ್ತಿಗಳನ್ನು ವಿರೋಧಿಸುವ ಹೋರಾಟದಲ್ಲಿ ಮುಖ್ಯ ಭಾಗವಾಗಬೇಕು. ಅಲ್ಲದೆ ಅದು ಕಾಶ್ಮೀರದ ಜನತೆಯ ಆತ್ಮ

ಗೌರವದ ಹಕ್ಕಿಗೆ ಒತ್ತಾಯಿಸಬೇಕು. ಆ ಹಕ್ಕನ್ನು ಕಿತ್ತುಕೊಳ್ಳು ವಂತಹ ಸರ್ಕಾರದ ನಿಲುವನ್ನು ವಿರೋಧಿಸಬೇಕು.

ಭಾರತದ ಅಣುಶಕ್ತಿ ಯೋಜನೆಯ ನಾಗರೀಕ ಮತ್ತು ಮಿಲಿಟರಿ ಉದ್ದೇಶಗಳ ನಡುವಿನ ಸಂಬಂಧವನ್ನು ಅಣುಶಕ್ತಿ ವಿರೋಧಿ ಚಳುವಳಿ ಮುಖ್ಯವಾಗಿ ಗಮನಿಸುವ ಅಗತ್ಯವಿದೆ. ಕೆಲವು DAE ಅಧಿಕಾರಿಗಳು ಮಿಲಿಟರಿ ಅಗತ್ಯವು ನಾಗರೀಕ ಅಗತ್ಯದ ಉಪ-ಪದಾರ್ಥವೆಂದು ಹೇಳುತ್ತಾರೆ. ಇಲ್ಲಿ ನಾಗರೀಕ ಅಗತ್ಯದ ಮರೆಯಲ್ಲಿ ಮಿಲಿಟರಿ ಅಗತ್ಯವನ್ನು ಪೂರೈಸಿ ಕೊಳ್ಳಲಾಗುತ್ತದೆ ಎನ್ನುವುದು ಸೂಕ್ತ. ಹಿಂದೆ ಹೇಳಿದಂತೆ ಭಾರತದಲ್ಲಿ ಮೂರು ಪ್ಲುಟೋನಿಯಂ ಉತ್ಪಾದನ ಸ್ಥಾವರಗಳಿವೆ (ಟ್ರಾಂಬೆ, ತಾರಪುರ, ಕಲ್ಪಾಕಂ) ಇದೇ ರೀತಿಯ ಸ್ಥಾವರಗಳನ್ನು ಇತರ ವಾಣಿಜ್ಯ ರಿಯಾಕ್ಟರ್‌ಗಳು ಇರುವಲ್ಲಿ ಆರಂಭಿಸಬಹುದು. ಎಲ್ಲಾ ಅಣುಶಕ್ತಿ ಉತ್ಪಾದನಾ ಸ್ಥಾವರಗಳು ನೈಸರ್ಗಿಕವಾಗಿ ದೊರೆಯುವ ಯುರೇನಿಯಂ ಅನ್ನು ಪ್ಲುಟೋನಿಯಂ 239 ಉತ್ಪಾದಿಸಲು ಇಂಧನವಾಗಿ ಬಳಸುತ್ತವೆ. ಬಾಂಬ್ ತಯಾರಿಕೆಯಲ್ಲಿ ಪ್ಲುಟೋನಿಯಂ 239 ಒಂದು ಮೂಲವಸ್ತು. ಕಲ್ಪಾಕಂನಲ್ಲಿ ಅಭಿವೃದ್ಧಿಪಡಿಸುತ್ತಿರುವ ಅಣುಸ್ಥಾವರವು ಪ್ಲುಟೋನಿಯಂ 239 ಅನ್ನು ಸಹ ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸಬಲ್ಲದು. ಇನ್ನೊಂದು ವರ್ಗದ ಸ್ಥಾವರಗಳು ಥೋರಿಯಂ 232ರಿಂದ ಯುರೇನಿಯಂ 233 ಅನ್ನು ಉತ್ಪಾದಿಸಬಲ್ಲವು. ಯುರೇನಿಯಂ 233ನ್ನು ಬಾಂಬ್ ತಯಾರಿಕೆಯಲ್ಲಿ ಬಳಸಬಹುದು. ವಾಣಿಜ್ಯ ಸ್ಥಾವರಗಳಲ್ಲಿನ ಪ್ಲುಟೋನಿಯಂ ಅನ್ನು ಬಾಂಬ್ ಬಳಕೆಗೆ ಅಲ್ಲದೆ ಭಾರತವು ಅಣ್ವಸ್ತ್ರಗಳ ತಯಾರಿಕೆಗಷ್ಟೆ ಮುಡುಪಾಗಿಡುವ ದಾರಿಯ ಬಗ್ಗೆಯೂ ಆಲೋಚಿಸುತ್ತಿದೆ. ಅಂತಹ ಉದ್ದೇಶ ಗಳಿಗಾಗೆ ಮೈಸೂರಿನ ಸಮೀಪವಿರುವ ರತ್ನಹಳ್ಳಿಯಲ್ಲಿನ ಯುರೇನಿಯಂ ಸ್ಥಾವರವನ್ನು ಪ್ರಾರಂಭಿಸಲಾಗಿದೆ. ಬಹುಶಃ ಅಲ್ಲಿ ಉತ್ಪಾದಿಸಿದ ಯುರೇನಿಯಂಅನ್ನೆ ಇತ್ತೀಚೆಗೆ ಆಸ್ಫೋಟಿಸಿದ ಬಾಂಬ್‌ಗಳ ತಯಾರಿಕೆಯಲ್ಲಿ ಬಳಸಿರಬಹುದು.[4]

ಅಣುಸ್ಥಾವರಗಳ ಸುತ್ತಮುತ್ತಲಿನ ಜನರ ಮತ್ತು ಅಣುಸ್ಥಾವರದಲ್ಲಿ ಕೆಲಸಮಾಡುವ ಕೆಲಸಗಾರರ ಮೇಲೆ ಅಣು ತ್ಯಾಜ್ಯ ಮತ್ತು ಯುರೇನಿಯಂ ಉತ್ಪಾದನೆಯಿಂದ ಉಂಟಾಗುವ ವಿಕಿರಣವು ಬೀರುವ ಪರಿಣಾಮ ಕುರಿತು ಕೆಲವೇ ಅಧ್ಯಯನಗಳು ನಡೆದಿವೆ. 1962ರ ಅಣುಶಕ್ತಿ ಕಾಯ್ದೆಯು ಆ ರೀತಿಯ ಅಧ್ಯಯನಕ್ಕೆ ತಡೆಯಾಗಿದೆ. ಆದರೆ ಆ ರೀತಿಯ ಅಧ್ಯಯನಗಳು ಅತ್ಯಗತ್ಯ. ಅಮೆರಿಕದಲ್ಲಿನ Physicians for social responsi-bilities ಎಂಬ ಸಂಘಟನೆಯು, ಮನುಷ್ಯನ ಆರೋಗ್ಯದ ಮೇಲೆ ಅಣುವಿಕಿರಣವು ಉಂಟುಮಾಡುವ ಪರಿಣಾಮ ಕುರಿತು ಈ ಹೇಳಿಕೆ ನೀಡಿದೆ. "ವಿಕಿರಣವು ಜೀವವಸ್ತುಗಳಲ್ಲಿ ಉತ್ಪತ್ತಿ ದ್ರವ್ಯವನ್ನೆ (genetic material) ಸರಿಪಡಿಸಲಾರದಂತ ಹಾನಿ ಮಾಡಬಲ್ಲದು. ವಿಕಿರಣಕ್ಕೂ, ಹುಟ್ಟಿನಿಂದಲೆ ಬರುವ ಅಂಗವೈಕಲ್ಯ, ಗರ್ಭಪಾತ, ರಕ್ತ, ಮೂಳೆ, ಮಿದುಳು, ಥೈರಾಡ್, ಶ್ವಾಸಕೋಶ, ಕಿಡ್ನಿ, ಲಿವರ್, ಪ್ಯಾಂಕ್ರಿಯಾಸ್ ಮತ್ತು ಅಂಡಾಣುವಿನ ಕ್ಯಾನ್ಸರ್‌ಗೂ ಇರುವ ಸಂಬಂಧಗಳನ್ನು ಅಧ್ಯಯನಗಳು ತೋರಿಸಿವೆ. ಆದರೆ ಇನ್ನೂ ವಿಜ್ಞಾನಿಗಳಿಗೆ (ಅಣ್ವಸ್ತ್ರ ತಯಾರಿಕೆ ಚಟುವಟಿಕೆಯಿಂದುಂಟಾಗುವ) ನ್ಯೂಕ್ಲಿಯೈಡ್ಸ್‌ನ,[5] ವಿಷಕಾರಕಗಳು ಮತ್ತು ಉಪ ಪದಾರ್ಥಗಳು ದೇಹದ ಮೇಲೆ ಉಂಟುಮಾಡುವ ಪರಿಣಾಮಗಳೆಂತಹವೆಂಬುದನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲಾಗಿಲ್ಲ. ಅಣುವಿಕಿರಣವು ಆರೋಗ್ಯದ ಮೇಲೆ ಉಂಟುಮಾಡುವ ಪರಿಣಾಮವನ್ನು ಅರ್ಥಮಾಡಿಕೊಳ್ಳಲು ಮತ್ತು ಅದರ ಚಿಕಿತ್ಸೆಯನ್ನು ಕುರಿತಂತೆ ಹೆಚ್ಚಿನ ಸಂಶೋಧನೆಗಳನ್ನು ನಡೆಸುವ ಅಗತ್ಯವಿದೆ.

*ಗಗನ್‌ದೀಪ್*

> *ಅಮೇರಿಕದ ಹ್ಯಾನ್‌ಫರ್ಡ್ (Hanford) ಎಂಬಲ್ಲಿ ಅತಿ ದೊಡ್ಡ ಶಸ್ತ್ರಾಸ್ತ್ರ ತಯಾರಿಕೆ ಸಂಕೀರ್ಣವಿದೆ. 14050 ಚ.ಕಿ.ಮೀ. ವಿಸ್ತಾರದ ಇಡಿ ಸ್ಥಳವೆ ವಿಕಿರಣದಿಂದ ಕಲುಷಿತಗೊಂಡಿದ್ದು ಸ್ವಚ್ಛಗೊಳಿಸಲು ಕನಿಷ್ಠ 80 ವರ್ಷ ಬೇಕಾದರೆ, ಮಾಡಬೇಕಾದ ಖರ್ಚು ಕನಿಷ್ಠ 50 ಬಿಲಿಯನ್ ಡಾಲರ್! ಅಷ್ಟಾದರೂ ಸಂಪೂರ್ಣ ಸ್ವಚ್ಛವಾಗಬಹುದೆಂಬ ಗ್ಯಾರಂಟಿ ಇಲ್ಲ!*

**ಟಿಪ್ಪಣಿಗಳು**

1. ಅಣ್ವಸ್ತ್ರ ಉತ್ಪಾದನ ನಿಷೇಧ ಒಪ್ಪಂದ **(Nuclear Non-Proliferation Treaty)**
ಈ ಒಪ್ಪಂದಕ್ಕೂ ಮೊದಲು 1963ರಲ್ಲಿ ಭಾಗಶಃ ಅಣ್ವಸ್ತ್ರ ಪರೀಕ್ಷೆ ನಿಷೇಧ ಒಪ್ಪಂದ (Partial Test Ban Treaty) ಜಾರಿಗೆ ಬಂತು. ಅಣ್ವಸ್ತ್ರ ನಿಷೇಧ ಕುರಿತ ಮೊದಲ ಒಪ್ಪಂದ ಇದು. ಈ ಒಪ್ಪಂದವು ಮೂರು ವಾತಾವರಣದಲ್ಲಿ ಅಂದರೆ ವಾಯುಮಂಡಲ, ಆಕಾಶದ ಹೊರಗೆ ಮತ್ತು ನೀರಿನೊಳಗೆ ನಡೆಸುವ ಪರೀಕ್ಷೆಗಳನ್ನು ನಿಷೇಧಿಸಿತು. ಆದರೆ ಭೂಮಿಯೊಳಗಡೆ ನಡೆಸುವ ಪರೀಕ್ಷೆ

ಕುರಿತು ಹೆಚ್ಚಿನ ನಿರ್ಬಂಧ ಹೇರಲಿಲ್ಲ. ಈ ಒಪ್ಪಂದಕ್ಕೆ ಫ್ರಾನ್ಸ್ ಮತ್ತು ಚೈನ ಸಹಿ ಹಾಕಲು ಒಪ್ಪಲಿಲ್ಲ. ಆದರೆ ಮುಂದೆ ಅವು ವಾತಾವರಣದಲ್ಲಿ ನಡೆಸುವ ಪರೀಕ್ಷೆಗಳನ್ನು ಕೈಬಿಟ್ಟವು.

1968ರಲ್ಲಿ ಸಹಿಯಾದ NPTಯು 1970ರಿಂದ ಜಾರಿಗೆ ಬಂತು. ಈ ಒಪ್ಪಂದದ ಪ್ರಯತ್ನ ಪ್ರಾರಂಭಿಸಿದ್ದು ಅಮೆರಿಕ. ಈ ಒಪ್ಪಂದದ ಮೂಲಕ ಮೊದಲ ಬಾರಿಗೆ ಅಣ್ವಸ್ತ್ರ ರಾಷ್ಟ್ರ ಮತ್ತು ಅಣ್ವಸ್ತ್ರ ರಹಿತ ರಾಷ್ಟ್ರಗಳೆಂಬ ವಿಭಜನೆ ಪ್ರಾರಂಭವಾಯ್ತು. 1967ರವರೆಗೆ ಅಣ್ವಸ್ತ್ರಗಳನ್ನು ಹೊಂದಿದ್ದ ರಾಷ್ಟ್ರಗಳನ್ನು ಅಣ್ವಸ್ತ್ರ ರಾಷ್ಟ್ರಗಳೆಂದು, ಉಳಿದ ರಾಷ್ಟ್ರಗಳನ್ನು ಅಣ್ವಸ್ತ್ರರಹಿತ ರಾಷ್ಟ್ರಗಳೆಂದು ಕರೆಯಲಾಯ್ತು. ಈ ಒಪ್ಪಂದದ ಎರಡು ಮುಖ್ಯ ನಿಬಂಧಗಳೆಂದರೆ -

ನಿಬಂಧ 4 - ಅಣ್ವಸ್ತ್ರ ರಾಷ್ಟ್ರಗಳು ಅಣ್ವಸ್ತ್ರರಹಿತ ರಾಷ್ಟ್ರಗಳಿಗೆ ಅಣುತಂತ್ರಜ್ಞಾನವನ್ನು ವರ್ಗಾಯಿಸಬಾರದು. ಆದರೆ ಶಾಂತಿಯುತ ಉದ್ದೇಶಗಳಿಗಾಗಿ ಅಣುತಂತ್ರಜ್ಞಾನದ ಸಹಕಾರ ನೀಡಬಹುದು. ಹಾಗೆ ಸಹಕಾರ ಪಡೆದ ರಾಷ್ಟ್ರಗಳು ತಮ್ಮ ದೇಶದಲ್ಲಿನ ಅಣುಸಂಬಂಧಿ ಸೌಲಭ್ಯಗಳನ್ನು ಅಂತರರಾಷ್ಟ್ರೀಯ ಅಣುಶಕ್ತಿ ಏಜನ್ಸಿಯ ವಿಚಾರಣೆಗೆ ತೆರೆದಿಡಬೇಕು. ಈ ಏಜನ್ಸಿಯು ಯು.ಎನ್.ಓ.ದ ಒಂದು ಭಾಗ.

ನಿಬಂಧ 6 - ನಿಧಾನವಾಗಿ ನಿಶ್ಯಸ್ತ್ರೀಕರಣ ಹೊಂದಬೇಕೆಂಬುದನ್ನು ಹೇಳುತ್ತದೆ.

ಅಣ್ವಸ್ತ್ರ, ಅಣ್ವಸ್ತ್ರ ರಹಿತ ರಾಷ್ಟ್ರಗಳ ನಡುವೆ ತಾರತಮ್ಯಕ್ಕೆ ಕಾರಣವಾದ ಈ ಒಪ್ಪಂದಕ್ಕೆ ಭಾರತ ಸಹಿ ಹಾಕಲಿಲ್ಲ. ಫ್ರಾನ್ಸ್ ಮತ್ತು ಚೈನಾ ಮೊದಲಿಗೆ ಸಹಿ ಹಾಕಲಿಲ್ಲ. ನಂತರ 1996ರಲ್ಲಿ ಸಹಿ ಹಾಕಿದವು. 100ಕ್ಕು ಹೆಚ್ಚಿನ ರಾಷ್ಟ್ರಗಳು ಈ ಒಪ್ಪಂದಕ್ಕೆ ಸಹಿ ಹಾಕಿದವು.

**2.** **ಅಣ್ವಸ್ತ್ರ ಪರೀಕ್ಷೆ ನಿಷೇಧ ಒಪ್ಪಂದ (Comprehensive Test Ban Treaty)**

90ರ ದಶಕದಲ್ಲೆ ಈ ಒಪ್ಪಂದದ ಪ್ರಕ್ರಿಯೆಯು ಪ್ರಾರಂಭಗೊಂಡು 5 ಅಣ್ವಸ್ತ್ರ ರಾಷ್ಟ್ರಗಳಾದ ಅಮೆರಿಕ, ಚೈನಾ, ರಷ್ಯಾ, ಫ್ರಾನ್ಸ್ ಮತ್ತು ಯುನೈಟೆಡ್ ಕಿಂಗ್‌ಡಂ - ಸಹಿ ಹಾಕಿದವು. (ಈ ರಾಷ್ಟ್ರಗಳನ್ನು Permanent-5 ಅಂದರೆ ನ್ಯೂಕ್ಲಿಯರ್ ಕ್ಲಬ್‌ನ ಶಾಶ್ವತ ಸದಸ್ಯರು ಎಂದು ಕರೆಯಲಾಗುತ್ತದೆ.) ಈ ಒಪ್ಪಂದದ ಮುಖ್ಯ ನಿಬಂಧಗಳು :-

ನಿಬಂಧ 1 - ಸದಸ್ಯ ರಾಷ್ಟ್ರಗಳು ಯಾವುದೇ ರೀತಿಯ ಅಣ್ವಸ್ತ್ರ, ಅಣುಸ್ಫೋಟ ಪರೀಕ್ಷೆಯನ್ನು ನಿಷೇಧಿಸುತ್ತದೆ. ತನ್ನ ಸುಪರ್ದಿನಲ್ಲಿರುವ ಯಾವುದೇ ಜಾಗದಲ್ಲೂ ಪರೀಕ್ಷೆಯನ್ನು ತಡೆಯುವ, ನಿಷೇಧಿಸುವುದನ್ನು ಕುರಿತು ಹೇಳುತ್ತದೆ.

ನಿಬಂಧ 2 - ಅಣ್ವಸ್ತ್ರ ಪರೀಕ್ಷೆ ನಿಷೇಧ ಒಪ್ಪಂದ ಸಂಸ್ಥೆಯನ್ನು ವಿಯನ್ನಾದಲ್ಲಿ ಸ್ಥಾಪಿಸುವ ಬಗ್ಗೆ ಹೇಳುತ್ತದೆ. ಈ ಸಂಸ್ಥೆಯು ವಿವಿಧ ರಾಷ್ಟ್ರಗಳ ಸಮಾವೇಶ (Conference of States Parties), ಕಾರ್ಯಾಂಗ ಸಮಿತಿ (Executive Council) ಮತ್ತು ತಾಂತ್ರಿಕ ಕಾರ್ಯಾಲಯ (Technical Secretariate)ವನ್ನು ಒಳಗೊಳ್ಳುತ್ತದೆ.

ನಿಬಂಧ 4 - ಅಂತರರಾಷ್ಟ್ರೀಯ ಎಚ್ಚರಿಕೆ ಕೇಂದ್ರದ (International Monitoring Centre) ಸ್ಥಾಪನೆಯನ್ನು, ವಿಚಾರಣ ತಂಡವನ್ನು ಒಳಗೊಂಡಿದೆ.

ನಿಬಂಧ 9 - ಒಪ್ಪಂದವು ಅನಿಯಮಿತ ಕಾಲಾವಧಿಯದಾಗಿದ್ದು ಯಾವುದೇ ಸದಸ್ಯ ರಾಷ್ಟ್ರವು (ತನ್ನ ಸರ್ವೋಚ್ಛ ರಾಷ್ಟ್ರೀಯ ಆಸಕ್ತಿಗಳಿಗೆ ಧಕ್ಕೆ ತರುವಂತಹ ಅಸಾಧಾರಣ ಪರಿಸ್ಥಿತಿ ಇದ್ದರೆ) 6 ತಿಂಗಳ ಮುಂಗಡ ಸೂಚನೆ ನೀಡಿ ಒಪ್ಪಂದದಿಂದ ಹೊರಬರಬಹುದು.

ಈ ಒಪ್ಪಂದವು ಪ್ರಬಲ ಕಂಪ್ಯೂಟರ್‌ಗಳನ್ನು ಬಳಸಿ ಪರೀಕ್ಷೆ ನಡೆಸುವ ಸಾಧ್ಯತೆಯನ್ನು ನಿಷೇಧಿಸಿಲ್ಲ. ಹಾಗು ನಿಶ್ಯಸ್ತ್ರೀಕರಣದ ಬಗ್ಗೆ ಏನೂ ಹೇಳಿಲ್ಲ.

**3.** Stockpile Stewarship Programme - ಶೇಖರಿಸಿಟ್ಟುಕೊಂಡಿರುವ ಅಣ್ವಸ್ತ್ರಗಳ ನಿರ್ವಹಣಾ ಯೋಜನೆ. ಈ ಯೋಜನೆಯನ್ನು ಅಮೆರಿಕ ಸರ್ಕಾರ 1997ರಲ್ಲಿ ಕೈಗೆತ್ತಿಕೊಂಡಿತು. 13 ವರ್ಷಗಳ ಯೋಜನೆಯು 2010ರವರೆಗೆ ಜಾರಿಯಲ್ಲಿರುತ್ತದೆ. ಈ ಯೋಜನೆಯ ವೆಚ್ಚ 60 ಬಿಲಿಯನ್ ಅಂದರೆ 60 ಲಕ್ಷ ಕೋಟಿ (60,000000000000). ಅಣ್ವಸ್ತ್ರಗಳ ನಿರ್ವಹಣೆಯಲ್ಲದೆ ಅವುಗಳನ್ನು ಅತ್ಯಾಧುನಿಕ ತಂತ್ರಜ್ಞಾನ ಬಳಸಿ ಅತ್ಯಾಧುನಿಕ ಬಾಂಬ್‌ಗಳನ್ನು ತಯಾರಿಸುವ, ಪರೀಕ್ಷೆ ನಡೆಸುವ ಉದ್ದೇಶದಿಂದಲೂ ಈ ಯೋಜನೆಯನ್ನು ಅಮೆರಿಕ ಸರ್ಕಾರ ಕೈಗೊಂಡಿದೆ.

**4.** ಭಾರತದ ಅಣುಶಕ್ತಿ ಆಯೋಗವು ಮೂರು ಹಂತಗಳಲ್ಲಿ ಅಣುಸಂಬಂಧಿ ಚಟುವಟಿಕೆಗಳನ್ನು ಕೈಗೊಂಡಿದೆ.

ಮೊದಲನೆ ಹಂತದಲ್ಲಿ - ನೈಸರ್ಗಿಕವಾಗಿ ದೊರೆಯುವ ಯುರೇನಿಯಂನಿಂದ ಪ್ಲುಟೋನಿಯಂ 239 ತೆಗೆಯಲಾಗುತ್ತದೆ. ನೈಸರ್ಗಿಕವಾಗಿ ದೊರೆಯುವ ಯುರೇನಿಯಂ, ಯುರೇನಿಯಂ 235 ಮತ್ತು ಯುರೇನಿಯಂ 238ರ ಮಿಶ್ರಣ. ಈ ಸಂಖ್ಯೆಗಳು ಖನಿಜದೊಳಗಿರುವ

ನ್ಯೂಟ್ರಾನ್ಸ್, ಪ್ರೋಟಾನ್ಸ್, ಎಲೆಕ್ಟ್ರಾನ್ಸ್ ಕಣಗಳನ್ನು ಕುರಿತು ಹೇಳುತ್ತದೆ. ಈ ಹಂತದಲ್ಲಿ 10,000 ಮೆಗಾ ವ್ಯಾಟ್ ವಿದ್ಯುತ್‌ಚ್ಛಕ್ತಿ ಉತ್ಪಾದಿಸುವ ಗುರಿಯನ್ನು ನಿಗದಿಪಡಿಸಲಾಗಿತ್ತು. ಆದರೆ ವಿದ್ಯುಚ್ಛಕ್ತಿ ಉತ್ಪಾದನೆಗೆ ಯುರೇನಿಯಂನಿಂದ ಪ್ಲುಟೋನಿಯಂ 239ನ್ನು ಬೇರ್ಪಡಿಸುವ ಅಗತ್ಯವಿಲ್ಲ ಮತ್ತು ಪ್ಲುಟೋನಿಯಂ 239 ಬಾಂಬ್ ತಯಾರಿಕೆಯಲ್ಲಿನ ಮುಖ್ಯವಸ್ತು ಎಂಬುದು ಗಮನಿಸ ಬೇಕಾದ ಅಂಶ. ಮತ್ತು ಇಲ್ಲಿಯವರೆಗೆ ಅಣುಶಕ್ತಿಯ ಮೂಲಕ ವಿದ್ಯುತ್‌ಚ್ಛಕ್ತಿ ಉತ್ಪಾದಿಸಿರುವುದು ದೇಶದ ಒಟ್ಟು ಉತ್ಪಾದನೆಯ ಶೇ. $2^1/_2$ರಷ್ಟು ಮಾತ್ರ.

ಎರಡನೆ ಹಂತದಲ್ಲಿ ಪ್ರಾರಂಭಿಸಲಾದ ಸ್ಥಾವರಗಳನ್ನು Breeder reactor ಎಂದು ಕರೆಯಲಾಗುತ್ತದೆ. ಈ ರೀತಿಯ ಸ್ಥಾವರವನ್ನು ಕಲ್ಪಾಕಂನಲ್ಲಿ ಪ್ರಾರಂಭಿಸಲಾಯ್ತು. ಇಲ್ಲಿನ ಸ್ಥಾವರದಲ್ಲಿ ವಿದ್ಯುತ್‌ಚ್ಛಕ್ತಿ ಉತ್ಪಾದನೆಯಾಗುತ್ತಿಲ್ಲ. ಈ ಹಂತದಲ್ಲಿ ಹೆಚ್ಚಿನ ಪ್ಲುಟೋನಿಯಂ 239 ಅನ್ನು ಉತ್ಪಾದಿಸುವುದೇ ಮುಖ್ಯ ಉದ್ದೇಶ. ಈ ಸ್ಥಾವರದಲ್ಲಿ ಮೊದಲ ಹಂತದಲ್ಲಿ ಬಳಸಲಾದ ಯುರೇನಿಯಂ ಅನ್ನು ಪ್ಲುಟೋನಿಯಂ ತಯಾರಿಸಲು ಮರುಬಳಸಲಾಗುತ್ತದೆ.


ಮೂರನೇ ಹಂತದಲ್ಲಿ ಥೋರಿಯಂ 232ರಿಂದ ಯುರೇನಿಯಂ 233ನ್ನು ಬೇರ್ಪಡಿಸಲಾಗುತ್ತದೆ. ಯುರೇನಿಯಂ 233ರಿಂದ ಬಾಂಬ್ ತಯಾರಿಸಬಹುದು. ಇದಿನ್ನೂ ಪ್ರಾರಂಭವಾಗಿಲ್ಲ.

ರತ್ನಹಳ್ಳಿಯಲ್ಲಿರುವ ಯುರೇನಿಯಂ ಸ್ಥಾವರವು ಮೇಲಿನ ಮೂರು ಹಂತಗಳಡಿ ಬರುವುದಿಲ್ಲ. ಇದು ಸಂಪೂರ್ಣವಾಗಿ ಶಸ್ತ್ರಾಸ್ತ್ರ ತಯಾರಿಕೆ ಯೋಜನೆಗೆ ಸಂಬಂಧಿಸಿದ್ದು. ಈ ಸ್ಥಾವರದಲ್ಲಿ ನೈಸರ್ಗಿಕ ಯುರೇನಿಯಂ 238ರಿಂದ ಯುರೇನಿಯಂ 235ನ್ನು ಬೇರ್ಪಡಿಸಲಾಗುತ್ತದೆ. ನೈಸರ್ಗಿಕ ಯುರೇನಿಯಂ 238ರಲ್ಲಿ ಯುರೇನಿಯಂ 235 ಶೇ. 3ರಷ್ಟಿದ್ದರೆ ಉಳಿದ 97% ಯುರೇನಿಯಂ 238 ಇರುತ್ತದೆ. ಅತ್ಯಲ್ಪ ಪ್ರಮಾಣದಲ್ಲಿರುವ ಯುರೇನಿಯಂ 235ನ್ನು ಬೇರ್ಪಡಿಸುವುದು ಕಷ್ಟದ ಹಾಗು ದುಬಾರಿ ಕೆಲಸ Centrifuge (ನಮ್ಮ ಅಡುಗೆ ಮನೆ ಮಿಕ್ಸಿಯಂತೆ ಕೆಲಸ ಮಾಡುವ ಯಂತ್ರ) ಬಳಸಿ ಯುರೇನಿಯಂ 235ನ್ನು ಬೇರ್ಪಡಿಸಲಾಗುತ್ತದೆ. ಯಂತ್ರದಲ್ಲಿ ಯುರೇನಿಯಂ 238ನ್ನು ಹಾಕಿ ತಿರುಗಿಸಿದಾಗ ಹಗುರವಾಗಿರುವ ಯುರೇನಿಯಂ 235 ಮೇಲ್ಭಾಗಕ್ಕೆ ಬರುತ್ತದೆ, ಭಾರವಾದ ಯುರೇನಿಯಂ 238 ಕೆಳಗೆ ಬಂದು ನಿಲ್ಲುತ್ತದೆ.

2 ರೀತಿಯ ಅಣು ಸ್ಥಾವರಗಳಿವೆ. ವಾಣಿಜ್ಯ ಅಣು ಸ್ಥಾವರಗಳು (1) ವಿದ್ಯುತ್‌ಚ್ಛಕ್ತಿ ಉತ್ಪಾದಿಸಲೆಂದು ಇರುವ ಅಣು ಸ್ಥಾವರಗಳು. (2) ಸಂಶೋಧನೆ ಅಥವಾ ಪರೀಕ್ಷೆಗಾಗಿ ಇರುವ ಅಣುಸ್ಥಾವರಗಳು.

**5.** ನ್ಯೂಕ್ಲಿಯೈಡ್-ಯುರೇನಿಯಂ ಕೋಶವನ್ನು ನ್ಯೂಟ್ರಾನ್ಸ್ ಮೂಲಕ ಒಡೆದಾಗ 2 ವಸ್ತುಗಳಾಗಿ ಅದು ಇಬ್ಭಾಗವಾಗುತ್ತದೆ. ಈ ವಸ್ತುಗಳು ವಿಕಿರಣ ಶಕ್ತಿಯುಳ್ಳವು. ಅವನ್ನು ರೇಡಿಯೋ ನ್ಯೂಕ್ಲಿಯೈಡ್ಸ್ ಎನ್ನುತ್ತಾರೆ. ವಿಷಕಾರಕ ಮತ್ತು ಉಪ-ಪದಾರ್ಥಗಳೆಂದರೆ-ಪ್ಲುಟೋನಿಯಂ ಮತ್ತು ತಯಾರಿಕೆ ಪ್ರಕ್ರಿಯೆಯಲ್ಲಿ ಉಪಯೋಗಿಸುವ ರಾಸಾಯನಿಕಗಳು.

●



# ಶಾಂತಿಗಾಗಿ ಸಂಘಟಿತರಾದ ಮಹಿಳೆಯರು - ಪ್ರಾರಂಭದ ಹಂತಗಳು

ಲಕ್ಷ್ಮೀಮೂರ್ತಿ - ಸಹೇಲಿ, ದೆಹಲಿ

1915ರ ಏಪ್ರಿಲ್‌ನಲ್ಲಿ ಮಹಿಳೆಯರ ಓಟಿನ ಹಕ್ಕನ್ನು ಚರ್ಚಿಸುವುದಕ್ಕಾಗಿ ಹಾಲೆಂಡಿನಲ್ಲಿ ಅಂತರ್‌ರಾಷ್ಟ್ರೀಯ ಮಹಿಳಾ ಕಾಂಗ್ರೆಸ್ ಕೂಟ ಸೇರಿತು. ಚಾರಿತ್ರಿಕವಾಗಿ ಮಹತ್ವವಾದ ಈ ಅಂತರ್‌ರಾಷ್ಟ್ರೀಯ ಮಹಿಳಾ ಕಾಂಗ್ರೆಸ್ ಕೂಟಕ್ಕೆ ಪ್ರಪಂಚದ ಎಲ್ಲಾ ಭಾಗಗಳಿಂದ ಮಹಿಳೆಯರ ಚಿಕ್ಕ ಚಿಕ್ಕ ಗುಂಪುಗಳು ಹೇಗ್‌ಗೆ ಆಗಮಿಸಿದವು. ಒಂಭತ್ತು ತಿಂಗಳುಗಳ ಮುಂಚೆಯಷ್ಟೇ ಪ್ರಪಂಚದ ಮೊದಲನೇ ಯುದ್ಧ ಪ್ರಾರಂಭವಾಗಿ, ಯುರೋಪಿನ ದೇಶಗಳ ಹೆಂಗಸರು ಮತ್ತು ಪುರುಷರ ಮಧ್ಯೆ ಒಂದು ದೊಡ್ಡ ಕಂದರವನ್ನೇ ಹುಟ್ಟುಹಾಕಿತ್ತು. ಡಚ್ ಮಹಿಳೆಯರ ಓಟಿನ ಹಕ್ಕಿನ ಚಳುವಳಿಯ ನೇತಾರಳಾದ ಹಾಗೂ ಹಾಲೆಂಡಿನ ಮೊದಲ ಮಹಿಳಾ ವೈದ್ಯೆಯಾದ ಅಲೆಟಾ ಜಾಕೋಬ್ಸ್ "ಈ ಒಂದು ಭಯಂಕರ ಯುದ್ಧದಿಂದಾಗಿ ಹೆಂಗಸರೆಲ್ಲಾ ಹೇಗೋ, ಎಲ್ಲಿಯೋ ಒಟ್ಟಿಗೆ ಬರಬೇಕಾಗಿದೆ, ಪ್ರಪಂಚದ ಅತೀ ದೊಡ್ಡ ಯುದ್ಧದ ಎದುರಿನಲ್ಲಿಯೂ ಸಹ ಎಲ್ಲಾ ದೇಶಗಳ ಮಹಿಳೆಯರೆಲ್ಲರೂ ಒಟ್ಟಾಗಿ ಕೆಲಸ ಮಾಡಬಲ್ಲೆವು ಎಂಬುದನ್ನು ತೋರಿಸಿಕೊಡಬೇಕಾಗಿದೆ" ಎಂದು ನುಡಿದಿದ್ದರು.

ಚಾರಿತ್ರಿಕವಾದ ಹಾಗೂ ಸಾಂಕೇತಿಕವಾದ ಈ ಕಾಂಗ್ರೆಸ್ ಸಭೆಯಲ್ಲಿ ಸಾವಿರಾರು ಮಹಿಳೆಯರು ಭಾಗವಹಿಸಿದ್ದರು. ಇದನ್ನು ಉದ್ಘಾಟಿಸಿದವರು ಅಮೇರಿಕಾದ ಸಮಾಜ ಸುಧಾರಕಿ ಜೇನ್ ಆ್ಯಡಮ್ಸ್. ಈ ಸಭೆ ಕೆಲವು ನಿರ್ಣಾಯಕಗಳನ್ನು ತೆಗೆದುಕೊಂಡಿತು. ಈ ನಿರ್ಣಾಯಕಗಳು ಅಂತರ್ ರಾಷ್ಟ್ರೀಯ ಶಾಂತಿ ಚಳುವಳಿಗೆ ಭದ್ರವಾದ ಬುನಾದಿಯನ್ನು ಹಾಕಲು ನಾಂದಿಯಾದವು. ಮಹಿಳಾ ಓಟಿನ ಹಕ್ಕಿನ ಕ್ಯಾಂಪೇನ್‌ಗೆ ಹಾಗೂ ಅಂತರ್‌ರಾಷ್ಟ್ರೀಯ ವಿವಾದಗಳನ್ನು ಶಾಂತಿಯುತವಾಗಿ ಬಗೆಹರಿಸಿಕೊಳ್ಳುವ ವಿಧಾನಗಳ ಹುಡುಕುವಿಕೆಗೆ ಈ ಅಂತರ್‌ರಾಷ್ಟ್ರೀಯ ಶಾಂತಿ ಚಳುವಳಿ ಬಲವಾದ ಬದ್ಧತೆಯನ್ನು ಹೊಂದಿತ್ತು. ಇದರಲ್ಲಿ ಎರೆಡು ಸಂಗತಿಗಳು ಹೆಣೆದುಕೊಂಡಿದ್ದವು. ಅಂತರ್‌ರಾಷ್ಟ್ರೀಯ ವಿವಾದ ಬಗೆಹರಿಸುವ ಒಂದು ಘಟಕ ಇರಬೇಕು. ಅದರಲ್ಲಿ ಮಹಿಳೆಯರ ಧ್ವನಿಗಳು ಕೇಳಿಬರಬೇಕು. ಯುದ್ಧದ ಕೊನೆಯವರೆಗೂ ಯುರೋಪಿನ ಅನೇಕ ದೇಶಗಳಲ್ಲಿ ಶಾಂತಿಯ ಪ್ರಯತ್ನಗಳನ್ನು ನಡೆಸಲಾಯಿತು. ಜುಲೈ 1917ರಲ್ಲಿ ಮಹಿಳಾ ಶಾಂತಿಯ ಕ್ರುಸೇಡ್ ಗ್ಲಾಸ್ಗೋನಲ್ಲಿ 12,000 ಜನರ ಒಂದು ಮೆರವಣಿಗೆ ನಡೆಸಿತು. ಇದರಲ್ಲಿ ಭಾಗವಹಿಸಿದ್ದವರೆಲ್ಲರೂ ಭಾವನಾತ್ಮಕವಾಗಿ ಶಾಂತಿ, ಶಾಂತಿ, ಶಾಂತಿ ಎಂದು ಮನವಿ ಮಾಡಿಕೊಳ್ಳುತ್ತಿದ್ದರು.

ಯುದ್ಧದ ರೋಧಕ ಸತ್ಯಗಳಿಂದ ಕಾಡಲ್ಪಟ್ಟ ಬ್ರಿಟನ್ನಿನ ಹಾಗೂ ಅಮೇರಿಕಾದ ಅನೇಕ ಮಹಿಳೆಯರು ಪ್ರಥಮ ಜಾಗತಿಕ ಯುದ್ಧದ ನಂತರ 'ನೋ ಮೋರ್ ವಾರ್ ಮೂವ್‌ಮೆಂಟ್' ಹಾಗೂ 'ವಿಮೆನ್ಸ್' ಇಂಟರ್‌ನ್ಯಾಷನಲ್ ಲೀಗ್ ಆಫ್ ಪೀಸ್ ಅಂಡ್ ಫ್ರೀಡಂ' ಎನ್ನುವಂತಹ ಗುಂಪುಗಳ ಮೂಲಕ ತಮ್ಮ ಬದುಕನ್ನು ಶಾಂತಿಯ ಪ್ರಯತ್ನಗಳಿಗಾಗಿ ಮುಡುಪಾಗಿಟ್ಟರು. ನಾಜಿಗಳ ಆಳ್ವಿಕೆಯ ಜರ್ಮನಿ ಹಾಗೂ ಯುರೋಪ್‌ನಲ್ಲಿ ಬೆಳೆದ ಸೈನಿಕತ್ವದ ಫ್ಯಾಸಿಸಂ ಪ್ರಪಂಚದ ಎರಡನೆಯ ಮಹಾಯುದ್ಧಕ್ಕೆ ದಾರಿ ಮಾಡಿಕೊಟ್ಟು ಈ ಗುಂಪುಗಳ ಹೆಂಗಸರ ಯುದ್ಧ ವಿರೋಧಿ ನಂಬಿಕೆಗಳಿಗೆ ಸವಾಲು ಎಸೆದಾಗಲೂ ಕೂಡಾ 1915ರಲ್ಲಿ ಇವರು ಹೇಗ್‌ನಲ್ಲಿ ಹಚ್ಚಿದ ಆಶಾಕಿರಣದ ಕಿಡಿ ಪೂರ್ತಿಯಾಗಿ ಯಾವಾಗಲೂ ಆರಿಹೋಗಿರಲಿಲ್ಲ. ಅಣುಬಾಂಬಿನ ಯುದ್ಧ ಪ್ರಪಂಚದಲ್ಲಿ ಪ್ರಾರಂಭವಾಗುವ ಹೆದರಿಕೆಯ ಹಂತದಲ್ಲಿಯೂ ಸಹ ಶತಮಾನಗಳಿಂದಲೂ ಮಹಿಳೆಯರು ಸಾರ್ವತ್ರಿಕ ಮತ್ತು ಅಂತರ್‌ರಾಷ್ಟ್ರೀಯ ನಿಶ್ಶಸ್ತ್ರೀಕರಣದ ಬಗ್ಗೆ ಮನವಿ ಮಾಡಿಕೊಳ್ಳುತ್ತಲೇ ಬಂದಿದ್ದಾರೆ.

ಅಣುಬಾಂಬಿನ ನಿಶ್ಶಸ್ತ್ರೀಕರಣದ ಕ್ಯಾಂಪೇನ್ ಸದಸ್ಯೆಯಾದ ಆಲಿಸನ್ ಅಸಿಸ್ಟರ್ ಬರೆಯುತ್ತಾರೆ, "ಮಹಿಳೆಯರು ಚಾರಿತ್ರಿಕವಾಗಿ ಮಾಡಿರುವುದನ್ನು ಮುಂದುವರಿಸಿಕೊಂಡು ಹೋಗಬೇಕು. ಅವರು ಹೆಚ್ಚು ದೃಢತೆ ಹೊಂದುವ, ಕಡಿಮೆ ಆತ್ಮನಿಂದನೆ ಮಾಡಿಕೊಳ್ಳುವ ಹಾಗೂ ಶಾಂತಿಯನ್ನು ಧನಾತ್ಮಕ ರಾಜಕೀಯ ಗುರಿಯನ್ನಾಗಿ ಮಾಡಿಕೊಳ್ಳುವಾಗ ಅವರು ಈಗಾಗಲೇ ಹೊಂದಿರುವ ತಮ್ಮ ಸೃಷ್ಟ್ಯಾತ್ಮಕ ಹಾಗೂ ಶಾಂತಿತ್ವದ ಗುಣಗಳನ್ನು ದುಡಿಸಿಕೊಳ್ಳಬೇಕಾಗುತ್ತದೆ. ಅವರ ಸಹಜ, ಶಾಂತಿತ್ವದ ಗುಣಗಳು ಶಾಂತಿ ಚಳುವಳಿಯನ್ನು ಕ್ರಿಯಾಶೀಲವಾಗಿ ಬೆಂಬಲಿಸುವುದಕ್ಕಾಗಿ ಪರಿವರ್ತನೆಗೊಳ್ಳಬೇಕಾಗುತ್ತದೆ. ಸುಜಾನೆ ವುಡ್‌ರಂತಹ ಕಾರ್ಯಕರ್ತೆ ನಮ್ಮ ಹಣೆಬರಹ, ಭವಿಷ್ಯವನ್ನು ಪ್ರಭಾವಿಸುವಷ್ಟು ಶಕ್ತಿ ಹಾಗೂ ವಿಧಾನಗಳು ನಮ್ಮೆಲ್ಲರಲ್ಲೂ ಇವೆ ಎನ್ನುತ್ತಾರೆ. ಅಣುಬಾಂಬಿನ ಯುದ್ಧದ ಸಾಧ್ಯತೆ ಹಾಗೂ ಅದರ ವಿಷಮ ಪ್ರಭಾವದ ಬಗ್ಗೆ ಜನರಿಗೆ ಅರಿವು, ಶಿಕ್ಷಣ

ನೀಡುವುದರ ಮೂಲಕವಷ್ಟೇ ಅಗತ್ಯವಿರುವ ಒತ್ತಡ ತಂದು ಸರ್ಕಾರದ ಯೋಜನೆಯನ್ನು ಪ್ರಭಾವಿಸಬೇಕು ಎನ್ನುತ್ತಾರೆ. "ನಮಗೆ ತೆರೆದಿರುವ ಎಲ್ಲಾ ವಿರೋಧದ ಕ್ಷೇತ್ರಗಳನ್ನೂ ನಾವು ಬಳಸಿಕೊಳ್ಳಬೇಕು" ಎಂದೂ ಕೂಡಾ ಆಕೆ ಹೇಳುತ್ತಾರೆ. "ಸ್ಥಳೀಯ ಹಂತದಿಂದ ರಾಷ್ಟ್ರೀಯ ಹಂತದವರೆಗಿನ ಮತದಾನದ ವಿಧಾನಗಳು, ಸರ್ಕಾರದ ನಿಲುವುಗಳನ್ನು ಪ್ರಭಾವಿಸಬಲ್ಲ ಜನರ ವಿರೋಧಗಳ ಶಕ್ತಿ, ಮಾಧ್ಯಮದ ವಿಷಯಗಳು ಹಾಗೂ ಸಾರ್ವಜನಿಕರಿಗೆ ನೀಡುವ ಶಿಕ್ಷಣ ವೈಯಕ್ತಿಕ ಹಾಗೂ ಗುಂಪಿನ ಉಳಿಯುವಿಕೆಯ ಬಗ್ಗೆ ಜವಾಬ್ದಾರಿಯನ್ನು ಹೊಂದಿರಬೇಕು. ಕಾರ್ಮಿಕ ಚರಿತ್ರೆಕಾರರಾದ ಹಾಗೂ ಯುರೋಪಿನ ಅಣು ಶಸ್ತ್ರ ನಿಶ್ಶಸ್ತ್ರೀಕರಣದ ಸದಸ್ಯೆಯಾದ ಡೊರೋಲೇ ಥಾಮ್ಸ್‌ಸನ್ ಹೇಳುತ್ತಾರೆ, "ನಮ್ಮ ರಕ್ಷಕರಿಂದ ನಾವಲ್ಲದೇ ನಮ್ಮನ್ನು ರಕ್ಷಿಸುವವರು ಯಾರು? ನಮ್ಮ ನಾಗರೀಕತೆಯ ಉಳಿಸುವಿಕೆಗೆ ನಾಶಪಡಿಸುವ ಅನೇಕ ವಿಧಾನಗಳನ್ನು ದೂರ ಸರಿಸುವುದಷ್ಟೇ ಅಲ್ಲ, ಜೊತೆಗೆ ಪರಸ್ಪರತೆ, ಸಹಕಾರ, ಸಹನೆಯಂತಹ ಮೌಲ್ಯಗಳನ್ನು ಪ್ರೋತ್ಸಾಹಿಸಬೇಕು ಹಾಗೂ ಹಬ್ಬಿಸಬೇಕು".

ಅಣುಶಕ್ತಿಯ ಕೈಗಾರಿಕೆಯನ್ನು ಟೀಕಿಸುತ್ತಾ ಮಾರ್ಜೋ ಮೌಲಾಮ್ ಅಣುಶಕ್ತಿ ಕೊಳಕು, ಅರಕ್ಷಿತ ಹಾಗೂ ದುಬಾರಿ ಎನ್ನುತ್ತಾರೆ. ಈ ಅಣುಶಕ್ತಿ ತಾಂತ್ರಿಕತೆ ಅಣುಶಕ್ತಿ ಆಯುಧಗಳನ್ನು ತಯಾರಿಸುವುದಕ್ಕಾಗಿ ಪ್ರಾರಂಭವಾಯಿತು. 10 ವರ್ಷಗಳ ನಂತರ ನಾಗರಿಕ ಬಳಕೆಯ ಅಣುಶಕ್ತಿಯನ್ನು ಆರ್ಥಿಕತೆ ಹಾಗೂ ನೈತಿಕತೆಯ ಬೆಲೆಯನ್ನು ಪ್ರತಿಪಾದಿಸುತ್ತಾ ಕೊನೆಗೆ ಈ ಕಾರ್ಯಕ್ರಮ ನಾಗಸಾಕಿ ಹಾಗೂ ಹಿರೋಶಿಮಾದಲ್ಲಿ ಘನೀಕೃತವಾಯಿತು. ಮನೆಗಳು, ಆಸ್ಪತ್ರೆಗಳು, ಶಾಲೆಗಳು ಇವುಗಳಿಗಾಗಿ ಖರ್ಚು ಮಾಡಬೇಕಾದ ಸಂಪನ್ಮೂಲಗಳನ್ನು ಈ ಯುದ್ಧ ಸಾಮಗ್ರಿಗಳಿಗಾಗಿ ಬಳಸಿಕೊಳ್ಳಲಾಯಿತು.

ಪತ್ರಿಕೋದ್ಯಮಿ ಬೆಲ್ ಮೌನಿಯ ಪ್ರಕಾರ, "ಪ್ರಪಂಚದಾದ್ಯಂತ ಬೆಳೆದಿರುವ ಶಾಂತಿ ಚಳುವಳಿ ಪರ್ಯಾಯ ನಂಬಿಕೆಯ ಬಗ್ಗೆಗಿರುವ ಬಲವಾದ ಸಾಕ್ಷಿಯಾಗಿದೆ. ಇದು ಇಂದಿನ ರಾಜಕೀಯ ಕಟು ವಾಸ್ತವಿಕತೆಯ ವಿರುದ್ಧದ, ಹುಚ್ಚುತನದ ವಿರುದ್ಧ, ಸಾವಿನ ವಿರುದ್ಧದ ಪ್ರತಿಪಾದನೆಯಾಗಿದೆ. "ಕನಸುಗಳಲ್ಲಿ ಜವಾಬ್ದಾರಿಗಳು ಪ್ರಾರಂಭವಾಗುತ್ತವೆ" ಎನ್ನುವ ಯೇಟ್ಸ್‌ನ ಮಾತಿನ ಕಟು ಸತ್ಯವನ್ನು ಇದು ಒಪ್ಪಿಕೊಳ್ಳುತ್ತದೆ. ಆದರೆ ವಾಸ್ತವದಲ್ಲಿ ಬರಡುಭೂಮಿಯನ್ನು ಬಿಟ್ಟು ಹೋಗುವುದು ಪ್ರತಿಯೊಬ್ಬ ಮಾನವ ಜೀವಿಯ ಜವಾಬ್ದಾರಿಯಾಗಿದೆ". ತಂತ್ರಗಳ ಬಗ್ಗೆ ಮಾತನಾಡುತ್ತಾ ಮಹಿಳೆಯರು ಶಾಂತಿತ್ವ ಗುಣ ಮೀರಿ ಮುಂದೆ ಹೋಗಬೇಕೆಂದು ಮೌನಿ ಭಾವಿಸುತ್ತಾನೆ. ಅಂದರೆ ಇದು ಕ್ರಿಯಾಹೀನತೆಯಾಗಿರುತ್ತದೆ, ಸೈನಿಕ ಪದಕಗಳನ್ನು ಗೆಲ್ಲುವಂತಹ ಶೂರತ್ವ, ತಾಳ್ಮೆ ಹಾಗೂ ನೈಪುಣ್ಯತೆಗಳಿಂದ ಭಯಾನಕತೆಯನ್ನು ಎದುರಿಸಬೇಕಾಗುತ್ತದೆ. ಶಾಂತಿ ಚಳುವಳಿಯಲ್ಲಿರುವ ಮಹಿಳೆಯರು ಇದನ್ನು ಮಾಡಿ ತೋರಿಸಿದ್ದಾರೆ. "ಬರಡು ಭೂಮಿಯನ್ನು ಮೀರಿ ನಾವು ಸವಾಲುಗಳನ್ನು ಎದುರಿಸಲು ಹಾಗೂ ಜವಾಬ್ದಾರಿಯ ಪರಿಧಿಯ ಹೋರಾಟಕ್ಕೆ ಇಳಿಯಬೇಕಾದರೆ ಕೋಪ ಮುಖ್ಯ, ಹಾಗೂ ಕ್ರಿಯೆ ಕೂಡಾ. ನಾನು ಇನ್ನೂ ಎಂದಿಗೂ ಶಾಂತಿಯುತನಾಗಿರಲಾರೆ. ನನ್ನ ಮಕ್ಕಳ ಹಾಗೂ ನಿಮ್ಮ ಮಕ್ಕಳ ಭವಿಷ್ಯದ ಜೊತೆಗೆ ಆಟವಾಡುವ ಯಾರ ಮೇಲಾದರೂ ಯುದ್ಧ ಮಾಡಲು ನಾನು ಸಿದ್ಧನಾಗಿದ್ದೇನೆ".

1981ರಿಂದ 1986ರವರೆಗೆ ಬ್ರಿಟನ್ನಿನ ಬರ್ಕ್‌ಶೈರ್‌ನ ಗ್ರೀನ್‌ಹ್ಯಾಂ ಕಾಮನ್ ಮಹಿಳೆಯರು ಅಣುಶಕ್ತಿಯ ಭಯವನ್ನು ಎದುರಿಸುವಲ್ಲಿ ತಾವು ಬಯಲುಗಳಲ್ಲಿ ಕ್ಯಾಂಪ್ ಮಾಡಲು, ತಮ್ಮನ್ನು ಸರಪಣಿ ಮಾಡಿಕೊಂಡು ರ್‍ಯಾಲಿಗೆ ಹೋಗಲು, ಜೈಲಿಗೆ ಹೋಗಲು, ಬೀದಿಗೆ ಇಳಿಯಲು, ವಾದ ವಿವಾದಗಳಿಂದ ಸ್ಥಳೀಯ ಪ್ರದೇಶಗಳಲ್ಲಿ ಪ್ರಚಾರ ಪಡೆಯಲು, ಅಗತ್ಯಬಿದ್ದರೆ ನಾಗರಿಕ ಅವಿಧೇಯತೆಯನ್ನು ತೋರಿಸಲು ಸಿದ್ಧರಿದ್ದೇವೆಂದು ತೋರಿಸಿಕೊಟ್ಟಿದ್ದಾರೆ. ನಾರ್ತ್ ಅಮೇರಿಕನ್ ಟ್ರೀಟೀ ಆರ್ಗನೈಜೇಶನ್ ಪ್ರಕಾರ ಅಮೇರಿಕನ್ ಕ್ರೂಸ್ ಮಿಸೆಲ್ಸ್ ಬ್ರಿಟನ್ನನ್ನು ಪ್ರವೇಶಿಸುವ ಸಲಹೆ - ಅಣುಶಕ್ತಿಯ ಭಯಾನಕತೆಯ, ಪುರುಷ ಪ್ರಭುತ್ವದ ಹಾಗೂ ಇಂಪೀರಿಯಲಿಸ್ಟ್ ಶೋಷಣೆಯ ಚಿಹ್ನೆಯಾಗಿತ್ತು. 'ವಿಮೆನ್ ಫಾರ್ ಲೈಫ್ ಆನ್ ಅರ್ಥ್'ನವರು ಸಂಘಟಿಸಿದ ಕ್ರಾಸ್ ಕಂಟ್ರಿ ಮಾರ್ಚ್ 1981ರಲ್ಲಿ ಕಾರ್‌ಡಿಫ್‌ನಿಂದ ಗ್ರೀನ್ ಹ್ಯಾಂನ ಯುನೈಟೆಡ್ ಸ್ಟೇಟ್ಸ್ ಏರ್ ಫೋರ್ಸ್ ಬೇಸ್‌ಗೆ ನಡೆದು ಹೋದ ನಂತರದಲ್ಲಿ ಗ್ರೀನ್ ಹ್ಯಾಂನ ಮಹಿಳೆಯರ ಶಾಂತಿ ಚಳುವಳಿ ಒಂದು ಸ್ವರೂಪ ಪಡೆಯಿತು. ಈ ಸ್ಫೂರ್ತಿದಾಯಕ ಮಾರ್ಚ್‌ನಲ್ಲಿ ಭಾಗವಹಿಸಿದ ನರ್ಸ್ ಹೆಲೆನ್ ಹೇಳುತ್ತಾರೆ, "ಒಬ್ಬ ಹೆಂಗಸಾಗಿ ನಾನು ನ್ಯೂಕ್ಲಿಯರ್ ಅಣ್ವಸ್ತ್ರಗಳಿಂದ ನನ್ನನ್ನು ರಕ್ಷಿಸಬೇಕಾಗಿಲ್ಲ ಎಂಬುದನ್ನು ಹೇಳಲು ನನಗೆ ಇದೊಂದು ಅವಕಾಶವಾಗಿತ್ತು. ಈ ಮಾರ್ಚ್‌ಗೆ ಹೋಗುವುದರ ಮೂಲಕ ಏನು ನಡೆಯುತ್ತಿದೆಯೋ ಅದು ನನಗೆ ಒಪ್ಪಿಗೆ ಇಲ್ಲ ಎನ್ನುವುದನ್ನು ತೋರಿಸಲು ಸಾಧ್ಯವಾಯಿತು. "ನಮ್ಮ ಮುಂದಿನ ಜನಾಂಗಕ್ಕೆ ಶಾಂತಿ ಹಾಗೂ ದೃಢವಾದ ಜಗತ್ತನ್ನು ಸೃಷ್ಟಿಸಲು ತಡವಾಗುವ ಮೊದಲೇ ಶಸ್ತ್ರಾಸ್ತ್ರಗಳ ಸ್ಪರ್ಧೆಯನ್ನು ಈಗಲೇ ನಿಲ್ಲಿಸಬೇಕು" ಎಂದು ಘೋಷಿಸಿದ ಮಹಿಳೆಯರು ಸೈನಿಕ ಪಡೆಯ ಸ್ಥಳದಲ್ಲಿ

ಬಿರುಗಾಳಿ ಎಬ್ಬಿಸಿದ್ದಲ್ಲದೇ ತಮ್ಮನ್ನು ತಾವು ಬೇಲಿಗೆ ಸರಪಣಿಯಿಂದ ಬಿಗಿದುಕೊಂಡು ವಿರೋಧ ತೋರಿಸಿದರು. ಜೊತೆಗೆ ಟಿ.ವಿ.ಯಲ್ಲಿ ರಕ್ಷಣಾ ಸೆಕ್ರೆಟರಿಯ ಜೊತೆಗೆ ಮುಕ್ತವಾದ ಚರ್ಚೆ ನಡೆಯಬೇಕೆಂಬ ಬೇಡಿಕೆಯನ್ನೂ ಇವರು ಇಟ್ಟರು. ಅದು ಸರ್ಕಾರದಿಂದ ತಿರಸ್ಕರಿಸಲ್ಪಟ್ಟಿತು.

ಮಹಿಳೆಯರ ಶಾಂತಿಯ ಕ್ಯಾಂಪ್ ಒಂದು ಸ್ಥಿರವಾದ ಪಿಕೆಟ್ ಆಗಿ, ಒಂದು ಪರ್ಯಾಯ ಜೀವನ ಶೈಲಿಯಾಗಿ, ಒಂದು ಸವಾಲಾಗಿ ಮುಖ್ಯವಾಹಿನಿಯಲ್ಲಿ ಸಮಾಜದಲ್ಲಿ ಕಾಣಿಸಿಕೊಂಡಿತು, ಹಾಗೂ ಸಾಂಪ್ರದಾಯಿಕ ಮೌಲ್ಯಗಳು ಮತ್ತು ಸಾಮಾಜಿಕ ರಚನೆಗಳಲ್ಲಿ ಮರು ಆಲೋಚನೆಗೆ ಒತ್ತಾಯಿಸಿತು. ಈ ಕ್ಯಾಂಪಿನಲ್ಲಿ ಪ್ರಾರಂಭದಿಂದಲೂ ಜೀವಿಸಿದ ಬಾರ್ಬರಾ ಹಾರ್ಡ್ ಫೋರ್ಡ್ ಮತ್ತು ಸೂಸಾನ್ ಹಾಪ್‌ಕಿನ್ಸ್ ಹೇಳುತ್ತಾರೆ, 'ಅಲೆ ಬೇರೆ ಕಡೆ ತಿರುಗುತ್ತದೆ, ಏಕೆಂದರೆ ಹೆಂಗಸರು ಅಲೆ ತಿರುಗುವುದನ್ನು ಖಂಡಿತವಾಗಿಸುತ್ತಾರೆ'. ಈ ರೀತಿ ಟೆಂಟ್‌ನಿಂದ ನಡೆದ ಶಾಂತಿಯುತ ಮುತ್ತಿಗೆಯಲ್ಲಿ ಒಂದು ಸಣ್ಣ ಹಳ್ಳಿಯ ಸಮುದಾಯ ಉದಯವಾಯಿತು. ಸ್ಥಳೀಯ ಜನರು ತಮ್ಮ ಸ್ನಾನದ ಕೊಠಡಿ ಹಾಗೂ ಟೆಲಿಫೋನುಗಳನ್ನು ಬಳಸಲು ನೀಡಿದರು. ಸ್ಲೀಪಿಂಗ್ ಬ್ಯಾಗ್, ಆಹಾರ ಸಾಮಗ್ರಿ, ಸ್ಟೇಷನರಿ, ಔಷಧಿಗಳನ್ನು ಸಾವಿರಾರು ಜನರು ದಾನವಾಗಿ ನೀಡಿದರು. ಈ ವಿಚಾರಧಾರೆಯನ್ನು ನಿತ್ಯ ಬದುಕಿನಲ್ಲಿ ನಿಜಗೊಳಿಸುವ ಯತ್ನಕ್ಕೆ ಅದ್ಭುತವಾದ ಸಹಾಕರ ವ್ಯಕ್ತವಾಯಿತು. ಬಿಳಿಯ ಹಾಗೂ ಮಧ್ಯಮ ವರ್ಗದವರಿಂದಲೇ ಪ್ರಾರಂಭವಾದ ಈ ಚಳುವಳಿ ಕ್ರಮೇಣವಾಗಿ ವರ್ಗ, ಜನಾಂಗ ಹಾಗೂ ಲಿಂಗಭೇದ ಬಂಧನಗಳನ್ನು ಮುರಿದು ಬೆಳೆಯತ್ತೊಡಗಿತು. ಕಾರ್ಮಿಕ ವರ್ಗದ, ಲೆಸ್‌ಬಿರ್ಯ ಹಾಗೂ ಬೇರೆ ವರ್ಣದ ಮಹಿಳೆಯರೂ ಈ ಚಳುವಳಿಯಲ್ಲಿ ಹೆಚ್ಚಾಗಿ ಭಾಗವಹಿಸತೊಡಗಿದರು.

ಪ್ರಾರಂಭದಿಂದಲೂ ಮಹಿಳೆಯರ ಕ್ರಿಯಾಶೀಲತೆಯನ್ನು ಪ್ರೋತ್ಸಾಹಿಸಿ, ಸಹಕಾರ ನೀಡಲ್ಪಟ್ಟಿದ್ದರೂ ಕ್ರಮೇಣವಾಗಿ 'ಹೆಂಗಸರು ಮಾತ್ರ' ಗ್ರೀನ್ ಹ್ಯಾಂ ಚಳುವಳಿಯಲ್ಲಿ ಇರಬೇಕೆನ್ನುವ ವಿಚಾರ ತೀವ್ರತರನಾಗಿ ಚರ್ಚೆಗೊಳಗಾಯಿತು. ಹಾಗೂ ಅಣುಶಕ್ತಿ ವಿರೋಧಿ ಕಾರ್ಯಕರ್ತರಲ್ಲಿ ಇದು ಒಂದು ರೀತಿಯ ದುಗುಡವನ್ನು ಹುಟ್ಟುಹಾಕಲು ಕಾರಣವಾಯಿತು. 'ಹೆಂಗಸರು-ಮಾತ್ರ' ಚಳುವಳಿಯಲ್ಲಿ ಎಂಬ ನಿರ್ಧಾರ ಒಂದು ಅರ್ಥದಲ್ಲಿ ತಾಂತ್ರಿಕ ಕಾರಣವನ್ನು ಹೊಂದಿತ್ತು. ಇದು ಚರ್ಚೆಗೆ ಬರುವಲ್ಲಿ ಸ್ಥಳದಿಂದ ಎತ್ತಂಗಡಿಯ ಭಯದಲ್ಲಿ ಹಾಗು ಬರಲಿದ್ದ ಮುತ್ತಿಗೆಯ ಸಲುವಾಗಿ ಕೂಡಾ. ಜೊತೆಗೆ ಹೆಂಗಸರೇ ಒಟ್ಟಾಗಿ ಕೆಲಸ ಮಾಡಬೇಕು ಎನ್ನುವ ಧೈರ್ಯದ ಭಾವನೆಯಲ್ಲಿ ಕೂಡಾ ಇದು ಚರ್ಚೆಗೆ ಬಂದಿತು. ಹೀಗೆಯೇ ಚರ್ಚೆಯ ನಂತರ ಅಹಿಂಸೆಯನ್ನು ಒಂದು ತಂತ್ರವಾಗಿ ಬಳಸಲಾಯಿತು. ಅಹಿಂಸೆಯನ್ನು ವಾಸ್ತವಿಕ ಅನುಕೂಲಗಳಿಗಾಗಿ ಹಾಗೂ ತಾತ್ವಿಕ ಶಿಸ್ತುಗಳಿಗಾಗಿ ಬಳಸಿಕೊಳ್ಳಲಾಯಿತು. ಹೇಗಂದರೂ ನಮ್ಮ ವಿರುದ್ಧ ಬಳಸಲ್ಪಾಗುವ ಸಂಪನ್ಮೂಲಗಳಿಗೆ ಸರಿಸಮನಾಗಿ ನಿಲ್ಲುವುದು ನಮಗೆ ಸಾಧ್ಯವಾಗುವುದಿಲ್ಲ. ಹಾಗಾಗಿ ನಮ್ಮ ಅಹಿಂಸೆಯಿಂದಾಗಿ ಯಾವುದೇ ಕಾನೂನು ಕ್ರಮಗಳ ಒತ್ತಡಗಳ ಮೂಲಕ ದಂಡಿಸುವುದನ್ನು ನ್ಯಾಯಬದ್ಧವಾಗಿಸಲು ಸಾಧ್ಯವಿಲ್ಲ. ವಿಶೇಷವಾಗಿ ಇಡಿಯ ಪ್ರಪಂಚ ಇದನ್ನು ಗಮನಿಸುತ್ತಿರುವುದಾಗಿ ಅಹಿಂಸೆಯ ವಿರುದ್ಧ ನ್ಯಾಯಬದ್ಧವಾಗಿ ದಂಡಿಸುವುದು ಕಷ್ಟವಾಗುತ್ತದೆ. ಜೊತೆಗೆ ಅಹಿಂಸೆಯನ್ನು ನಮ್ಮಲ್ಲಿ ಕೆಲವರು ತಮ್ಮ ಬದುಕಿನ ತತ್ವವಾಗಿ ಆರಿಸಿಕೊಂಡಿದ್ದಾರೆ. ಈ ತತ್ವದ ಮೇಲೆ ನಮ್ಮ ಎಲ್ಲಾ ನಡತೆಗಳು ಅವಲಂಬಿತವಾಗಿರಬೇಕು, ಬರಿಯ ರಾಜಕೀಯ ಕ್ಯಾಂಪೇನ್ ಮಾತ್ರವಲ್ಲ. ಹಿಂಸೆ-ಹಿಂಸೆಯನ್ನು ಪ್ರಚೋದಿಸಿ ಯಾರು ಇದನ್ನು ನೆಚ್ಚಿಕೊಂಡಿರುತ್ತಾರೋ ಅವರಿಗೆ ಹಾನಿ ಉಂಟುಮಾಡುತ್ತದೆ ಎಂಬ ನಂಬಿಕೆಯಿಂದಲೂ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ. "ವಿಧಾನ ಮತ್ತು ಫಲಿತಾಂಶಗಳು ಪೂರಕವಾಗಿರಬೇಕು". ಜೊತೆಗೆಯೇ ಶಾಂತಿಯ ಚಳುವಳಿಯು ಇತರೆಯ ಚಳುವಳಿಯ ಜೊತೆಗೆ ಸಂಪರ್ಕ ಹೊಂದಿರಬೇಕೆಂಬುದು ಬಲವಾದ ಭಾವನೆಯಾಗಿತ್ತು. "ಅಸಮಾನತೆ ನೆಲೆಸಿರುವಲ್ಲಿ ಶಾಂತಿ ನೆಲೆಸುವುದು ಸಾಧ್ಯವೇ ಇಲ್ಲ. ನಾವೆಲ್ಲ ಇದರಲ್ಲಿ ಒಂದೇ".

ಕ್ಯಾಂಪ್‌ನ ಪ್ರಾರಂಭದಿಂದಲೂ ಶ್ರೇಣೀಕೃತ ವ್ಯವಸ್ಥೆ ಇಲ್ಲದೇ ಕೆಲಸ ಮಾಡುವ ಶಿಸ್ತು ಇದೆ. "ಒಡೆದು ಹೋಗಿರುವ ಜಗತ್ತಿನಲ್ಲಿನ ನಮ್ಮ ಅನುಭವಗಳು ಕಲಿಸಿರುವುದೆಂದರೆ ಕೆಲವೇ ಮಂದಿ ಅಧಿಕಾರದಲ್ಲಿರುವುದು ಹಾಗೂ ಕೆಲವೇ ಮಂದಿ ಹಿಂಬಾಲಿಸುವುದಕ್ಕಾಗಿಯೇ ಇರುವುದು. ಹೀಗಾಗಿ ಅಣ್ವಸ್ತ್ರಗಳು 40 ವರ್ಷಗಳಲ್ಲಿ ಅಕ್ಷರಶಃ ಯಾವುದೇ ತೊಂದರೆಯಿಲ್ಲದೇ ಬೆಳೆಯತೊಡಗಿವೆ. ನಾವು ಬೆಳೆದಿರುವ ಜಗತ್ತಿನಲ್ಲಿ-ಮನೆಯಲ್ಲಿ ಹಾಗೂ ರಾಷ್ಟ್ರದಲ್ಲಿ ಸಮಸ್ಯೆಗಳನ್ನು ಬಗೆಹರಿಸಲು ಹಿಂಸೆ ಹಾಗೂ ಶೋಷಣೆಯನ್ನು ಬಳಸಿಕೊಳ್ಳಲಾಗುತ್ತಿದೆ. ಹಾಗಾಗಿ ನಾವು ತಳದಿಂದಲೇ ಪ್ರಾರಂಭಿಸುತ್ತಿದ್ದೇವೆ. ಶೋಷಣೆ ಅಥವಾ ಬಿಟ್ಟುಬಿಡುವ ಆಯ್ಕೆಗಳು ಅನಾವಶ್ಯಕ ಎಂಬ ನಡವಳಿಕೆ ಮತ್ತು ವಿಧಾನಗಳನ್ನು ಅಭಿವೃದ್ಧಿಪಡಿಸುತ್ತಿದ್ದೇವೆ. ಸಭೆಗಳಲ್ಲಿ ಸುತ್ತಲೂ ಕುಳಿತಿರುವ ಮಹಿಳೆಯರು ಸರದಿಯ ಪ್ರಕಾರ ಮಾತನಾಡುವ ಹಾಗೆ ಪ್ರತಿಯೊಬ್ಬ ಹೆಂಗಸಿಗೂ ಧ್ವನಿ ಕೊಡಲು ನಾವು ಪ್ರಯತ್ನಿಸುತ್ತೇವೆ. ಇದು ನಮಗೆ ಹೊಸದು, ಆಗಾಗ್ಗೆ ನಾವು

ಫೇಲ್ ಆಗುತ್ತೇವೆ, ಆದರೆ ಇದು ನಡೆಯಬೇಕು, ವೈಯಕ್ತಿಕ ಬದಲಾವಣೆ ಇದ್ದಾಗ ಮಾತ್ರ ರಾಜಕೀಯ ಬದಲಾವಣೆ ಕೂಡಾ ಹೆಚ್ಚು ಆಳವಾದದ್ದಾಗಿರುತ್ತದೆ ಹಾಗೂ ಗಟ್ಟಿಯಾಗಿರುತ್ತದೆ.

ಮಿಸೈಲ್ ಬೇಸ್ ಅಭಿವೃದ್ಧಿಯನ್ನು ತಡೆಗಟ್ಟಲು ಸ್ಫೂರ್ತಿದಾಯಕ ವಿರೋಧಗಳು ಕ್ರಿಯಾಶೀಲವಾಗಿ ಹುಟ್ಟಿಕೊಂಡವು. ಫೈರಿಂಗ್ ಮಾಡಲು ಸಿದ್ಧವಾಗಿರುವ ಮಿಸೈಲ್‌ಗಳನ್ನು ಇಡುವ ಗುಪ್ತ ಸ್ಥಳಗಳಲ್ಲಿ ಕೆಲಸ ಮಾಡಲು ಹೋಗುವ ಪುರುಷರನ್ನು ಹೆಂಗಸರು ತಡೆದು ನಿಲ್ಲಿಸತೊಡಗಿದರು, ತನಿಖೆ ಮಾಡುವ ಅಧಿಕಾರಿಗಳು ಮಿಸೈಲ್ ಬೇಸ್‌ಗೆ ಬಂದಾಗ ಅಲ್ಲಿ ಹೆಂಗಸರು ಇದ್ದಕ್ಕಿದ್ದ ಹಾಗೆಯೇ ಕಾಣಿಸಿಕೊಳ್ಳತೊಡಗಿದರು, ಪೈಪ್‌ಗಳನ್ನು ಹಾಕದೆ ಹಾಗೆ ನೆಲಗಳಲ್ಲಿ ಹಾಗೂ ಗೇಟ್‌ನ ಹತ್ತಿರ ನಿಂತು ವಿರೋಧಿಸತೊಡಗಿದರು. ಸೆಂಟ್ರಿಬಾಕ್ಸ್‌ಗೆ ಕಲ್ಲು ಬೀಸುವುದು ಹಾಗೂ ಅದನ್ನು ಆವರಿಸಿಕೊಳ್ಳುವುದು ಮಾಡತೊಡಗಿದರು. ಈ ರೀತಿಯ ಸಾಂಕೇತಿಕ ವಿರೋಧಗಳನ್ನು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಾಧ್ಯಮಗಳು ಪ್ರಚಾರಗೊಳಿಸತೊಡಗಿದವು. ಇದು ಮಹಿಳೆಯರು ಅಣುಬಾಂಬಿನ ವಿರುದ್ಧ ಹೋರಾಟ ಮಾಡಲು ನಿರ್ಧರಿಸಿದ್ದಾರೆಂಬುದನ್ನು ಯಾವಾಗಲೂ ನೆನಪಿಸುತ್ತಿತ್ತು.

1982ರ ಡಿಸೆಂಬರ್ 12ರಂದು 30,000 ಮಹಿಳೆಯರು 9 ಮೈಲಿಗಳ ದೂರದ ತನಕ ಮಾನವ ಸರಪಣಿ ಸೃಷ್ಟಿಸುವ ಮೂಲಕ ಮಿಸೈಲ್ ಬೇಸ್‌ಗೆ ಮುತ್ತಿಗೆ ಹಾಕಿದರು. ಪೊಲೀಸರ ಕ್ರೂರ ದಮನೀಯ ನಿಗ್ರಹಿಸುವಿಕೆಯ ಹಂತದಲ್ಲಿಯೇ ಮಹಿಳೆಯರು ಶಾಂತಿಯ ಹಾಡುಗಳನ್ನು, ಸಂತೋಷದ, ಧೈರ್ಯದ ಹಾಡುಗಳನ್ನು ಹಾಡಿದರು. ಜೈಲಿಗೆ ಎಳೆದುಕೊಂಡು ಹೋದವರ ಸ್ಥಳಗಳನ್ನು ಬೇರೆಯ ಕಾರ್ಯಕರ್ತರು ತುಂಬಿದರು. ಮರುದಿನ ಸಾವಿರಾರು ಮಹಿಳೆಯರು ಈ ಮಿಸೈಲ್ ಸ್ಥಳಕ್ಕೆ ಹೂವುಗಳನ್ನು ನೆಡಲು ತಂದರು. ಈ ಕ್ರಿಯೆ ಆಶಾದಾಯಕ ಹಾಗೂ ಮರುಹುಟ್ಟುವಿಕೆಯ ಸಂಕೇತವಾಗಿತ್ತು. 1983ನೆಯ ಜನವರಿ 1ರ ಮಧ್ಯರಾತ್ರಿ 44 ಮಹಿಳೆಯರು ಈ ಬೇಸ್‌ಗೆ ಕದ್ದು ತರಲಾದ ಏಣಿಗಳನ್ನು ಹಾಕಿ ಮಿಸೈಲ್‌ನ ಗುಪ್ತಸ್ಥಳಗಳಿಗೆ ನುಗ್ಗಿ 'ಡಾನ್ ಡ್ಯಾನ್ಸ್' ಮಾಡಿದರು. ಅಲ್ಲಿಯ ಸೈನಿಕ ರಚನೆಗಳ ಹಿನ್ನೆಲೆಯಲ್ಲಿ ಶಾಂತಿಗಾಗಿ ಬಿರುಸಾದ ನೃತ್ಯವನ್ನು ಮಾಡಿದರು.

ತಮಾಷೆಯೆಂದರೆ ಈ ಕ್ರಿಯೆಗಳಿಂದಾಗಿ ಮಹಿಳೆಯರು ಶಾಂತಿಯನ್ನು ಮುರಿದವರು, ಜಾಗ ಅತಿಕ್ರಮಣ ಮಾಡಲು ವಂಚನೆ ನಡೆಸಿದವರು ಎಂಬ ಅಪವಾದಗಳನ್ನು ಎದುರಿಸಬೇಕಾಯಿತು. ಆದರೆ ನ್ಯಾಯಾಲಯದ ಟ್ರಯಲ್‌ಗಳನ್ನು ಮಹಿಳೆಯರ ದೃಷ್ಟಿಕೋನ, ಅವರ ನಂಬಿಕೆ ಹಾಗೂ ತಾತ್ವಿಕತೆಯನ್ನು ವ್ಯಕ್ತಪಡಿಸಲು ರಾಜಕೀಯ ಅವಕಾಶಗಳನ್ನಾಗಿ ಬಳಸಿಕೊಳ್ಳಲಾಯಿತು. ಈ ವಿಚಾರ ಹರಡಿದ ಹಾಗೆ ಗ್ರೀನ್ ಹ್ಯಾಂ ಮಹಿಳೆಯರು ಇಡಿಯ ಜಗತ್ತಿನ ಸುತ್ತ ಪ್ರವಾಸ ಹೊರಟರು. ಐರ್ಲೆಂಡ್, ಮ್ಯಾನ್‌ಲೋಕೇನ ಹತ್ತಿರ ಸಿಲ್ಲೆ ಹಾಗೂ ಕಾಮಿಸೋ ಏರ್‌ಬೇಸ್, 112 ಅಮೇರಿಕನ್ ಕ್ರೂಯಿಸ್ ಮಿಸೈಲ್ಸ್‌ಗಳಿಗೆ ಈ ಎಲ್ಲಾ ಕಡೆಗಳಿಗೆ ಶಾಂತಿ ಕ್ಯಾಂಪ್‌ನ ಮಹಿಳೆಯರು ಹೋದರು, ನ್ಯೂಕ್ಲಿಯರ್ ಯುದ್ಧಕ್ಕೆ ಯಾವುದೇ ರಾಷ್ಟ್ರೀಯ ಗಡಿ ಇಲ್ಲ ಎಂಬುದನ್ನು ಬಲವಾಗಿ ನಂಬಿದ ಈ ಗ್ರೀನ್ ಹ್ಯಾಂನ ಮಹಿಳೆಯರು ಐರನ್ ಪರದೆಗಳನ್ನು ಹಾಕಿ, ನಿರ್ಬಂಧಿಸಲಾದ ದೇಶಗಳಿಗೂ ಪ್ರಯಾಣಿಸಿ ತಾವು ದ್ವೇಷಿಸಲು ಹಾಗೂ ಹೆದರಲು ಹೇಳಿಕೊಟ್ಟ ಮನುಷ್ಯರ ಜೊತೆ ಸಂಪರ್ಕವನ್ನು ಮಾಡಿಕೊಳ್ಳಲು ತೆರಳಿದರು. ಶಾಂತಿಯ ಗುಂಪಿನವರು ಹಾಗೂ ಇತರ ಕಾಳಜಿಯುಳ್ಳ ನಾಗರಿಕರು ಏರ್ಪಡಿಸಿದ್ದ ಸಭೆಗಳನ್ನು ಉದ್ದೇಶಿಸಿ ಮಾತನಾಡಲು ಅವರು ಹಂಗೇರಿ ಹಾಗೂ ಪೂರ್ವ ಜರ್ಮನಿಗೆ ತೆರಳಿದರು.

1983ರ ನವೆಂಬರ್ 14ರಂದು ಗ್ರೀನ್ ಹ್ಯಾಂಮ್ ಕ್ರೂಯಿಸ್ ಮಿಸೈಲ್ಸ್ ತಲುಪಿದ ದಿನವಾಗಿ ಅತ್ಯಂತ ದುಃಖಕರ ಸಂಗತಿಯಾಗಿ ಪರಿಣಮಿಸಿತು. ಥೆರೇಸಾ ಹೇಳುತ್ತಾರೆ, "ಇದೇ ಕೊನೆಯಲ್ಲ, ಇದು ಪ್ರಾರಂಭ ಮಾತ್ರ. ಒಳಗಿನ ಮೇಣ ಹಾಗೂ ಬೆಂಕಿ ಹೊತ್ತಿ ಉರಿಯುತ್ತಿದೆ. ಇನ್ನೂ ಇಚ್ಛಾಶಕ್ತಿಯಿದೆ. ಇನ್ನೂ ಆಸೆಯಿದೆ, ಇನ್ನೊಬ್ಬರ ಭಾವನೆಯನ್ನು ಉರಿಸುತ್ತಾ ಹಾಗೂ ಸ್ಫುರಿಸುತ್ತಾ ಹೋಗಬೇಕು, ಒಟ್ಟಾಗಿದ್ದರೆ ಮಾತ್ರ ನಾವು ಯಂತ್ರಗಳಿಗಿಂತ ಹೆಚ್ಚು ಶಕ್ತಿಶಾಲಿಯಾಗುತ್ತೇವೆ". ಅಸಂಖ್ಯಾತ ಸ್ಥಳಾಂತರ, ಚಳಿ, ಮಳೆ, ಮಂಜು, ಹಸಿವೆ, ಆಯಾಸಗಳು ಅನೇಕ ಸಮಯ ಇದ್ದರೂ ಈ ಮಹಿಳೆಯರು ತಮ್ಮ ಸ್ಫೂರ್ತಿಯನ್ನು ಬಿಟ್ಟು ಕೊಡಲಿಲ್ಲ. ಈ ಮಹಿಳಾ ಕ್ಯಾಂಪ್ ನಾಲ್ಕು ವರ್ಷಗಳ ಕಾಲ ಅಸ್ತಿತ್ವದಲ್ಲಿ ಇದ್ದಾಗ್ಯೂ ಸಹ ಅದು ಗ್ರೀನ್ ಹ್ಯಾಂನಲ್ಲಿ ಅಣುಶಕ್ತಿ ಯುದ್ಧೋಪಕರಣಗಳ ಪ್ಲಾಂಟ್ ಸ್ಥಾಪಿಸುವುದನ್ನು ನಿಲ್ಲಿಸಲಾಗಲಿಲ್ಲ. ಆದರೆ ಈ ಮಹಿಳೆಯರು ನ್ಯೂಕ್ಲಿಯರ್ ಯುದ್ಧ ಹಾಗೂ ಅದರಿಂದ ಸಂಭವಿಸುವ ನಾಶದ ಬಗ್ಗೆ ಇಡೀ ವಿಶ್ವದ ಗಮನವನ್ನು ಸೆಳೆಯುವಲ್ಲಿ ಸಮರ್ಥರಾದರು. "ನಮ್ಮ ಹಿಂದಿನ ದಿನಗಳ ಜಯವನ್ನು ನಾವೇ ನೆನಪಿಸಿಕೊಳ್ಳುವುದರ ಮೂಲಕ ನಮ್ಮ ಭವಿಷ್ಯಕ್ಕೆ ನಮ್ಮಲ್ಲಿರುವ ಸಾಮರ್ಥ್ಯವನ್ನು ನಾವೇ ಗುರುತಿಸುತ್ತೇವೆ".

ಈ ಲೇಖನವನ್ನು ಈ ಕೆಳಗಿನ ಪುಸ್ತಕಗಳನ್ನು ಆಧರಿಸಿ ಬರೆಯಲಾಗಿದೆ.

1. ಗ್ರೀನ್ ಹ್ಯಾಂ ಕಾಮನ್ : ವಿಮೆನ್ ಆಟ್ ದಿ ವೈರ್.
ಬಾರ್ಬರಾ ಹಾರ್ಡ್‌ಫೋರ್ಡ್ ಅಂಡ್ ಸಾರಾ ಹಾಪ್‌ಕಿನ್ಸ್
(ಸಂಪಾದಕರು)
ದಿ ವಿಮೆನ್ಸ್ ಪ್ರೆಸ್ : 1984.

2. ಓವರ್ ಅವರ್ ಡೆಡ್ ಬಾಡೀಸ್ : ವಿಮೆನ್ ಎಗೆನೆಸ್ಟ್
ದಿ ಬಾಂಬ್,
ಡರೋಥಿ ಥಾಮ್ಸನ್. (ಸಂಪಾದಕಿ)

ಗ್ರೀನ್ ಹ್ಯಾಂ-ಕಾಮನ್ - ಪುಸ್ತಕವು 'ಗ್ರೀನ್ ಹ್ಯಾಂ' ಮಹಿಳೆಯರು ಆಡಿರುವ ಮಾತು, ಅವರ ಕಾಳಜಿಯನ್ನು ದಿನಚರಿ, ಮ್ಯಾಗಜಿನ್, ಪತ್ರಗಳ ಮೂಲಕ ವ್ಯಕ್ತಪಡಿಸುತ್ತದೆ. ಯುದ್ಧೋಪಕರಣಗಳನ್ನು ನಾಶಕ್ಕಾಗಿ ಕಾದಿರಿಸುವ ಬೇಸ್‌ಗಳ ವಿರುದ್ಧ ಹೋರಾಡುವುದೆಂದರೆ ಸ್ಥಾಳಾಂತರ, ನ್ಯಾಯಾಲಯದಲ್ಲಿ ಕೇಸ್ ಎದುರಿಸುವುದು, ಜೈಲಿಗೆ ಹೋಗುವುದು ಇತ್ಯಾದಿಗಳಾಗಿರುವ ಅನುಭವವನ್ನೂ ಇದು ಹೇಳುತ್ತದೆ. ಜೊತೆಗೆ ಸಮಯ ಬಂದಾಗ ಟ್ರಕ್ಸ್ ಹಾಗೂ ಟ್ಯಾಂಕ್ಸ್ ಮುಂದೆ ಕುಳಿತುಕೊಳ್ಳುವುದು, ಬೇರೆ ಬೇರೆ ಬಗೆಯಲ್ಲಿ ನಿರಂತರವಾಗಿ ಸ್ಪಂದಿಸುವುದು, ಯುದ್ಧೋಪಕರಣಗಳಿಲ್ಲದ ಗರಿಲ್ಲಾ ಕ್ಯಾಂಪೇನ್ ಮಾಡುವುದು, ಪುರುಷರಿಗೆ ತಿಳಿದಿರುವ ಭಯಂಕರ ಯುದ್ಧೋಪಕರಣಗಳ ಬಗ್ಗೆ ವಿರೋಧ ವ್ಯಕ್ತಪಡಿಸುವುದು, ಹಾಗೂ ಒಟ್ಟಿಗೆ ಬದುಕುವ ಹೊಸ ಬದುಕಿಗಾಗಿ ಇತರರೊಡನೆ ಶೋಧನೆ ಮಾಡುವುದು ಇವೆಲ್ಲದರ ಬಗ್ಗೆ ಈ ಪುಸ್ತಕ ಬೆಳಕು ಚೆಲ್ಲುತ್ತದೆ.

'ಓವರ್ ಅವರ್ ಡೆಡ್ ಬಾಡೀಸ್'ನಲ್ಲಿ ಚರಿತ್ರಕಾರರು, ಕಾದಂಬರಿಕಾರರು, ಪತ್ರಿಕೋದ್ಯಮಿಗಳು, ಕವಿಗಳು, ಶಾಂತಿ ಚಳುವಳಿ ಹಾಗೂ ಶಾಂತಿ ಕ್ಯಾಂಪ್‌ನಲ್ಲಿ ಇರುವ ಮಹಿಳೆಯರು, ರಾಜಕೀಯ ಹಾಗೂ ಯುದ್ಧೋಪಕರಣಗಳ ಕಾರ್ಖಾನೆಯಲ್ಲಿರುವ ಹೆಂಗಸರು ಇವರ ಕಾಳಜಿಯನ್ನು ಒಟ್ಟಾಗಿ ಹಿಡಿಯುತ್ತದೆ. ಮಾಹಿತಿಯುಳ್ಳ ವಾದಗಳು, ವೈಯಕ್ತಿಕ ಇತಿಹಾಸ, ಕವನ, ನ್ಯೂಕ್ಲಿಯರ್‌ನ ಕ್ರೊನಾಲಜಿ ಅವುಗಳ ಮೂಲಕ ಈ ಪುಸ್ತಕವು ಶಾಂತಿ ಹಾಗೂ ಯುದ್ಧದ ಪ್ರಶ್ನೆಗಳು ರಾಜಕೀಯ ಹಾಗೂ ನೈತಿಕತೆಯ ಪ್ರಶ್ನೆಗಳು ಎಂದು ವಾದಿಸುತ್ತದೆ. ನೂಕ್ಲಿಯರ್ ಯುದ್ಧವನ್ನು ತಡೆಗಟ್ಟಲು ಸರಳವಾದ ಫಾರ್ಮುಲ ಇಲ್ಲ, ಆದರೆ ಲೇಖಕಿಯರ ಪ್ರಕಾರ, ಈ ಬಗ್ಗೆ ಹಲವಾರು ನಿಲುವುಗಳಿರುವುದರಿಂದ, ಈ ನಿಲುವುಗಳ ಪ್ರಕಾರ - ಇಷ್ಟು ಮುಖ್ಯವಾದ ಪ್ರಶ್ನೆಯನ್ನು ಪರಿಣಿತರ ಕೈಯಲ್ಲಿ ಬಿಡುವುದು ಸಾದ್ಯವಿಲ್ಲ. ರಾಷ್ಟ್ರೀಯ ನಾಯಕರು ಹಿಂದೆ ಯುದ್ಧಗಳನ್ನು ನಿಲ್ಲಿಸಿಲ್ಲ ಹಾಗಾಗಿ ಈಗ ನಿಲ್ಲಿಸುತ್ತಾರೆಂದು ನಂಬುವ ಹಾಗಿಲ್ಲ. ಈ ಪುಸ್ತಕದ ಸಂದೇಶವೆಂದರೆ - ಒಂದು ಆಸೆ, ಎಲ್ಲಿಯವರೆಗೆ ನಮಗೆ ಅರ್ಥವಾಗುತ್ತದೆಯೋ ವಾದಿಸುವುದು ಹಾಗೂ ಕ್ರಿಯಾಶೀಲರಾಗುವುದು.

●



ಪೋಖ್ರಾನ್ ಸ್ಫೋಟದ ಒಂದು ದೃಶ್ಯ

# ಅಮ್ಮನ ಕೊನೆಯ ಕಣ್ಣೀರು ಹೇಳಿದ್ದು ಏನು?

ನಾನು ನ್ಯಾಶನಲ್ ಎಲಿಮೆಂಟರಿ ಶಾಲೆಯ 6ನೇ ದರ್ಜೆಯಲ್ಲಿ ಓದುತ್ತಿದ್ದೆ. ದಿನಾಂಕ 12 ಏಪ್ರಿಲ್ 1945ರಂದು ಕೊನೆಯ ಬಾರಿಗೆ ಅಮ್ಮನೊಟ್ಟಿಗೆ ಶಾಲೆಗೆ ಹೋದೆ. ಹಿಂದಿನ ರಾತ್ರಿ ಅಪ್ಪ ತುಂಬಾ ಕಷ್ಟಪಟ್ಟು ಸಕ್ಕರೆ ತಂದಿದ್ದ. ಅಮ್ಮ ಸಿಹಿ ಅಕ್ಕಿ ಕಡುಬು ಮಾಡಿದ್ದಳು. ನಾವು ಮೂವರು ಒಟ್ಟಿಗೆ ಕೂತು ರಾತ್ರಿಯೂಟ ಮಾಡಿದ್ದು ಅದೆ ಕೊನೆ. ಶಾಲೆಯಲ್ಲಿ ಟೀಚರ್ ಏನು ಹೇಳಿದರೆಂದು ನೆನಪಿಲ್ಲ. ಬಹುಶಃ ಯುದ್ಧಭೀತಿಯಿಂದಾಗಿ ಮಕ್ಕಳನ್ನೆಲ್ಲ ಊರಾಚೆ ಕಳಿಸಲು ನಿರ್ಧರಿಸಿದ್ದರು. ಎಲ್ಲರ ಮಕ್ಕಳನ್ನು ಯೋಕೊಗಾವಾ ರೈಲು ನಿಲ್ದಾಣಕ್ಕೆ ಕರೆದುಕೊಂಡು ಹೋದರು. ತಂದೆ ತಾಯಂದಿರನ್ನು ಪ್ಲಾಟ್‌ಫಾರಂ ಬಳಿ ಬಿಡಲಿಲ್ಲ. ಟಿಕೇಟ್ ಕೊಡುವ ಸ್ಥಳದಿಂದಲೆ ಅಪ್ಪ ಅಮ್ಮಂದಿರು ನಮ್ಮನ್ನು ಕಳಿಸಬೇಕಿತ್ತು. ಅಮ್ಮನಿಗಾಗಿ ಹುಡುಕಾಡಿದೆ. ಸಿಗಲಿಲ್ಲ. ಕೇಡಿ ರೈಲು ಹೊರಟೆಬಿಟ್ಟಿತು. ಕೊನೆಯ ಬಾರಿಗೆ ಹಳೆಯ, ಮೌನ ಪಟ್ಟಣ ಹಿರೋಶಿಮಾವನ್ನು ಬಿಟ್ಟೆ.

ಅನೇಕ ಸಲ ರೈಲು ಬದಲಾಯಿಸಿ ಟ್ಸುಟ್ಸುಗಾ ಹಳ್ಳಿಯ ಸೈಹೋಜಿ ದೇವಾಲಯಕ್ಕೆ ಬಂದೆವು. ಅದೆ ನಮ್ಮ ವಸತಿ ಗೃಹವಾಗಿತ್ತು. ರಾತ್ರಿ ಒಳ್ಳೆ ಊಟ ಕೊಟ್ಟರು. ಅಪ್ಪ ಅಮ್ಮಂದಿರನ್ನು ಬಿಟ್ಟು ಬಂದದ್ದು ನೆನಪಾಗಿ ಎಲ್ಲ ಮಕ್ಕಳು ಅಳತೊಡಗಿದರು. ಮರುದಿನದಿಂದ ಹಳ್ಳಿಯಲ್ಲಿ ನಮ್ಮ ಜೀವನ ಪ್ರಾರಂಭವಾಯಿತು. ಹಳ್ಳಿಯಲ್ಲಿ ಚಳಿಯಿತ್ತು, ವಿಪರೀತ ಹೇನುಗಳ ಕಾಟವಿತ್ತು. ಅಲ್ಲಿನ ನಿತ್ಯದ ದಿನಚರಿಗಳಿಗೆ ಕೂಡಲೆ ಹೊಂದಿಕೊಂಡೆ.

ಜೂನ್ 30ರಂದು ಅಪ್ಪ ಅಮ್ಮಂದಿರನ್ನು ಬರಲು ಹೇಳಲಾಗಿತ್ತು. ನನಗೆ ತುಂಬಾ ಖುಷಿಯಾಯ್ತು. ದುಬಾರಿ ಉಡುಗೊರೆಗಳನ್ನಾಗಲಿ, ತಿಂಡಿಯನ್ನಾಗಲಿ ತರಬಾರದೆಂದು ಆಜ್ಞೆ ಮಾಡಲಾಗಿತ್ತು. ಆದರೆ ಬಹಳಷ್ಟು ಜನ ಉಲ್ಲಂಘಿಸಿದರು. ಆ ಕಾಲದಲ್ಲಿ ದುಬಾರಿ ಊಟವೆಂದರೆ ನಿಜಕ್ಕು ದುಬಾರಿಯಾದುದಲ್ಲ. ಅಮ್ಮ ಆಜ್ಞೆ ಅನುಸರಿಸಿ ಸರಳವಾದ ತಿಂಡಿಯನ್ನೆ ತಂದಿದ್ದರಿಂದ ನನಗೆ ಕೊಂಚ ಸಿಟ್ಟು ಬಂದಿತ್ತು. ಅಮ್ಮನ ಜೊತೆಯಲ್ಲಿದ್ದ ಮೇಲೆ ಸಿಟ್ಟು ಹೋಯ್ತು. ದೇವಸ್ಥಾನದ ಆವರಣದಲ್ಲಿ ಅಮ್ಮ ನನ್ನ ಉದ್ದನೆ ಕೂದಲು ಕತ್ತರಿಸಿದಳು. ನಂತರ ಇತರ ಮಕ್ಕಳ ಕೂದಲನ್ನು ಕತ್ತರಿಸಿದಳು. ಈಗಲೂ ಅವಳ ಕೈಲಿದ್ದ ಹೇರ್‌ಕ್ಲಿಪರ್ ನನಗೆ ಚೆನ್ನಾಗಿ ನೆನಪಿದೆ.

ಸಂಜೆಗೆ ಸಣ್ಣ ಔತಣಕೂಟವಿತ್ತು. ಆದಿನ ರಾತ್ರಿ ಅಮ್ಮನೊಟ್ಟಿಗೆ ಮಲಗಿದೆ. ಅಮ್ಮನೊಂದಿಗೆ ಇರುವಾಗ ಯುದ್ಧವಾಗಲಿ, ಊಟದ ಕೊರತೆಯಾಗಲಿ ನೆನಪಾಗಲಿಲ್ಲ. ಮತ್ತೆ ಅಮ್ಮನನ್ನು ಯಾವಾಗ ನೋಡುವೆನೆಂದು ಗೊತ್ತಿಲ್ಲದಿದ್ದರೂ ಅಮ್ಮ ಇದ್ದಷ್ಟು ಕಾಲ ಖುಷಿಯಾಗಿದ್ದೆ. ಮರುದಿನ ಬೆಳಿಗ್ಗೆ ಎಲ್ಲ ತಂದೆ ತಾಯಂದಿರು ಟ್ರಕ್ಕಿನಲ್ಲಿ ಹೊರಟರು. ಟ್ರಕ್ ಹೊರಡಲು ಶುರುವಾದೊಡನೆ ಎಲ್ಲ ಮಕ್ಕಳು ಹಿಂದೆ ಓಡತೊಡಗಿದರು. ಎಲ್ಲರೂ ಅಳುತ್ತಾ ಅವರ ಅಮ್ಮ ಅಪ್ಪಂದಿರನ್ನು ಕೂಗುತ್ತಿದ್ದರು. ಕಣ್ಣೀರಿನಿಂದಾಗಿ ಟ್ರಕ್ ಮಂಜಾಗತೊಡಗಿ ನಂತರ ಮರೆಯಾಯ್ತು.

ಹಳ್ಳಿಯಲ್ಲಿ ಜೀವನ ಕಷ್ಟದಿಂದ ಸಾಗುತ್ತಿತ್ತು. ಆದಿನ ಆಗಸ್ಟ್ 6 ಹಳ್ಳಿಯ ವಾತಾವರಣ ಚೆನ್ನಾಗಿತ್ತು. ಅಮ್ಮನನ್ನು ನೋಡಿ ತಿಂಗಳ ಮೇಲಾಗಿತ್ತು. ನಮ್ಮ ಕ್ಲಾಸಿನವರು ದೇವಾಲಯದ ಆವರಣದಲ್ಲಿ ತರಬೇತಿ ಪಡೆಯುತ್ತಿದ್ದೆವು. ಗಿನ್‌ಕ್‌ಗೊ ಮರಗಳಿಂದ ತಣ್ಣನೆ ಗಾಳಿ ಬೀಸುತ್ತಿತ್ತು. ಉಲ್ಲಾಸದ ಬೇಸಿಗೆ ಕುರಿತು ಹಾಡುತ್ತಿದೆ ಎನಿಸುತ್ತಿತ್ತು. ಇದ್ದಕ್ಕಿದ್ದ ಹಾಗೆ ನನ್ನ ಎಡಗೆನ್ನೆಗೆ ಬಿಸಿಯಾದುದೇನೋ ತಗುಲಿ ಹಿಂದಕ್ಕೆ ಹೋದಂತಾಯ್ತು. ಕನ್ನಡಿಯ ತೀಕ್ಷ್ಣ ಪ್ರತಿಫಲನದಂತೆನಿಸಿತು. ನಂತರ ಭಯಂಕರ ಶಬ್ದದಿಂದ ಇಡಿ ಹಳ್ಳಿ ನಡುಗಿತು. ಏನಾಯ್ತೆಂದು ಕಣ್ ಕಣ್ ಬಿಡುತ್ತಿದ್ದಾಗ ಬೆಟ್ಟಗಳ ಮೇಲಿಂದ ಮೋಡಗಳ ಪಟ್ಟಿಗಳು ಕಾಣಿಸಿತು. ಅದು ಮಾಮೂಲಿ ಮೋಡವಲ್ಲ. ಅಚ್ಚ ಗುಲಾಬಿ ಬಣ್ಣದ್ದು. ನಿಧಾನವಾಗಿ ಅದು ಅಣಬೆ ಆಕಾರದಂತಾಗಿ, ಆಕಾಶಕ್ಕೇರಿತು.

ದೇವಾಲಯದೊಳಕ್ಕೆ ಹಿಂತಿರುಗಿ ಬಂದಾಗ ಅಲ್ಲಿನ ಮೇಟ್ರನ್ ಕೂಡ ದೇವಾಲಯ ಅದುರಿದಂತಾಯ್ತು ಎಂದಳು. ಸಮಯ ಕಳೆಯುತ್ತಿದ್ದಂತೆ ಆಕಾಶ ಕಪ್ಪಾಗತೊಡಗಿತು. ಮಧ್ಯಾನದೊತ್ತಿಗೆ ಪೇಪರಿನ ಚೂರುಗಳು, ಇತರೆ ವಸ್ತುಗಳು ಆಕಾಶದಿಂದ ಬೀಳಲು ತೊಡಗಿತು. ಯಾವುದೋ ಆಯುಧಾಗಾರ ಸ್ಫೋಟಗೊಂಡಿರಬೇಕೆಂಬ ಸುದ್ದಿ ಹಬ್ಬಿತು. ನಮ್ಮ ಹಳ್ಳಿಯ ಪಕ್ಕದ ಹಳ್ಳಿಯಿಂದ fire engine ಬಂದು ಹಿರೋಶಿಮಾಗೆ ಹೊರಟಿದ್ದು ಬೆಂಕಿಯಿಂದಾಗಿ ಯೊಕೊಗಾವಾದಿಂದ ಮುಂದೆ ಹೋಗಲಾರದೆ ಹಿಂದೆ ಬಂದಿತೆಂಬ ಸುದ್ದಿ ತಿಳಿಯಿತು. ನಾನು

ಸಣ್ಣವನಾಗಿದ್ದರು ಏನೋ ಅನಾಹುತವಾಗಿದೆಯೆಂದು ಅರಿತುಕೊಂಡೆ. ಆದರೆ ದೊಡ್ಡನಗರ ಹೀರೋಶಿಮಾ ಒಂದು ಬೆಂಕಿ ಹಾಳೆಯಾಗಿದೆಯೆಂದು ಊಹಿಸಲಿಲ್ಲ. ಒಂದು ವಾರದ ಬಳಿಕ ಜಪಾನ್ ಯುದ್ಧದಲ್ಲಿ ಸೋತಿತೆಂದು ನಮ್ಮ ಟೀಚರ್ ತಿಳಿಸಿದರು. ದುಃಖವಾಯ್ತೋ ಆತಂಕವಾಯ್ತೋ ಎಂದು ಈಗ ನೆನಪಿಲ್ಲ.

ಸೆಪ್ಟೆಂಬರ್ ಶುರುವಿನಲ್ಲಿ ಮಡುಚಿಹೋದ ಪತ್ರವೊಂದು ಬಂತು. ಅದರಲ್ಲಿ ಅಮ್ಮನ ಹೆಸರಿತ್ತು. ಆದರೆ ಪತ್ರವನ್ನು ಅಮ್ಮ ಬರೆದಿರಲಿಲ್ಲ. "ನಾನು ಮಿಯಾಜಿಮಾ ರಿಸೆಪ್‌ಶನ್ ಸೆಂಟರ್‌ನಲ್ಲಿರುವೆ, ಕೂಡಲೆ ಬಾ" ಎಂದು ಬರೆಯಲಾಗಿತ್ತು. ಒಂದು ಸರಳ ಮ್ಯಾಪ್ ಅನ್ನು ಪತ್ರದಲ್ಲಿ ನೀಡಲಾಗಿತ್ತು. ಪತ್ರದಲ್ಲಿ ಅಮ್ಮನ ಕೈಬರಹ ಏಕಿಲ್ಲ ಎಂದುಕೊಂಡೆ. ಆದರೆ ಅವಳನ್ನು ನೋಡಬಹುದೆಂದು ಸಂತೋಷವಾಯ್ತು. ಸೆಪ್ಟೆಂಬರ್ ಎರಡರಂದು ಟೀಚರ್ ಯಮಕವಾರೊಂದಿಗೆ ಮಿಯಾಜಿಮಾಗೆ ಹೋದೆ. ಹೋಗುತ್ತಾ ಹಿರೋಶಿಮಾ ನೋಡಿದೆ ಇಡಿ ಊರು ಪಾಳು ಬಿದ್ದಿತ್ತು. ಎಲ್ಲಾ ಬಣ್ಣಗೆಟ್ಟ ಪೇಂಟಿಂಗ್‌ನಂತೆ ಕಾಣಿಸಿತು. ಅಮ್ಮನನ್ನು ನೋಡುವ ಆತುರ ಹೆಚ್ಚಾಯ್ತು. ಸೆಂಟರಿಗೆ ಬಂದೆವು. ಅದೊಂದು ದೊಡ್ಡ ಕಟ್ಟಡ, ದೇವಸ್ಥಾನದ ಉತ್ತರಕ್ಕಿತ್ತು. ಅದರ ಬಾಗಿಲಲ್ಲಿ ನಿಂತಾಗ ವಿಪರೀತ ಕಳವಳವಾಯ್ತು. ಆಗ ನನ್ನಲ್ಲುಂಟಾದ ಭಾವನೆ ವ್ಯಕ್ತಪಡಿಸಲು ಸಾಧ್ಯವಿಲ್ಲ.

ಟೀಚರೊಂದಿಗೆ ಅಮ್ಮನನ್ನು ಹುಡುಕುತ್ತಾ ಒಂದು ಸುತ್ತು ಬಂದೆ. ಎಲ್ಲೆಡೆ ಬಾಂಬ್ ಬಿದ್ದ ಮೇಲೆ ಉಳಿದುಕೊಂಡವರನ್ನು ಮಲಗಿಸಲಾಗಿತ್ತು. ಅಮ್ಮ ಕಾಣಲಿಲ್ಲ. ಎರಡನೆ ಸುತ್ತು ನೋಡಲು ಹೊರಟೆವು. ಒಬ್ಬೊಬ್ಬರ ಮುಖವನ್ನು ನೋಡುತ್ತಾ ಹೋದೆವು. ಅಮ್ಮನನ್ನು ಕಂಡು ಆಶ್ಚರ್ಯವಾಯ್ತು. ಅಮ್ಮ ಪುಟ್ಟದಾಗಿದ್ದಳು. ಈಗೆ ಇನ್ನೂ ಚಿಕ್ಕದಾಗಿ ಕಾಣುತ್ತಿದ್ದಳು. ಬಳಲಿ ಹೋಗಿ ನೆಲಕ್ಕೆ ಮುಖಮಾಡಿ ಮಲಗಿದ್ದಳು. ಅಳು ತಡೆದುಕೊಂಡು ಮೆಲ್ಲಗೆ ಕೂಗಿದೆ. ಉತ್ತರ ಬರಲಿಲ್ಲ. ಮತ್ತೊಮ್ಮೆ ಕೂಗಿದೆ. ಗುರುತಿಸಿ ಮೆಲ್ಲಗೆ ಸ್ವಲ್ಪವೇ ತಲೆ ಎತ್ತಿದಳು. ಹಿಂದಿದ್ದ ಟೀಚರ್‌ನನ್ನು ನೋಡಿ ಕೆಲವು ಬಿಲ್‌ಗಳನ್ನು ಕೊಡಲೆಂದು ಹೊರತೆಗೆದಳು. ಅದನ್ನು ತೆಗೆದುಕೊಳ್ಳದೆ ನನಗೆ ಸ್ಕೂಲಿನ ಕೆಲಸವಿರುವುದಾಗಿ ಹೇಳಿ ಟೀಚರ್ ಹೊರಟುಹೋದರು. ಅಪ್ಪ ಸತ್ತುಹೋದನೆಂದು ಅಮ್ಮ ಹೇಳಿದಳು. ಯುದ್ಧಕ್ಕೆ ಹೋದ ಅಣ್ಣ ಬದುಕಿರುವನೊ, ಸತ್ತಿರುವನೊ ತಿಳಿದಿರಲಿಲ್ಲ. ಅಪ್ಪ ಹೇಗೆ ಬೆಂಕಿಯಲ್ಲಿ ಸುಟ್ಟು ಸತ್ತಿರಬೇಕೆಂದು ಊಹಿಸಿಕೊಂಡಾಗ ಎದೆ ಹೊಡೆದುಕೊಂಡಿತು. ಮುಂದೇನೋ ಎಂಬ ಯೋಚನೆ ಬಂತು, ಏನಾಗಲಿ ಅಮ್ಮನೊಟ್ಟಿಗೇ ಇರಬೇಕು, ಬೇರೆಲ್ಲೂ ಹೋಗಬಾರದೆಂದುಕೊಂಡೆ.

ಅಮ್ಮ ಬೆನ್ನ ಮೇಲಿನ ಬಟ್ಟೆ ತೆಗೆಯಲು ಹೇಳಿದಳು. ಬೆನ್ನೆಲ್ಲ ಸುಟ್ಟು ಹೋಗಿತ್ತು. ಸುಟ್ಟ ಗಾಯದಿಂದಾಗಿ ಅಮ್ಮ ನೆಲಕ್ಕೆ ಮುಖ ಮಾಡಿ ಮಲಗುತ್ತಿದ್ದಳು. ನನ್ನಮ್ಮನಂತವಳಿಗೆ ಈ ಹಿಂಸೆಯಾಕೆ ಎಂದು ಕೋಪ ಉಕ್ಕಿ ಬಂತು. 2 ರಾತ್ರಿ 3 ದಿನಗಳು ಅಮ್ಮನನ್ನು ನೋಡಿಕೊಂಡೆ. ಅಲ್ಲಿ ಔಷಧಿಯ ಕೊರತೆ ಇತ್ತು. ಅಮ್ಮ ಅಲ್ಲಿಗೆ ಬಂದಾಗ ಚೆನ್ನಾಗಿದ್ದಳಂತೆ, ಬೇರೆಯವರ ಬಟ್ಟೆಯನ್ನು ತೊಳೆಯುತ್ತಿದ್ದಳಂತೆ, ದಿನೆ ದಿನೆ ಅವಳ ಪರಿಸ್ಥಿತಿ ಹದಗೆಟ್ಟು ಈಗ ಮೈಯನ್ನೂ ಕೊಂಚ ಅಲ್ಲಾಡಿಸುವಷ್ಟು ಅವಳಿಗೆ ತ್ರಾಣವಿರಲಿಲ್ಲ. ತ್ಸುರುಮಿ ಸೇತುವೆ ಬಳಿ ಕಟ್ಟಡ ಒಡೆದು ಹಾಕುವ ಕೆಲಸದಲ್ಲಿ ನಿರತಳಾಗಿದ್ದಾಗ ಬಾಂಬ್ ಸಿಡಿಯಿತು. ಅವಳ ಎದುರಿಗೇ ತಕಾಯ್ ತಕ್ಷಣವೇ ಉರಿಗೆ ಸಿಕ್ಕಿ ಸತ್ತಳು. ನನಗೇನು ಮಾಡಲಾಗಲಿಲ್ಲ ಎಂದು ಅಮ್ಮ ಹೇಳಿದಳು. ಓಡಿ ಹೋಗಿ ಹತ್ತಿರದಲ್ಲಿದ್ದ ಹಿಜಿಯಾಮ ಗುಡ್ಡ ಹತ್ತುವಾಗ ಅಮ್ಮನ ಬೆನ್ನು ಸುಟ್ಟುಹೋಗಿತ್ತು. ಗುಡ್ಡದ ಮೇಲಿಂದ ನಗರವನ್ನು ನೋಡಿದಾಗ ಅದೊಂದು ನರಕದಂತೆ ಕಂಡಿತೆಂದು ಅಮ್ಮ ಹೇಳಿದಳು. ನಂತರ ಇತರರೊಂದಿಗೆ ಅವಳನ್ನು ಸೆಂಟರ್‌ಗೆ ತರಲಾಗಿತ್ತು. ಅವಳ ಮೈಯ ಆಳದೊಳಕ್ಕೆ ನುಗ್ಗಿದ್ದ ಆ ಭೀಕರ ಗ್ಯಾಸ್ ಮೂಳೆ ಇತರ ಮುಖ್ಯ ಅಂಗಗಳನ್ನು ನಾಶಪಡಿಸಿತ್ತು. ಹಸಿವೆ ಸಂಪೂರ್ಣವಾಗಿ ಹಿಂಗಿಹೋಗಿತ್ತು. ಅಮ್ಮನ ಉಚ್ಚೆಯನ್ನು ಯಾರು ಒರೆಸಿಲ್ಲದೆ ಆಕೆಯ ದೇಹದ ಕೆಳಭಾಗ ನಾರುತ್ತಿತ್ತು. ಆಕೆಯ ಕಕ್ಕಸ್ಸು ಮನುಷ್ಯರ ಕಕ್ಕಸ್ಸಿನಂತಿರದೆ ಅಚರ ವಾಸನೆ, ಬಣ್ಣ, ದೇಹದೊಳಗಿನ ಅಂಗಗಳು ಕರಗಿ ಅಂಟಿನ ದ್ರವವಾಗಿರುವಂತೆ ಅನಿಸುತ್ತಿತ್ತು. ಸಾಧ್ಯವಾದಷ್ಟು ಸ್ವಚ್ಛಗೊಳಿಸಲು ತೀರ್ಮಾನಿಸಿದೆ. 2ನೇ ದಿನ ರಾತ್ರಿ ಅಮ್ಮ ಮೆಲ್ಲಗೆ ಕೂಗಿದಳು. ನಿದ್ದೆ ಬರುತ್ತಿದ್ದರಿಂದ ಕೇಳಿಸಿದರೂ ಕೇಳಿಸದಂತಿದ್ದೆ. ಅಮ್ಮ ಮತ್ತೊಮ್ಮೆ ಕರೆದಳು. ಆದರೆ ಮತ್ತೇನೂ ಹೇಳಲಿಲ್ಲ. ಇದನ್ನು ಯಾವಾಗ ನೆನಸಿಕೊಂಡಾಗಲೂ ನನ್ನೆದೆಯೊಳಗೆ ಛಳಕು ಬಂದಂತಾಗುತ್ತದೆ. ಅಮ್ಮ ಮಾತನಾಡಲಾರದಷ್ಟು ನಿತ್ರಾಣಳಾಗಿದ್ದಳು. ಕ್ಷೀಣವಾಗಿ ನಗುತ್ತಿದ್ದಳು. ಕಿಟಕಿಯಲ್ಲಿ ಕೆಲವೊಮ್ಮೆ ಹಾರಾಡುತ್ತಿದ್ದ B-29 Boberನನ್ನು ನೋಡಿದಾಗಲೆಲ್ಲ 'Idiot' ಎಂದು ಒಬ್ಬನೆ ಕೂಗುತ್ತಿದ್ದೆ. (ಇದಷ್ಟೆ ನನ್ನ ಪ್ರತಿಭಟನೆಯಾಗಿತ್ತು). ಒಬ್ಬನೆ ಕಕ್ಕಸ್ಸು ರೂಮಿನೊಳಗೆ ಸದ್ದಿಲ್ಲದೆ ಅಳುತ್ತಿದ್ದೆ.

ಸೆಪ್ಟೆಂಬರ್ 4ರಂದು ಮಧ್ಯಾನದ ಊಟದೊತ್ತಿಗೆ ಅಮ್ಮ ನೋವಿನಿಂದ ನರಳತೊಡಗಿದಳು. ಅವಳ ವಿಚಿತ್ರ ಹೊರಳಾಟದಿಂದ ನನಗೆ ಗಾಬರಿಯಾಯಿತು. ಸುಮ್ಮನೆ ನಿಂತು ನರಳುವ ಅಮ್ಮನನ್ನು ನೋಡುವುದಷ್ಟೇ ನನಗೆ ಸಾಧ್ಯವಾದದ್ದು. 30 ನಿಮಿಷಗಳು ನರಳಾಡಿದ ಮೇಲೆ ಮೌನವಾದಳು. ಅದು ಅಂತಿಮ ಮೌನ, ಜೀವ ಕೊನೆಗೊಂಡ ಸಂಕೇತವದು. ಅವಳ ಹೆಸರಿಡಿದು ಅವಳನ್ನು ತಬ್ಬಿಕೊಂಡು ಕೂಗುತ್ತಲೆ ಇದ್ದೆ. ಮಾತನಾಡದ ಅಮ್ಮನ ಕಣ್ಣಲ್ಲಿ ನೀರು ತುಂಬಿದ್ದು ಕೆನ್ನೆಯ ಮೇಲೆ ಹರಿಯಿತು. ಆ ಕಣ್ಣೀರು ತಾಯಿ ಮಗನ ಅಂತಿಮ ವಿದಾಯಕ್ಕೊ ಅಥವಾ ನನ್ನ ಭವಿಷ್ಯದ ಬಗೆಗಿನ ಆತಂಕವೊ ಗೊತ್ತಿಲ್ಲ. ಆ ದಿನ ನೋಡಿದ ನನ್ನಮ್ಮನ ಕಣ್ಣೀರನ್ನು ಮರೆಯಲು ಸಾಧ್ಯವೇ ಇಲ್ಲ. ಅಮ್ಮನ ಮುಖದ ಮೇಲೆ ಬಿಳಿ ಬಟ್ಟೆ ಮುಚ್ಚಿದಾಗಲೂ ನಾನು ಅಳುತ್ತಲೇ ಇದ್ದೆ. ಬೇಸರದಿಂದ ಕೆಲವರು ಸುಮ್ಮನಿರೆಂದು ಹೇಳಿದರು. ನನಗೆ ಅತ್ಯಂತ ಅಮೂಲ್ಯವಾದ ನನ್ನಮ್ಮ ಸತ್ತಾಗ ನಾನು ಅಳಬಾರದೆ? ಸಂಜೆಯವರೆಗೆ ನನ್ನ ಕಣ್ಣೀರು ನಿಲ್ಲುವುದನ್ನೇ ಮರೆತುಬಿಟ್ಟಿತ್ತು.

ಹಿಂತಿರುಗಿ ನನ್ನನ್ನು ದೇವಾಲಯಕ್ಕೆ ಕರೆತರಲಾಯ್ತು. ಮನೆಯಿದ್ದ ಮಕ್ಕಳು ಖುಷಿಯಾಗಿ ವಾಪಸ್ಸು ಹೋದರು. ಎಲ್ಲ ಮಕ್ಕಳು ತಂದೆಯನ್ನೊ, ತಾಯಿಯನ್ನೊ, ಇನ್ಯಾರೂ ಕುಟುಂಬದವರನ್ನೊ ಕಳೆದುಕೊಂಡಿದ್ದರು. ನಾನೊಬ್ಬನೇ ಎಲ್ಲರನ್ನೂ ಕಳೆದುಕೊಂಡ ನತದೃಷ್ಟ. ಅನಾಥಾಲಯ ಬಿಟ್ಟರೆ ಹೋಗಲು ಬೇರೆ ಜಾಗವೇ ಇರಲಿಲ್ಲ. ದೇವಾಲಯದಲ್ಲಿ ಕೊನೆಗೆ ಉಳಿದವನು ನಾನು, ಇನ್ನಿಬ್ಬರು. ಅಷ್ಟು ದೊಡ್ಡ ದೇವಾಲಯದಲ್ಲಿ ಮೂವರೇ ಇರುವುದು ಬೇಡವೆಂದು ಪಕ್ಕದ ಹಳ್ಳಿ ತೊಗೊಚಿಯ ದೇವಾಲಯದಲ್ಲಿ ಅಲ್ಲಿನ ಮಕ್ಕಳೊಂದಿಗೆ ಇರಲು ತೀರ್ಮಾನವಾಯಿತು. ಅಕ್ಟೋಬರ್ 3ರಂದು ಅಲ್ಲಿಗೆ ಹೊರಟೆವು. ಎಲ್ಲವು ಮೌನವಾಗಿತ್ತು, ತಟಸ್ಥವಾಗಿತ್ತು. ನಾನು 11 ವರ್ಷದ ಹುಡುಗ, ಮುಂದಿನ ಹಸಿವು, ಒಂಟಿತನದ ಭಯವಿಲ್ಲದೆ ಆ-ಮರಗಳಾಚೆಗೆ ಓಡುತ್ತಿದ್ದೆ. ನಡುವೆ ನನ್ನ ಹೆಜ್ಜೆಗಳ ಸದ್ದಿಗೆ ನಡುಗುತ್ತಿದ್ದೆ. ಓಡುತ್ತಲೇ ಇದ್ದೆ, ಹಳ್ಳಿಯನ್ನು ಬೇಗ ಸೇರುವ ಹಂಬಲದಿಂದ.

*- ಟಡಟಕ ಕುರಿ ಬಯಶಿ*

*ಬಾಲ್ಯದಲ್ಲಿ ಹಿರೋಶಿಮಾದ ಮೇಲೆ ಅಮೆರಿಕಾ ಹಾಕಿದ ಅಣುಬಾಂಬ್‌ನ ಅನ್ಯಾಯವನ್ನು ಕಂಡ ಲೇಖಕರು 30 ವರ್ಷಗಳ ಬಳಿಕ 1994ರಲ್ಲಿ ತಮ್ಮ ಅನುಭವವನ್ನು ಕುರಿತು ಬರೆದರು. ಲೇಖಕರು ದಿ ರೇಡಿಯೇಶನ್ ಇಫೆಕ್ಟ್ಸ್ ರಿಸರ್ಚ್ ಫೌಂಡೇಶನ್‌ನಲ್ಲಿ 34 ವರ್ಷಗಳು ದುಡಿದಿದ್ದಾರೆ. ಇಂದಿನ ಯುವ ಜನಾಂಗಕ್ಕೆ ಆ ದಿನಗಳಲ್ಲಿ ಆದ ಘಟನೆ ಬಗ್ಗೆ ಯಾವ ಕಲ್ಪನೆಯೂ ಇಲ್ಲ. ಅವರಿಗೆ ನನ್ನಂತೆ ಅನುಭವ ಪಡೆದ ಅನೇಕರು ಇನ್ನೂ ಬದುಕಿದ್ದಾರೆ ಎಂಬುದು ತಿಳಿಯಬೇಕು ಎನ್ನುತ್ತಾರವರು.*



# ಯುದ್ಧವಿಲ್ಲದಿದ್ದರೆ ನಾವು ಸಂತೋಷದಿಂದಿರಬಹುದಿತ್ತು

ಆ ದಿನ ಬೆಳಿಗ್ಗೆ ನನ್ನ ಮಗಳೊಂದಿಗೆ ಮನೆ ಬಿಟ್ಟೆ. ಮಗಳು ಇಂಡಸ್ಟ್ರಿಯಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ಕೆಲಸ ಮಾಡುತ್ತಿದ್ದಳು. ಆ ದಿನ air raid waringನೀಡಲಾಗಿತ್ತು. ನಾನು ಮನೆಗೆ ಹಿಂದಿರುಗಿದೆ. ಮರುದಿನ ಮಗಳು ಕೆಲಸಕ್ಕೆ ಹೋಗುವೆನೆಂದು ಹೊರಟಳು. ನಾನು ಮನೆಯಲ್ಲಿದ್ದೆ. ಹಾಸಿಗೆ ಮಡಿಸಿಟ್ಟು ಕಿಟಕಿ ತೆಗೆದೆ, ಕಣ್ಣು ಕೋರೈಸುವ ಬೆಳಕು ಕಂಡೆ. ಕ್ಯಾಮರಾ ಫ್ಲಾಶ್‌ಗಿಂತ ಹತ್ತು, ನೂರು, ಸಾವಿರ ಪಾಲು ಕೋರೈಸುವ ಬೆಳಕದು, ಕಣ್ಣು ಕುಕ್ಕಿದಂತಾಗಿ ದಿಗ್ಭ್ರಮೆಯಾಯ್ತು. ಕಿಟಕಿ ಗಾಜು ಒಡೆದು ನೆಲದ ಮೇಲೆಲ್ಲ ಹರಡಿತ್ತು. ಮಗಳಿಗೇನಾಗಿದೆಯೋ ಎಂದು ಕಳವಳವಾಯ್ತು. ಗಾಜನೆಲ್ಲ ಗುಡಿಸಿ ಹಾಕಿ ಬೂಟು ತೊಟ್ಟು ಛತ್ರಿಯೊಂದಿಗೆ ಹೊರಡಲು ಸಿದ್ಧಳಾದೆ. ಹಿರೋಶಿಮಾ ಬಳಿಯಿದ್ದ ರೈಲ್ವೆ ನಿಲ್ದಾಣಕ್ಕೆ ಹೊರಟೆ. ದಾರಿಯಲ್ಲಿ ಹುಡುಗಿಯೊಬ್ಬಳು ಬರುತ್ತಿದ್ದಳು. ಅವಳ ಚರ್ಮ ಹರಿದು ನೇತಾಡುತ್ತಿತ್ತು. ಅವಳು ನಗ್ನಳಾಗಿದ್ದಳು. "ಅಮ್ಮ ನೀರು, ಅಮ್ಮ ನೀರು" ಎಂದು ಕೇಳಿದಳು. ನನ್ನ ಮಗಳೆ? ಎಂದು ನೋಡಿದೆ. ಅವಳು ನನ್ನ ಮಗಳಾಗಿರಲಿಲ್ಲ. ಅವಳಿಗೆ ನಾನು ನೀರು ನೀಡದೆ ಮಗಳನ್ನು ಹುಡುಕಲು ರೈಲ್ವೆ ನಿಲ್ದಾಣಕ್ಕೆ ಒಂದೇ ಸಮ ಓಡಿದೆ. ಈಗ ಅನಿಸುತ್ತೆ ಆ ಹುಡುಗಿಗೆ ನಾನು ನೀರು ಕೊಡದೆ ತಪ್ಪು ಮಾಡಿದೆನೆಂದು. ಏನು ಮಾಡಲಿ, ನನ್ನ ತಲೆಯ ತುಂಬಾ ಮಗಳೇ ತುಂಬಿಕೊಂಡಿದ್ದಳು. ನಿಲ್ದಾಣದ ತುಂಬಾ ಜನರೇ ತುಂಬಿದ್ದರು. ಕೆಲವರು ಸತ್ತು ಹೋಗಿದ್ದರು, ಕೆಲವರು ಮಲಗಿದ್ದರು. ನೀರು ನೀರು ಎಂದು ತಾಯಂದಿರನ್ನು ಕೂಗುತ್ತಿದ್ದರು. ನನ್ನ ಮಗಳ ಕಛೇರಿ ತಲುಪಲು ನಾನು ಟೋಕಿವಾ ಸೇತುವೆಯನ್ನು ದಾಟಬೇಕಿತ್ತು. ಜನರು ಕೂಗುತ್ತಿದ್ದರು. ಸೇತುವೆ ದಾಟಲು ಸಾಧ್ಯವಿಲ್ಲ ಹಿಂದೆ ಬಾ ಎಂದು. ಕೆಲವರು ದಾಟಲು ಹೋಗಿ ಸಾಧ್ಯವಾಗದೆ ಹಿಂದೆ ಬಂದರೆಂದು ಹೇಳಿದ್ದರಿಂದ ನಾನೂ ಹಿಂದೆ ಬಂದೆ. ಮಗಳು ಹಿಂತಿರುಗಿ ಬಂದಿರಬಹುದೆಂದುಕೊಂಡೆ. ಹಿಂತಿರುಗಿ ಬರುವಾಗ ಮಳೆ ಜೋರಾಗಿ ಬೀಳಲು ಶುರುವಾಯ್ತು. ಕಪ್ಪು ಮಳೆ! ತಲೆಯ ಮೇಲೆ ಛತ್ರಿ ಇತ್ತು. ತಲೆಯ ಮೇಲೆ ಮಳೆ ಬೀಳಲಿಲ್ಲ, ಕೈಗಳ ಮೇಲೆ ಬೀಳುತ್ತಿತ್ತು. ಓಡುತ್ತಲೆ ಮನೆ ಸೇರಿದೆ. ಮಗಳು ಬಂದಿರಲಿಲ್ಲ. ಕಿಟಕಿಗಳನ್ನು ತೆರೆದಿರಿಸಿಕೊಂಡು ಅವಳಿಗಾಗಿ ಕಾದೆ. ಇಡಿ ರಾತ್ರಿ ಕಣ್ಣು ಬಿಟ್ಟುಕೊಂಡು ಕಾದೆ. ಮಗಳು ಬರಲಿಲ್ಲ. 7ನೇ ತಾರೀಖು ಬೆಳಗ್ಗೆ ನನ್ನ ಮಗಳ ಜೊತೆ ಕೆಲಸ ಮಾಡುತ್ತಿದ್ದವಳ ತಂದೆ ಇಶಿಡೊ ಹೊರಗೆ ನನ್ನ ಹೆಸರಿಡಿದು ಕೂಗುತ್ತಿದ್ದರು. ಹೊರಬಂದು ಇಲ್ಲಿ ಇಲ್ಲಿ ಎಂದು ಕೂಗಿದೆ. ಇಶಿಡೊ ನನ್ನ ಬಳಿ ಬಂದು ಹೇಳಿದರು. "ಬೇಗ, ಸ್ವಲ್ಪ ಬಟ್ಟೆಗಳನ್ನು ತೆಗೆದುಕೊ, ಅವಳ ಬಳಿ ಹೋಗೋಣ" ನಿಮ್ಮ ಮಗಳು ಓಟಾ ನದಿ ದಡದಲ್ಲಿದ್ದಾಳೆ". ತುಂಬಾ ತುಂಬಾ ಧನ್ಯವಾದಗಳು, ಅವಳು ಬದುಕಿದ್ದಾಳೆಯೇ? ಎಂದು ಕೇಳಿದೆ. ಅವರು ಅವಳು ಬದುಕಿದ್ದಾಳೆ, ನಾನು ದಾರಿ ತೋರಿಸುತ್ತೇನೆ ಬನ್ನಿ ಎಂದರು. ನಾನು ನನ್ನೊಂದಿಗೆ ಯುಕಟಾಳನ್ನು ಕರೆದುಕೊಂಡು ಹೋದೆ. ನೆರೆಯವರು ಸ್ಟ್ರೆಚರ್ ನೀಡಿದರು. ನಾನು ಜೋರಾಗಿ ಓಡಲು ಶುರು ಮಾಡಿದೆ. ನನ್ನೊಂದಿಗೆ ಬರುತ್ತಿದ್ದವರು ನಿಧಾನ ನಿಧಾನ ಜಾಗೃತೆ ಪೆಟ್ಟು ಮಾಡಿಕೊಳ್ಳಬೇಡಿ ಎಂದು ಹೇಳುತ್ತಿದ್ದರು. ನಾನು ಟೋಕಿವಾ ಸೇತುವೆ ತಲುಪಿದಾಗ ಅಲ್ಲಿ ಕೆಲವರು ಸೈನಿಕರು ನೆಲದ ಮೇಲೆ ಬಿದ್ದಿದ್ದರು. ಹಿರೋಶಿಮಾ ನಿಲ್ದಾಣದ ಬಳಿ ನಿನ್ನೆಗಿಂತ ಇಂದು ಅನೇಕರು ಸತ್ತು ಬಿದ್ದಿದ್ದರು. ನದಿ ತೀರ ತಲುಪಿದಾಗ ಯಾರು ಯಾರೆಂದು ಕಂಡುಹಿಡಿಯಲಾಗಲಿಲ್ಲ. ನನ್ನ ಮಗಳು ಎಲ್ಲೆಂದು ನೋಡುತ್ತ ನಿಂತೆ ಆಗ ಮಗಳು ಅಮ್ಮಾ ಎಂದು ಕೂಗಿದಳು. ಅವಳ ದನಿಯನ್ನು ನಾನು ಗುರುತಿಸಿದೆ. ಅತ್ಯಂತ ದಾರುಣ ಸ್ಥಿತಿಯಲ್ಲಿ ಅವಳಿದ್ದಳು. ಮುಖ ಭೀಕರವಾಗಿ ಕಾಣುತ್ತಿತ್ತು. ಈಗಲೂ ಕನಸಿನಲ್ಲಿ ಕೆಲವು ಸಲ ಹಾಗೇ ಕಾಣಿಸುತ್ತಾಳೆ. ಅವಳನ್ನು ಕಂಡಾಗ ಅವಳೆಂದಳು "ಯುದ್ಧವೇ ಇರಬಾರದು'' ಅಲ್ಲಿ ನಾನು ಏಕಾಕಿಯಾಗಿ ಏನು ತೋಚದೆ ಇದ್ದೆ. ಅವಳ ಗಾಯದಲ್ಲಿ ಹುಳುಗಳು ಇದ್ದವು. ಅಂಟುಅಂಟಿನ ಹಳದಿ ಕೀವು, ಬಿಳಿದ್ರವವು ಅವಳ ಗಾಯದಿಂದ ಬರುತ್ತಿತ್ತು. ಏನಾಗುತ್ತಿದೆಯೆಂದು ನನಗೆ ತಿಳಿಯಲಿಲ್ಲ. ಅವಳ ಚರ್ಮ ಹಾಗೆ ಕಿತ್ತು ಬರುತ್ತಿತ್ತು. ಎಲ್ಲಾ ಕಡೆಯಿಂದಲೂ ಹುಳುಗಳು ಬರುತ್ತಿತ್ತು. ನಾನೇನು ಮಾಡುತ್ತಿದ್ದೇನೆಂದು ಮಗಳು ಕೇಳಿದಳು. ಏನಿಲ್ಲ ಎಂದೆ ತಲೆಯಾಡಿಸಿದಳು. ಒಂಭತ್ತು ಗಂಟೆಗಳ ಬಳಿಕ ಸತ್ತು ಹೋದಳು, ನನ್ನ ತೊಡೆಯ ಮೇಲೆಯೇ. ನನ್ನ ಬಳಿ ಹಾಸಿಗೆ ಇದ್ದರೂ ನನ್ನ ತೋಳಿನೊಳಗೆ ಅವಳನ್ನು ಹಿಡಿದುಕೊಂಡಿದ್ದೆ. ತೊಡೆಯ ಮೇಲಿದ್ದಾಗ ನನ್ನ ನೋಡಿ ಅಮ್ಮ ನನಗೆ ಸಾಯಲಿಷ್ಟವಿಲ್ಲವೆಂದಳು. ನಾನು ಜೀವ ಹಿಡಿದುಕೋ ಮಗಳೆ ಎಂದೆ. ಅಣ್ಣ ಮನೆಗೆ ಬರುವ ಮೊದಲೆ ನಾನು

ಸಾಯುವುದಿಲ್ಲವೆಂದಳು. ಆದರೆ ನೋವು ತಡೆಯಲಾರದೆ ಅಳುತ್ತಿದ್ದಳು. "ಅಣ್ಣಾ ಅಮ್ಮ" ಎಂದು. ಆಗಸ್ಟ್ 15ರಂದು ಅವಳನ್ನು ಮಣ್ಣು ಮಾಡಿದೆ. ಅಕ್ಟೋಬರ್ ಹೊತ್ತಿಗೆ ನನ್ನ ಕೂದಲು ಉದುರಲು ಶುರುವಾಯ್ತು. ನವೆಂಬರ್‌ನಲ್ಲಿ ತಲೆಕೂದಲು ಸಂಪೂರ್ಣ ಉದುರಿ ಬೋಡಿಯಾದೆ. ನಂತರ ನೀಲಿ ಬಣ್ಣದ ಕಲೆಗಳು ನನ್ನ ಕುತ್ತಿಗೆ, ಮೈ ಮತ್ತು ಕೈಗಳ ಹಾಗು ತೊಡೆಗಳ ಮೇಲೆ ಕಾಣಿಸಿಕೊಂಡಿತು. ಜ್ವರದ ತಾಪ 40°ಗೇರಿತು. ನಡುಗುತ್ತಿದ್ದೆ. ಆಸ್ಪತ್ರೆಗೆ ನನ್ನನ್ನು ಸೇರಿಸಲಾಯ್ತು.

ನನ್ನ ಮಗ 1946ರ ಫೆಬ್ರವರಿಯಲ್ಲಿ ಬಂದು, ನನ್ನನ್ನು ನೋಡಿಕೊಂಡ. ತಂಗಿ ಹೇಗೆ ಸತ್ತಳೆಂದು ಕೇಳಿ ವಿಷಾದಪಟ್ಟ. ನಾನು ಯುದ್ಧವನ್ನು ದ್ವೇಷಿಸುತ್ತೇನೆಂದು ಹೇಳಿದ. ಅವನ ಅನೇಕ ಸ್ನೇಹಿತರು ಯುದ್ಧದಲ್ಲಿ ಸತ್ತುಹೋಗಿದ್ದರು. ತಾನು ಬದುಕಿರುವುದಕ್ಕೆ ನನಗೆ ವ್ಯಥೆಯಾಗುತ್ತಿದೆ ಎಂದು ಹೇಳಿದ. ಅವನು ಪಶ್ಚಾತ್ತಾಪದಿಂದ ಮರುಗುತ್ತಿದ್ದ. ಮುಂದೆ ಅವನಿಗೆ ಹುಚ್ಚಿಡಿದು ಓಡುತ್ತಿದ್ದ ರೈಲಿನಿಂದ ಧುಮುಕಿ ಆತ್ಮಹತ್ಯೆ ಮಾಡಿಕೊಂಡ. ನಾನು ಏಕಾಕಿಯಾದೆ. ಒಬ್ಬಳೆ ಅನೇಕ ಕಷ್ಟಗಳನ್ನು ಅನುಭವಿಸಿದೆ. ನನ್ನ ಕುಟುಂಬದವರೂ ಇಲ್ಲ. ಹಿರೋಶಿಯಾ ವಿಶ್ವವಿದ್ಯಾಲಯದ white chrysanthemum organisation ಸೇರಿ ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನೆಗೆ ನನ್ನ ದೇಹವನ್ನು ದಾನ ಮಾಡಿದ್ದೇನೆ. ನನ್ನ ನೊಂದಾಣಿ ಸಂಖ್ಯೆ 1200. ಯಾವುದೇ ಕ್ಷಣ ದೇವರ ಕರೆಬಂದರೆ ನಾನು ಸಿದ್ಧಳಾಗಿದ್ದೇನೆ. ಇನ್ನು ದೇವರಿಗೆ ನನ್ನನ್ನು ಕರೆಸಿಕೊಳ್ಳುವ ಇಚ್ಛೆ ಇಲ್ಲ. ಯುದ್ಧವಿಲ್ಲದಿದ್ದರೆ ನನ್ನೆರಡು ಮಕ್ಕಳು ಸಾಯುತ್ತಿರಲಿಲ್ಲ. ಈ ರೀತಿಯ ಸಂಸ್ಥೆಯಲ್ಲಿ ಇರಬೇಕಾದ ಪರಿಸ್ಥಿತಿ ಇರುತ್ತಿರಲ್ಲಿಲ್ಲ. ನಾವು ಮೂವರು ಸಂತೋಷದಿಂದಿರಬಹುದಿತ್ತು. ನನಗೆ ತುಂಬಾ ಕಷ್ಟಕರವಾಗಿದೆ.

(ಕಿನ್ನು ಟೊಮೊಯಸುಗೆ ಹಿರೋಶಿಮಾದ ಮೇಲೆ ಬಾಂಬ್ ಬಿದ್ದಾಗ 44 ವರ್ಷ. ಬಾಂಬ್ ಬಿದ್ದಾಗ ಮನೆಯಲ್ಲಿದ್ದಳು. ಹಿರೋಶಿಮಾದಿಂದ 5 ಕಿ. ಮಿ. ದೂರದಲ್ಲಿದ್ದ ಆಕೆ ಮಗಳನ್ನು ಹುಡುಕಿಕೊಂಡು ಹಿರೋಶಿಮಾಗೆ ಹೋದಳು. ಗಂಡ ಖಾಯಿಲೆಯಿಂದ ತೀರಿಕೊಂಡಿದ್ದ. ಮಗ ಯುದ್ಧಕ್ಕೆ ಹೋಗಿದ್ದ. ಒಬ್ಬಳೆ ಮಗಳೊಂದಿಗೆ ಆಕೆ ಇದ್ದಳು. ಆಕೆಯನ್ನು Hiroshima atomic bombs victims nursing homeಗೆ ಸೇರಿಸಲಾಗಿತ್ತು.)

## ನನ್ನ ನಾಗರೀಕ ಜನರೆ

ನೆತ್ತರು ನಮ್ಮದೊ ಅವರದೊ
ಮಾನವತೆ ರಕುತವಾಗಿದೆ
ಈ ಯುದ್ಧ ಪೂರ್ವದ್ದೊ ಅಥವಾ ಪಶ್ಚಿಮದ್ದೊ
ಶಾಂತ ಭೂಮಿ ರಕುತವಾಗಿದೆ

ಬಾಂಬುಗಳು ಮನೆಯ ಮೇಲೆ ಬೀಳಲಿ
ಅಥವಾ ಗಡಿಯಲ್ಲಿ ಬೀಳಲಿ
ಕಟ್ಟುವ ಚೈತನ್ಯ ಗಾಯಗೊಂಡಿದೆ
ನಮ್ಮ ಹೊಲ ಉರಿಯಲಿ ಅಥವಾ
ಅವರದುರಿಯಲಿ
ಜೀವನ ಹಸಿವಿನ ಕಳೆಯಲಿ ಉಸಿರುಗಟ್ಟಿದೆ

ಟ್ಯಾಂಕುಗಳು ಮುಂದುವರೆಯಲಿ
ಇಲ್ಲ ಹಿಂತೆಗೆದುಕೊಳ್ಳಲಿ ಮುಖ್ಯವಲ್ಲ
ಭುವಿಯ ಮಡಿಲು ಬರಿದಾಗುತ್ತದೆ
ವಿಜಯದ ಸಂಭ್ರಮವೊ
ಸೋಲಿನ ಶೋಕವೊ
ಬದುಕಿದವರು ಹೆಣಗಳಿಗೆ ರೋಧಿಸಬೇಕು

ಅದಕ್ಕೆ ಓ ನನ್ನ ನಾಗರೀಕ ಜನರೆ
ಯುದ್ಧ ಮುಂದೂಡುವುದೊಳ್ಳೆಯದು
ನಿಮ್ಮ ಮನೆಯಲ್ಲಿ, ನಮ್ಮ ಮನೆಯಲ್ಲಿ
ಹಣತೆಗಳು ಬೆಳಗುವುದ ಮುಂದುವರೆಸುವುದೊಳ್ಳೆಯದು.

- ಸಾಹಿರ್ ಲೂದಿಯಾನ್ವಿ

# ಸುರುಟಿದ ಮಕ್ಕಳನ್ನು ಹೆರುವ ತಾಯಂದಿರನ್ನು ಕೇಳಬೇಕಿತ್ತು

"ಹಿರೋಶಿಮಾ ನಾಗಾಸಾಕಿಯಲ್ಲಿ ಎರಡು ಲಕ್ಷಕ್ಕೂ ಅಧಿಕ ಮುಗ್ಧರ ಪ್ರಾಣ ಹೀರಿ ಇತರ ಲಕ್ಷಾಂತರ ಜನರನ್ನು ವಿಕಲಾಂಗ ಮಾಡಿದ ಹೇ ವೈಜ್ಞಾನಿಕರೇ ನಿಮಗೆ ಒಂದು ಕ್ಷಣವಾದರೂ ಪಶ್ಚಾತ್ತಾಪದ ಅನುಭೂತಿ ಆಗಿದೆಯೇ? ಆಗಿದ್ದರೆ ಕಾಲವು ನಿಮ್ಮನ್ನು ಕಟಕಟೆಯಲ್ಲಿ ನಿಲ್ಲಿಸುವುದಿಲ್ಲ. ಆಗದಿದ್ದರೆ ಇತಿಹಾಸ ನಿಮ್ಮನ್ನು ಎಂದೂ ಕ್ಷಮಿಸುವುದಿಲ್ಲ."

ಹೀಗೆಂದು ಕವಿತೆ ಬರೆದವ ಮುಂದೊಂದು ದಿನ ದೇಶದ ಅತ್ಯುನ್ನತ ಪದವಿ ಅಲಂಕರಿಸಿದ. ಪದವಿ ಸಿಕ್ಕ ಕೇವಲ 22 ದಿನಗಳೊಳಗೆ ಹಸಿರು ನಿಶಾನೆ ತೋರಿದ - ಬಾಂಬ್ ಸಿಡಿಸಲು, ಕೆಲವೇ ಗಂಟೆಗಳಲ್ಲಿ 100 ವಿಜ್ಞಾನಿಗಳ ಪಡೆಯೊಂದು ಬ್ಯಾಗೇಜುಗಳೊಂದಿಗೆ ರಾಜಾಸ್ಥಾನದ ಪೋಕ್ರಾನ್‌ಗೆ ಪಯಣ ಹೊರಟಿತು. ಅಲ್ಲಿಂದ ಸರಿಯಾಗಿ ಒಂದು ತಿಂಗಳೊಳಗೆ ಬಾಂಬ್ ಸಿಡಿಸಲು ತೀರ್ಮಾನಿಸಲಾಯ್ತು. ಪಡೆಯ ಮೇಜರ್ ಜನರಲ್ ಪೃಥ್ವಿರಾಜ್ 30 ದಿನಗಳ ಅವಧಿಯನ್ನು T-30 Days ಎಂಬ Scientific ಹೆಸರು ನೀಡಿದ.

ಉನ್ನತ ಪದವಿಯನ್ನಲಂಕರಿಸಿದವ ಪರಿಸ್ಥಿತಿ ಬಿಗಡಾಯಿಸಿದರೆ ಎದುರಿಸಲು ಒಂದು Crisis teamವೊಂದನ್ನು ರಚಿಸಿದ. ಟೀಮಿನೊಳಗೆ ಅವರ ರಾಜಕೀಯ ಸಲಹೆಗಾರರು, ಮುಖ್ಯ ಕಾರ್ಯದರ್ಶಿ ಮತ್ತು ವಿದೇಶಾಂಗ ಇಲಾಖೆಯ ಅಧಿಕಾರಿಗಳಿದ್ದರು. ನಾಯಕ ನಿತ್ಯವೂ 8.30ರಿಂದ 9.30ರವರೆಗೆ ತಂಡವನ್ನು ಭೇಟಿ ಮಾಡಿ ತಂತ್ರ ರಚನೆ, ಕಾರ್ಯ ಪ್ರಗತಿಯನ್ನು ಚರ್ಚಿಸುತ್ತಿದ್ದರು. ಅಗತ್ಯ ಬಿದ್ದಲ್ಲಿ ತಿದ್ದುಪಡಿ ಮಾಡುತ್ತಿದ್ದರು. ನಾಯಕ ಜಗತ್ತಿನ 177 ನಾಯಕರುಗಳಿಗೆ, ಖುದ್ದು ಪತ್ರ ಬರೆದರು. ಬಾಂಬ್ ಸಿಡಿದ 24 ಗಂಟೆಗಳೊಳಗೆ ಎಲ್ಲರಿಗೂ ಪತ್ರ ತಲುಪಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ವಿದೇಶಾಂಗ ಖಾತೆಯ 10 ಜನ ಜಂಟಿ ಕಾರ್ಯದರ್ಶಿಗಳು ನೇಮಕಗೊಂಡಿದ್ದರು. ತಮ್ಮ ನಿಲುವನ್ನು ಸ್ಪಷ್ಟ ಪಡಿಸಲು ಸ್ವತಃ ನಾಯಕರೆ ಮುಖ್ಯ ಜಾಗತಿಕ ನಾಯಕರುಗಳೊಂದಿಗೆ ಸಂಪರ್ಕ ವಿರಿಸಿಕೊಂಡಿದ್ದರು. ವಿದೇಶಾಂಗ ಕಾರ್ಯದರ್ಶಿಗಳು ಎಲ್ಲ ರಾಯಭಾರಿಗಳನ್ನು ತುದಿಗಾಲಲ್ಲಿ ನಿಲ್ಲಿಸಿಕೊಂಡಿದ್ದರು. ದೇಶ ವಿದೇಶಗಳ ಪತ್ರಿಕೆಗಳ ವರದಿಯ ಟ್ರಾಕ್ ಇಟ್ಟುಕೊಳ್ಳಲು ರಾಯಭಾರಿ ಕಛೇರಿಗಳು ಸಜ್ಜಾಗಿದ್ದವು. ಇಷ್ಟೆಲ್ಲಾ ತಯಾರಿ ನಡೆದದ್ದು ತಯಾರಿಸಿದ ಬಾಂಬ್ ಜನ ಸಮೂಹವನ್ನು ಧ್ವಂಸ ಮಾಡಲು Perfect ಆಗಿದೆಯೇ ಎಂಬುದನ್ನು ಪರೀಕ್ಷಿಸಲು!

T-30 daysಗಳು ಮುಗಿದ ದಿನ ಮೇ 11 ಬುದ್ಧಪೂರ್ಣಿಮೆ ಬುದ್ಧ ಹುಟ್ಟಿದ, ಜ್ಞಾನೋದಯ ಪಡೆದ, ಮಡಿದ ದಿನ. ಪೋಕ್ರಾನ್ ಮರುಭೂಮಿಯಲ್ಲಿ 43$^{0}$ ತಾಪ. ಮೇಜರ್ ಜನರಲ್ ನಟರಾಜ್, ಮೇಜರ್ ಜನರಲ್ ಪೃಥ್ವಿರಾಜ್, ಕ್ಯಾಪ್ಟನ್ ಆದಿಮರ್ಜಾಬಾನ್ ನೇತೃತ್ವದಲ್ಲಿ (ವಿಜ್ಞಾನಿಗಳಾದ ಆರ್. ಚಿದಂಬರಂ, ಎ.ಪಿ.ಜೆ. ಅಬ್ದುಲ್ ಕಲಾಂ, ಅನಿಲ್ ಕಾಕೋಡ್ಕರ್ ಯೋಧರಾಗಿ ತಮ್ಮ ನಿಜ ನಾಮಧೇಯವನ್ನು ಮರೆಮಾಚಿಕೊಂಡಿದ್ದರು) ಸುಮಾರು 200-300 ಮೀ. ಆಳದಲ್ಲಿ ಹುಗಿದಿದ್ದ ಬಾಂಬ್ ಸಿಡಿಯಿತು. ಸಿಡಿದಾಗ ಉಂಟಾದ ಶಾಖಾ ಒಂದು ಮಿಲಿಯನ್ ಡಿಗ್ರಿ ಸೆಂಟಿಗ್ರೇಡ್‌ಗೆ ಸಮ. ಅಂದರೆ ಸೂರ್ಯನ ತಾಪಕ್ಕೆ ಸಮ. ಭೂಮಿಯೊಳಗಡೆ ಏನಾದರು 1000 ಟನ್ ತೂಗುವ ಬಂಡೆ ಅಥವಾ ಸಣ್ಣ ಬೆಟ್ಟವೊಂದಿದ್ದರೆ 'ಆವಿ'ಯಾಗಿ ಬಿಡಬಹುದಾದಂತಹ ಶಾಖಾ! ಸಿಡಿದಾಗ ಉಂಟಾದ ಶಾಕ್ ವೇವ್‌ನಿಂದಾಗಿ ಒಂದು ಫುಟ್‌ಬಾಲ್ ಮೈದಾನದಷ್ಟು ಭೂಮಿ ಎಷ್ಟೋ ಮೀಟರ್‌ಗಳವರೆಗೆ ಮೇಲೆದ್ದಿತು. ನೋಡಿದ ಯೋಧ ವಿಜ್ಞಾನಿ ಉದ್ಗರಿಸಿದ. "ಶ್ರೀ ಕೃಷ್ಣ ಬೆಟ್ಟವನ್ನೆತ್ತಿದ ಕಥೆಯನ್ನು ತಾನೀಗ ನಂಬಬಹುದು!"

ದೇಶಾದ್ಯಂತ ಕಾಯುತ್ತಿದ್ದ ಸೆಯೆನ್ಮೊಗ್ರಾಫ್‌ಗಳು ಬಾಂಬ್ ಪರೀಕ್ಷೆಯನ್ನು ರೆಕಾರ್ಡ್ ಮಾಡಿಕೊಂಡು ಯಶಸ್ವಿ ಎಂದು ಘೋಷಿಸಿದವು. ಯೋಧ-ವಿಜ್ಞಾನಿಗಳು ಒಬ್ಬರನ್ನೊಬ್ಬರು ಅಪ್ಪಿಕೊಂಡು ಜಯಕಾರ ಹಾಕಿದರು. ಮೇಜರ್ ಜನರಲ್ ನಟರಾಜ್ ಹಿಂದೆ 1974 ಬುದ್ಧನನ್ನು ಮುಗಳ್ನಗಿಸಿದಾಗ ಅನುಭವಿಸಿದ ಥ್ರಿಲ್ ಅನ್ನು ಈಗಲೂ ಅನುಭವಿಸಿದರು. ಕ್ಯಾಪ್ಟನ್ ಆದಿಮರ್ಜಾಬಾನ್ ಮೆಲುದನಿಯಲ್ಲಿ ಉಲಿದರು "ನಾವು ನಮ್ಮ ಕೆಲಸ ಮಾಡಿದ್ದೇವೆ Perfect ಆಗಿ" ಮಾಜಿ ಅಣು ವಿಜ್ಞಾನಿಯೊಬ್ಬ ಭಾರತೀಯ ವಿಜ್ಞಾನಿಗಳು ಅಣು ತಂತ್ರಜ್ಞಾನದಲ್ಲಿ ಎಂತಹ ಸಾಧನೆ ಪ್ರದರ್ಶಿಸಿದ್ದಾರೆಂದರೆ ಅವರು ಇಡೀ ನಗರವನ್ನೇ ಚಿಂದಿ ಮಾಡುವಂತಹ ದೊಡ್ಡ ಹೈಡ್ರೋಜನ್ ಬಾಂಬ್ ಅನ್ನು

ನಿರ್ಮಿಸಬಲ್ಲರು ಎಂದು ಶ್ಲಾಘಿಸಿದರು. ಪೋಕ್ರಾನ್ ಪವಿತ್ರ ಮಣ್ಣನ್ನು ದೇಶಾದ್ಯಾಂತ ಗೌರವಯಾತ್ರೆಯಲ್ಲಿ ಕೊಂಡೊಯ್ಯಲು, ಬಾಂಬ್ ಸಿಡಿಸಿದ ಜಾಗದಲ್ಲಿ ಶಕ್ತಿ ಪೀಠ ನಿರ್ಮಿಸಲು ಬೂದಿಬಡುಕರು ಸಿದ್ಧರಾದರು. ಶಾಂತಿ, ಭದ್ರತೆಯನ್ನು ಜನತೆಗೆ ನೀಡಿದ್ದಕ್ಕೆ ಎದೆ ತುಂಬಿ ನಾಯಕ ಅವನ ಸಹಚರರು ಆನಂದಭಾಷ್ಪ ಸುರಿಸಿದರು. ದೇಶ ಪ್ರೇಮದ ಮತ್ತಿನಲ್ಲಿ ಜನತೆ ತೇಲಿದರು. ತಲ್ಲಣಗೊಂಡ ಭೂಮಿ 240 ಕಿ.ಮೀ. ದೂರದವರೆಗೆ ಥರ ಥರ ಕಂಪಿಸಿತು. ಕೇಳಲು ಕಿವಿಗಳಿರಲಿಲ್ಲ. ದೇಶವು ಐವರು ಬಲಿಷ್ಠರಿಗೆ ಸಮನಾಯ್ತು. ಎರಡು ದಿನಗಳ ನಂತರ ಇನ್ನೆರಡು ಬಾಂಬ್‌ಗಳನ್ನು ಸಿಡಿಸಿದರು, ಯಶಸ್ವಿಯಾಗಿ; ಬಲಿಷ್ಠತೆ ನಿರಂತರವೆಂದು ಸಾಬೀತು ಪಡಿಸಲು.

ಸಿಡಿದ ಒಂದೊಂದು ಬಾಂಬ್‌ಗೆ ತಗುಲಿರುವ ವೆಚ್ಚ ಐದು ಸಾವಿರ ಕೋಟಿ. ಇದು ಇಡಿ ಕರ್ನಾಟಕದ ಬಜೆಟ್. ಒಟ್ಟು ಇಪ್ಪತ್ತೈದು ಸಾವಿರ ಕೋಟಿ ಖರ್ಚಾಗಿದೆ. ಹಿಂದೆ 1974ರಲ್ಲಿ ಬಾಂಬ್ ಸಿಡಿಸಿದ ಪರಿಣಾಮವಾಗಿ ಅಲ್ಲಿನ ಜನ ಚರ್ಮ ರೋಗ, ಕಣ್ಣಿನ ತುರಿಕೆ, ವಾಂತಿ ಭೇದಿ, ಮೂಗಿನಲ್ಲಿ ರಕ್ತಸ್ರಾವದಿಂದ ನರಳುತ್ತಿದ್ದಾರೆ. ಅಣುಬಾಂಬ್ ಪರೀಕ್ಷೆ, ಅಣು ವಿಕಿರಣಕ್ಕೆ ಸಂಬಂಧಿಸಿದ ಅಪಘಾತಗಳು, ಪರಮಾಣು ತ್ಯಾಜ್ಯಗಳು, 2ನೇ ಜಾಗತಿಕ ಯುದ್ಧದಲ್ಲಿ ಹಿರೋಷಿಮಾ, ನಾಗಸಾಕಿಯ ಮೇಲೆ ಹಾಕಿದ ಬಾಂಬ್ ಪರಿಣಾಮವಾಗಿ ಜಗತ್ತಿನಲ್ಲಿ 37 ಮಿಲಿಯನ್ ಜನ ನರಳುತ್ತಿದ್ದಾರೆ. ಹಿರೋಷಿಮಾ ನಾಗಸಾಕಿಯಲ್ಲಿ 2 ಲಕ್ಷ ಜಪಾನಿಯರು ಸತ್ತರು. ಅಮೆರಿಕದ ಅಣುಬಾಂಬ್ ಪರೀಕ್ಷೆಯಿಂದಾಗ ಮೈಕ್ರೊನೆಶಿಯದ ಹೆಂಗಸರು ಈಗಲೂ ಜೆಲ್ಲಿ ಬೇಬಿಗಳನ್ನು ಹೆರುತ್ತಿದ್ದಾರೆ.

ಬಾಂಬ್ ಸಿಡಿಸಿದ ಇಡೀ ಘಟನೆಯನ್ನು ಜೈವಿಜ್ಞಾನ ಎಂದು ಶ್ಲಾಘಿಸುತ್ತಿರುವುದು ವಿಜ್ಞಾನದ ಮಿಲಿಟರೀಕರಣವನ್ನು ತೋರುತ್ತದೆ. ರಾಜಕಾರಣಿಗಳು ಮತ್ತು ಮಿಲಿಟರಿಯವರಿಗಿಂತ ಅಣುಬಾಂಬ್ ಕುರಿತು ಅತ್ಯುತ್ಸಾಹ ತೋರಿದವರು ಅಣು ಮತ್ತು ರಕ್ಷಣಾ ವಿಜ್ಞಾನಿಗಳು. ಬಾಂಬ್ ಸಿಡಿಸಿ ಜೀವನದ ಮಹತ್ವಾಕಾಂಕ್ಷೆಯನ್ನು ಈಡೇರಿಸಿಕೊಂಡು V ವಿಜಯದ ಸಂಕೇತ ತೋರಿಸಿದ ವಿಜ್ಞಾನಿಗಳು. ಅಣುಶಕ್ತಿಯನ್ನು ಧಾರ್ಮಿಕ ಆಚರಣೆಯ ಅಸ್ತ್ರವಾಗಿಸಲು ಬಿಟ್ಟ ವಿಜ್ಞಾನಿಗಳು! ಹೇಗೆ ವಿಜ್ಞಾನ ಮತ್ತು ತಂತ್ರಜ್ಞಾನ ಮಿಲಿಟರಿಕರಣಗೊಂಡಿದೆಯೆಂಬುದನ್ನು ಅವುಗಳಿಗೆ ವಿನಿಯೋಗವಾಗುವ ಖರ್ಚನ್ನು ಗಮನಿಸಿದಾಗ ತಿಳಿಯುತ್ತದೆ. ವಿಜ್ಞಾನ, ತಂತ್ರಜ್ಞಾನದ ಒಟ್ಟು ಬಜೆಟ್‌ನಲ್ಲಿ ಶೇ. 68 Defence Research Development Organisation (ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ)ಗೆ ವಿನಿಯೋಗವಾದರೆ ಶೇ.11ರಷ್ಟು ಕೌನ್ಸಿಲ್ ಫಾರ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್‌ಗೆ ಹೋಗುತ್ತದೆ. ಇನ್ನು ಬದುಕನ್ನು ಉಳಿಸುವ ಜೀವಪರ ಸಂಶೋಧನೆಗೆ ಅವಕಾಶವೆಲ್ಲಿ? ಕೇವಲ ಶುದ್ಧ ನೀರಿನಿಂದ ಅತಿಸಾರಕ್ಕೆ ಬಲಿಯಾಗುವ ಸಾವಿರಾರು ಮಕ್ಕಳನ್ನು ಬದುಕಿಸಬಹುದು, ನಮ್ಮ ದೇಶದಲ್ಲಿ ಶೇ. 90ಕ್ಕು ಹೆಚ್ಚು ಮಹಿಳೆಯರು ರಕ್ತಹೀನತೆಯಿಂದ ನರಳುತ್ತಾರೆ. ಅವರ ಹಿಮೊಗ್ಲೋಬಿನ್ ಅಂಶ 9-10ಕ್ಕಿಂತ ಮೇಲೆ ಹೋಗುವುದಿಲ್ಲ (13-14 ಇರಬೇಕು). ಈಗಿನ ವಿಜ್ಞಾನ-ತಂತ್ರಜ್ಞಾನ ಮೈಮುರಿದು ದುಡಿದರೂ ಹಸಿದು ಮಲಗುವ ಕೋಟ್ಯಾಂತರ ಜನರ ಬದುಕನ್ನು ಸಹನೀಯ ಮಾಡುವುದಕ್ಕಾಗಿ ಇಲ್ಲ. ಅದೇನಿದ್ದರೂ ಹೇತ ಮೇಲೆ ತಿಕ ತೊಳೆದುಕೊಳ್ಳುವ ಮಶಿನ್ ಮಾಡಲು, ಶಬ್ದವೇ ಇಲ್ಲದೆ ಮೈಲು ದೂರದಿಂದ ಗುರಿಯಿಟ್ಟು ಒಬ್ಬನನ್ನು ಸದ್ದಿಲ್ಲದೆ ಕೊಲ್ಲುವ ಗನ್‌ಗಳನ್ನು ಮಾಡಲು, ಲಕ್ಷ ಜನರನ್ನು ಒಂದೇ ಏಟಿಗೆ ಧ್ವಂಸ ಮಾಡುವ ಬಾಂಬ್‌ಗಳನ್ನು ತಯಾರು ಮಾಡುವ ಪಂಚತಾರಾ ವಿಜ್ಞಾನ-ತಂತ್ರಜ್ಞಾನ. ಯಾವ ನೈತಿಕತೆಯೂ ಇಲ್ಲದೆ ಸಾಧನೆ ಪ್ರತಿಷ್ಠೆಯ ತೆವಲಿಗೆ ವಿಜ್ಞಾನವನ್ನು ಸೀಮಿತಗೊಳಿಸಿಬಿಡುವ ವಿಜ್ಞಾನಿಗಳು ನಿಜಕ್ಕೂ ಆಧುನಿಕ ಯುಗದ ರಾಕ್ಷಸರು. ಧ್ವಂಸವಾಗುವುದನ್ನು ತಡೆಯದೆ, ಧ್ವಂಸ ಮಾಡುವುದನ್ನು ಪ್ಲಾನ್ ಮಾಡುವ ಇವರು ಮಾನವರಲ್ಲ, ಇವರು ಏನನ್ನೇ ಸಂಶೋಧಿಸಲಿ, ಸೃಷ್ಟಿಸಲಿ ಅದಕ್ಕೆ ನೈತಿಕ ಹೊಣೆ ಇರಬೇಕು. ಯಾಕೆಂದರೆ ಅದರ ಅಂತಿಮ ಪರಿಣಾಮಕ್ಕೆ ಒಳಗಾಗುವವರು ನಾವು, ವಾಜಪೇಯಿಯಾಗಲಿ, ನವಾಬ್ ಶರೀಫ್ ಆಗಲಿ ರಣರಂಗದಲ್ಲಿ ನಿಂತು ಬಾಂಬ್ ಎಸೆಯಲು ಸಿದ್ಧರಾಗಿ ಬರುವುದಿಲ್ಲ, ಬಾಂಬ್ ಹಾಕಿದರೂ ಹಾನಿಯಾಗದಂತೆ ಅತ್ಯುನ್ನತ ರಕ್ಷಣೆಯನ್ನು ಪಡೆದುಕೊಳ್ಳುವಂತವರು. ಬಹಳ ಸುಲಭವಾಗಿ ಬಲಿಪಶುಗಳಾಗುವವರು ಸಾಮಾನ್ಯ ಜನರು. ಬಾಂಬ್ ಬರಿ ವಿಜ್ಞಾನ, ತಂತ್ರಜ್ಞಾನವಷ್ಟೇ ಅಲ್ಲ, ಅದು ಜನರ ಸಂಕಟಕ್ಕೆ ಸಂಬಂಧಿಸಿದ್ದು. ಆದ್ದರಿಂದ ಬರಿ ವಾಜಪೇಯಿ, ಅಡ್ವಾನಿ, ಕಲಾಂ, ಚಿದಂಬರಂರಷ್ಟೇ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಯಾವ ಹಕ್ಕೂ ಇಲ್ಲ. ಇವರು ಹಿರೋಷಿಮಾ ನಾಗಸಾಕಿಯಲ್ಲಿ ಮಡಿದ 20,0000 ಜನರ ಆತ್ಮಗಳ ಅಳಲನ್ನ, ಸುರುಟಿದ ಮಕ್ಕಳನ್ನು ಹೆತ್ತು ಸಂಕಟಪಡುವ ತಾಯಂದಿರನ್ನು, ಸುರುಟಿಕೊಂಡ ಮಕ್ಕಳ ಅನುಮತಿಯನ್ನು ಪಡೆಯಬೇಕಿತ್ತು.

- *ಸರಸ್ವತಿ ದು.*

# 'ಭಯದಲ್ಲಿ ಬದುಕುವುದು'

ಮೋಹನ್ ಮಾಣಿ

'ಲೀವಿಂಗ್ ಇನ್ ಫಿಯರ್' - ಈ ಸಿನೆಮಾವನ್ನು 'ಮಾನಸ'ದವರು ತಾ. 15-8-1998ರಂದು ಸುಮಾರು ಮೂವತ್ತು ಜನರಿಗೆ ತೋರಿಸಿದರು. ಕಾರ್ಮಿಕರ ಸ್ಥಿತಿಗತಿಗಳ ಬಗ್ಗೆ ಹಾಗೂ ಸರ್ಕಾರಿ ಯೋಜನೆಗಳ ಬಗ್ಗೆಯೂ ಚರ್ಚಿಸಲಾಯಿತು. 'ಮೀಡಿಯಾ ಕಲೆಕ್ಟೀವ್'ನ ಒಬ್ಬರಾದ ಶಶಿಯವರು ಸಿನೆಮಾ ತೆಗೆಯುವಾಗಿನ ತಮ್ಮ ಅನುಭವಗಳನ್ನು ಹಂಚಿಕೊಂಡರು. 'ಶಾಂತಿಯುತ' ಕಾರಣಗಳಿಗಾಗಿ ಅಣುಶಕ್ತಿ ಕೇಂದ್ರದ ಅಗತ್ಯವಿದೆ ಎನ್ನುವವರ ವಾದ ಎಷ್ಟು ಹುರುಳಿಲ್ಲದ್ದು ಎಂಬುದಕ್ಕೆ ಈ ಸಿನೆಮಾ ಒಂದು ಸಾಕ್ಷಿಯಾಗಿದೆ. ಅಣುಶಕ್ತಿ ಚಟುವಟಿಕೆಗಳು ಆರೋಗ್ಯಕ್ಕೆ ಎಷ್ಟು ಹಾನಿಕಾರಿಯಾದದ್ದು ಎಂಬುದರ ಬಗ್ಗೆ, ಕಾರ್ಮಿಕ ಸಂಘಟನೆಗಳು ಈ ಅಣುಶಕ್ತಿ ವಿರೋಧ ನೀತಿಗೆ ವಿರೋಧವಾಗಿದ್ದಾರೆ ಎಂಬುದರ ಬಗ್ಗೆಯೂ ಚರ್ಚೆ ನಡೆಸಲಾಯಿತು.

ಪಾಕಿಸ್ತಾನ ಹಾಗೂ ಭಾರತದಲ್ಲಿ ಬಾಂಬ್ ಸಿಡಿದ ದುರಂತದ ನಂತರದಲ್ಲಿ ಅಣುಶಕ್ತಿಯ ತಾಂತ್ರಿಕತೆಯ ಚರ್ಚೆ ಹೊಸ ರೂಪ ತಳೆಯತೊಡಗಿದೆ. ಈ ಬಗ್ಗೆ ನಾನಾತರಹೆಯ ಅಭಿಪ್ರಾಯಗಳು ವ್ಯಕ್ತಗೊಂಡಿವೆ. ಪ್ರಾರಂಭದಲ್ಲಿನ ದೇಶಪ್ರೇಮ, ಸ್ವ-ಅಭಿನಂದನೆಗಳಿಂದ ಹಿಡಿದು ಅಣುಬಾಂಬಿನ ಯುದ್ಧ ಹಾಗೂ ಮಿಲಿಟರಿಸಂನ ಬಗ್ಗೆ ಟೀಕೆಗಳು ಕೇಳಿಬಂದಿವೆ. ಈ ಚರ್ಚೆಯಲ್ಲಿ ಮೂಡಿಬಂದ ಮುಖ್ಯ ಅಂಶಗಳೆಂದರೆ ಭಾವನಾತ್ಮಕ ಹೇಳಿಕೆಗಳು, ಚೈನಾದ ಬಗ್ಗೆಗಿನ ಭಯ, ವಸಾಹತುಶಾಹಿಗಳ ಯೋಜನೆಗಳು, ರಕ್ಷಣೆಯ ಅಗತ್ಯ ಹಾಗೂ ಹಿಂದಿನ ಪ್ರಾಪಂಚಿಕ ಯುದ್ಧಗಳಿಂದ ಹಿರೋಶಿಮಾ, ನಾಗಸಾಕಿ ಹಾಗೂ ಚರ್ನೋಬೈಲ್‌ನಲ್ಲಿ ಉಂಟಾದ ಸರ್ವನಾಶ. ಆದರೆ ಈ ಚರ್ಚೆಯಲ್ಲಿ ಮೂಡಿ ಬರದಿರುವ ಅಂಶವೆಂದರೆ - ಭಾರತ 'ಶಾಂತ ರೀತಿಯ' ಬಳಕೆಗಳಿಗಾಗಿ ಅಣುಶಕ್ತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಎಂಬುದು, ಹಾಗೂ ಈ ಕಾರ್ಯಕ್ರಮಗಳು ಎಲ್ಲಿ ಜಾರಿಗೊಳಿಸಲ್ಪಟ್ಟಿವೆಯೋ, ಅಂತಹ ಪ್ರದೇಶಗಳಲ್ಲಿ ಸಾಕಷ್ಟು ಅಪಾಯ ಉಂಟುಮಾಡಿದೆ ಎಂಬುದು. ಈ ಕಾರ್ಯಕ್ರಮಗಳು ಜನಸಮುದಾಯದ ಬದುಕಿಗೆ ಹೆಚ್ಚು ಅಪಾಯ ತರುವ ಸಾಮರ್ಥ್ಯಗಳನ್ನು ಹೊಂದಿವೆ; ಇಂತಹವುಗಳ ಬಗ್ಗೆ ಪ್ರಾದೇಶಿಕ ಜನರ ಪ್ರತಿಭಟನೆ ಹಾಗೂ ತಡೆಗಟ್ಟುವ ವಿಧಾನಗಳೂ ಕಂಡುಬಂದಿವೆ. ಆದರೆ ಅಣುಶಕ್ತಿಯ ಬಗ್ಗೆಗಿನ ಅಥವಾ ಬಾಂಬ್ ಬಗ್ಗೆಗಿನ ಚರ್ಚೆಯ ದಿಕ್ಕು ಈ ಕಡೆಗೆ ತಿರುಗಿಯೇ ಇಲ್ಲ. ಈ ಹಂತದಲ್ಲಿ ಭಾರತ ಸರ್ಕಾರದ ಅಣುಶಕ್ತಿಯ ಕಾರ್ಯಕ್ರಮದ ಭಾಗವಾದ 'ದಿ ಇಂಡಿಯನ್ ರೇರ್ ಅರ್ಥ್ಸ್ ಲಿಮಿಟೆಡ್' ನ ವರದಿ ಅಣುಶಕ್ತಿಯ ಬಗ್ಗೆಗಿನ ಚರ್ಚೆಗೆ ಹೆಚ್ಚು ಕಾರಣವಾಗಿದೆ.

ಭಾರತದಲ್ಲಿನ ಅಣುಶಕ್ತಿ ಕಾರ್ಯಕ್ರಮದ ಹಲವಾರು ಹೇಳಿಕೆಗಳ ಹಿನ್ನೆಲೆಯಲ್ಲಿ ಈ ವರದಿಯನ್ನು ನಾವು ನೋಡಬೇಕಾಗುತ್ತದೆ. ಇಡಿಯ ಕಾರ್ಯಕ್ರಮವು 'ಡಿಪಾರ್ಟ್‌ಮೆಂಟ್ ಆಫ್ ಅಟಾಮಿಕ್ ಎನರ್ಜಿ'ಯ (DAE) ಹಿಡಿತದಲ್ಲಿ ಇರುತ್ತದೆ. ಈ ಕಾರ್ಯಕ್ರಮದಲ್ಲಿ ಭಾಗಿಯಾದವರು ಇದರ ಬಗ್ಗೆ ಚರ್ಚೆ ನಡೆಸುವುದನ್ನು 'ಅಫಿಶಿಯಲ್ ಸೀಕ್ರೆಟ್ ಆಕ್ಟ್' ಸಂಪೂರ್ಣವಾಗಿ ನಿಷೇಧಿಸುತ್ತದೆ. ಅಣುಶಕ್ತಿ ಕಾರ್ಯಕ್ರಮಗಳಿಂದ ಉಂಟಾಗುವ ರೇಡಿಯೇಶನ್ ಅಪಾಯ ಹಾಗೂ ಅನಾರೋಗ್ಯದ ಬಗ್ಗೆಗಿನ ಯಾವುದೇ ಗಂಭೀರವಾದ ಹಾಗೂ ಅರ್ಥಪೂರ್ಣವಾದ ಅಧ್ಯಯನ ಮಾಡಬಹುದಾದ ತಾಂತ್ರಿಕ ಪರಿಣಿತಿ ಹಾಗೂ ಸಾಮರ್ಥ್ಯ ಹಲವಾರು ಅಣುಶಕ್ತಿ ಅಧ್ಯಯನ ಸಂಸ್ಥೆಗಳ ಕೈಯಲ್ಲಿ ಇರುತ್ತದೆ. ಈ ಸಂಸ್ಥೆಗಳು ನೇರವಾಗಿ 'ಡಿಪಾರ್ಟ್‌ಮೆಂಟ್ ಆಫ್ ಅಟಾಮಿಕ್ ಎನರ್ಜಿ'ಯ ಹಿಡಿತದಲ್ಲಿ ಇರುವುದರಿಂದ ಎಲ್ಲವೂ ಅಫಿಶಿಯಲ್ ಸೀಕ್ರೆಟ್ ಆಕ್ಟ್‌ನ ಕಡಿವಾಣದಲ್ಲಿಯೇ ಇರುತ್ತವೆ. ಈ ಯಾವ ಸಂಸ್ಥೆಗಳೂ ಅಣುಶಕ್ತಿ ಕಾರ್ಯಕ್ರಮಗಳಿಂದ ಪರಿಸರಕ್ಕೆ ಆದ ಪ್ರಭಾವವನ್ನಾಗಲೀ, ಇವುಗಳು ಉಂಟುಮಾಡುವ ಅಪಾಯಗಳನ್ನಾಗಲೀ ಅಥವಾ ಸರ್ಕಾರ ಈ ಅಪಾಯದ ಸನ್ನಿವೇಶಗಳನ್ನು ಎದುರಿಸಲು ಹಾಕಿಕೊಂಡಿರುವ ಯೋಜನೆಗಳನ್ನಾಗಲೀ ದಾಖಲಿಸುವಂತಹ ಸಾರ್ವಜನಿಕ ವರದಿಯನ್ನು ಇದುವರೆಗೂ ಹೊರ ತಂದಿಲ್ಲ.

### ದಿ ಇಂಡಿಯನ್ ರೇರ್ ಅರ್ಥ್ಸ್ ಲಿಮಿಟೆಡ್

ಇದು DAE ಅಡಿಯಲ್ಲಿರುವ ಸರ್ಕಾರಿ ಕಾರ್ಯಕ್ರಮ. ಕೇರಳದ ಆಲ್‌ವೇಸ್‌ನಲ್ಲಿ ಸ್ಥಾಪಿತವಾಗಿದೆ. ಇದು 1960ರ ಪ್ರಾರಂಭದಿಂದಲೂ ಉತ್ಪಾದನೆ ಮಾಡುತ್ತಿದೆ. ಕೇರಳದ ಕ್ವಿಲನ್ ಪಶ್ಚಿಮದ ಕರಾವಳಿ ಭಾಗದಲ್ಲಿದ್ದು ಇಲ್ಲಿ ದೊರಕುವ

ಮರಳಿನಿಂದ ಥೋರಿಯಂ ಹಾಗೂ ಜಿರ್‌ಕೋನಿಯಂ ಅನ್ನು ತಯಾರಿಸುವ ಕೆಲಸ ಇಲ್ಲಿ ನಡೆಯುತ್ತದೆ. ಈ ಕಂಪನಿಯಲ್ಲಿ 540 ಜನ ಕಾರ್ಮಿಕರಿದ್ದಾರೆ. 1980ರ ದಶಕದ ಮಧ್ಯದಲ್ಲಿ ವಿ. ಟಿ. ಪದ್ಮನಾಭನ್ ಹಾಗೂ ಪರಿಸರದ ವಿಜ್ಞಾನಿಗಳ ತಂಡವೊಂದು ಈ ಕಾರ್ಮಿಕರ ಹಾಗೂ ಅವರ ಕುಟುಂಬದ ಆರೋಗ್ಯದ ಮೇಲೆ ಆದ ಹಾನಿಯನ್ನು ಕುರಿತು ಅಧ್ಯಯನ ನಡೆಸಿತು. ಈ ಅಧ್ಯಯನದ ವರದಿಯನ್ನು ಆಧರಿಸಿ 'ಮೀಡಿಯ ಕಲೆಕ್ಟೀವ್' ಎನ್ನುವ ಕಾರ್ಯಕರ್ತರ ಗುಂಪೊಂದು ಈ ಪ್ರದೇಶದಲ್ಲಿ ಬಳಸಲಿಕ್ಕಾಗಿ 'ಲಿವಿಂಗ್ ಇನ್ ಫಿಯರ್' ಎನ್ನುವ ಚಿತ್ರವೊಂದನ್ನು ತಯಾರಿಸಿತು. ಈ ಸಿನೆಮಾ ಈ ರೀತಿಯ ಕಂಪೆನಿಗಳು ಉಂಟುಮಾಡಬಹುದಾದ ನಿಜವಾದ ಹಾಗೂ ಅಪಾಯಕಾರಿ ಸಾಮರ್ಥ್ಯಗಳ ಬಗ್ಗೆ ಹಲವಾರು ಪ್ರಶ್ನೆಗಳನ್ನು ಎತ್ತುತ್ತದೆ. ಜೊತೆಗೆ ಅಣುಶಕ್ತಿಯ ಬಗ್ಗೆ ಸರ್ಕಾರಿ ಯೋಜನೆಯನ್ನು ರೂಪಿಸುವ ಹಾಗೂ ಈ ಪ್ಲಾಂಟ್‌ಗಳನ್ನು ಹಿಡಿತದಲ್ಲಿ ಇಟ್ಟುಕೊಳ್ಳುವ ವಿಜ್ಞಾನಿಗಳ ಹಾಗೂ ವ್ಯವಸ್ಥಾಪಕರ ನಡತೆಗಳನ್ನು ಕುರಿತು ಈ ಸಿನೆಮಾ ಮಾತನಾಡುತ್ತದೆ. ಸ್ಥಳೀಯ ಜನರಿಗೆ ಈ ಬಗ್ಗೆ ಇರುವ ಎಚ್ಚರಿಕೆ ಹಾಗೂ ಈ ಅಪಾಯಗಳನ್ನು ಸ್ಥಳೀಯರು ನಿರ್ವಹಿಸುವ ಪ್ರಯತ್ನಗಳ ಬಗ್ಗೆಯೂ ಈ ಸಿನೆಮಾ ಬೆಳಕು ಚೆಲ್ಲುತ್ತದೆ.

ಕ್ವಿಲಾನ್‌ನ ಸುತ್ತಮುತ್ತ ಇರುವ ಬೀಚ್‌ಗಳಲ್ಲಿ ಥೋರಿಯಂನ್ನು ಮರಳಿನಿಂದ ತೆಗೆಯುವ ಪ್ರಕ್ರಿಯೆ ನಡೆಯುತ್ತದೆ. ಅಂದರೆ ಇದು ಪ್ಲಾಂಟ್‌ನ ಹೊರಗಡೆ ನಡೆಯುತ್ತದೆ.

ಮರಳಿನಿಂದ ಮಾನೋಕ್ಸೈಟ್‌ನ್ನು ದೈಹಿಕವಾಗಿಯೇ ಬೇರ್ಪಡಿಸುವ ಹಂತದಲ್ಲಿ ಸ್ಥಳೀಯ ಜನರನ್ನೇ ಕೆಲಸಕ್ಕೆ ತೆಗೆದುಕೊಳ್ಳಲಾಗಿದೆ. ಈ ಕಾರ್ಮಿಕರು ಕಾಂಟ್ರ್ಯಾಕ್ಟ್ ಕೆಲಸಗಾರರಾಗಿದ್ದು ಯಾವುದೇ ಆರೋಗ್ಯ ಸೇವೆಗೆ ಸಂಬಂಧಿಸಿದ ಸವಲತ್ತುಗಳನ್ನು ಹೊಂದಿರುವುದಿಲ್ಲ. ಕೆಲವು ಪರಿಸರ ವಿಜ್ಞಾನಿಗಳು ಈ ಸ್ಥಳೀಯರ ಆರೋಗ್ಯದ ಮೇಲೆ ಉಂಟಾಗುವ ದೀರ್ಘಾವಧಿ ಪರಿಣಾಮಗಳನ್ನು ಕುರಿತು ನಡೆಸಿದ ಅಧ್ಯಯನವು ಇಲ್ಲಿಯ ಸ್ಥಳೀಯರು ಹೆಚ್ಚು ಭಾಗ ಕ್ಯಾನ್ಸರ್‌ಗೆ ಒಳಗಾಗಿರುವುದನ್ನು ಹೇಳುತ್ತದೆ. ವಿಶೇಷವಾಗಿ ಮಾನೋಕ್ಸೈಟ್‌ನ್ನು ಬೇರ್ಪಡಿಸುವ ಕ್ರಿಯೆಯಲ್ಲಿ ನಿರತರಾದ ಕಾರ್ಮಿಕರಲ್ಲಿ ಕ್ಯಾನ್ಸರ್ ಪ್ರಮಾಣವು ಕರಾವಳಿಯ ಇತರ ಜನರಲ್ಲಿ ಕಂಡುಬರುವ ಕ್ಯಾನ್ಸರ್ ಪ್ರಮಾಣಕ್ಕಿಂತ ಹೆಚ್ಚಾಗಿ ಕಂಡುಬರುತ್ತದೆ.

ಮಾನೋಕ್ಸೈಟ್ ಹೊಂದಿರುವ ಥೋರಿಯಂನಲ್ಲಿ ರೇಡಿಯೋ ಆಕ್ಟೀವ್ ಪ್ರಮಾಣ ಹೆಚ್ಚು ಇರುತ್ತದೆ. ಥೋರಿಯಂನ್ನು ಈ ಪ್ಲ್ಯಾಂಟ್‌ನಲ್ಲಿ ಶೇಖರಿಸಿಕೊಂಡು ಗೋಡೌನ್‌ಗಳಲ್ಲಿ ಇಡಲಾಗುತ್ತದೆ. 1986ರಲ್ಲಿ ಈ ಸಿನೆಮಾವನ್ನು ಚಿತ್ರೀಕರಿಸುವಾಗ ಥೋರಿಯಂನ್ನು ಶೇಖರಿಸುವ ಗೋಡೌನ್ ಕೇರಳದ ಮುಖ್ಯ ನದಿಯಾದ ಪೆರಿಯಾರ್ ನದಿಯ ದಡದ ಮೇಲೆಯೇ ಕಟ್ಟಲ್ಪಟ್ಟಿತ್ತು. ಗೋಡೌನ್ ಹಾಗೂ ಈ ನದಿಯ ಮಧ್ಯದ ಅಂತರ ಕೇವಲ 2 ಮೀಟರ್ ಮಾತ್ರವಾಗಿತ್ತು. ಈ ಗೋಡೌನ್ ಕಟ್ಟಿ ಬಹಳ ವರ್ಷವಾಗಿತ್ತಲ್ಲದೇ ಇದರ ಗೋಡೆಗಳಲ್ಲಿ ಬಿರುಕು ಬಿಟ್ಟಿದ್ದವು. ಪೆರಿಯಾರ್ ನದಿಯಲ್ಲಿನ ಪ್ರಕೃತಿದತ್ತ ಪ್ರವಾಹದಿಂದಾಗಿ ಗೋಡೌನ್‌ನಿಂದ ಮಾನೋಕ್ಸೈಡ್ ಸೋರಿ ನದಿಯೊಳಗೆ ಹೆಚ್ಚು ಪ್ರಮಾಣದಲ್ಲಿ ತೇಲಿಹೋಗುವ ಸಾಧ್ಯತೆಗಳಿತ್ತು. ಈ ರೀತಿಯ ಪ್ರವಾಹಗಳು ಪೆರಿಯಾರ್ ನದಿಯಲ್ಲಿ ಆಗಾಗ್ಗೆ ಸಂಭವಿಸುತ್ತಲೇ ಇರುತ್ತವೆ. ಈ ರೀತಿ ಮೀನುಗಾರಿಕೆಯ ಸಮುದಾಯ, ಮೀನು ತಿನ್ನುವ ಹಾಗೂ ನೀರು ಕುಡಿಯುವ ಜನ ಇದರಿಂದ ದೊಡ್ಡ ದುರಂತವನ್ನೇ ಅನುಭವಿಸಬೇಕಿತ್ತು.

ಈ ಪ್ಲ್ಯಾಂಟ್ ಪ್ರಾರಂಭವಾದಾಗಿನಿಂದಲೂ ಇಲ್ಲಿ ಕೆಲಸ ಮಾಡುವ ಹಲವಾರು ಕಾರ್ಮಿಕರಿದ್ದಾರೆ. ಪ್ರಾರಂಭದಲ್ಲಿ ಈ ಕೆಲಸಗಾರರು ಕ್ಯಾಮರಾದ ಮುಂದೆ ಮಾತನಾಡುವುದಕ್ಕೆ ಇಷ್ಟಪಡಲಿಲ್ಲ. ಸಂದರ್ಶಿಸಿದ ಒಬ್ಬ ಕಾರ್ಮಿಕ ಹೇಳಿದ್ದೆಂದರೆ, "ಈ ಪ್ಲ್ಯಾಂಟ್‌ನಲ್ಲಿ ಕೆಲಸಕ್ಕೆ ಸೇರಿದಾಗ ನಮ್ಮ ಹತ್ತಿರ ಪೇಪರ್‌ಗಳಿಗೆ ಸಹಿ ಹಾಕಿಸಿಕೊಂಡಿದ್ದಾರೆ. ಆ ಪ್ರಕಾರ ಕಂಪನಿಯೊಳಗೆ ನಡೆಯುವುದೇನನ್ನೂ ನಾವು ಮಾತನಾಡುವ ಹಾಗೆ ಇಲ್ಲ. ನಿಮ್ಮ ಹತ್ತಿರ ಮಾತನಾಡಿದ್ದಕ್ಕಾಗಿ ನಾವು ಕೆಲಸ ಕಳೆದುಕೊಳ್ಳಬಹುದು". ಆದಾಗ್ಯೂ ಅನೇಕ ಕಾರ್ಮಿಕರು ಕೊನೆಗೆ ಈ ಸಿನೆಮಾದಲ್ಲಿ ಮಾತನಾಡಿದರು. ಈ ಪ್ಲ್ಯಾಂಟ್‌ನಲ್ಲಿ ಕೆಲಸ ಮಾಡುವುದರಿಂದ ಉಂಟಾಗುವ ಆರೋಗ್ಯದ ಅಪಾಯಗಳ ಬಗ್ಗೆ ಅವರಿಗೆ ಅರಿವಿತ್ತು. ಈ ಕೆಲಸಗಾರರಿಗಿದ್ದ ಕ್ಯಾನ್ಸರ್ ಶೇಖಡವಾರು 4.2 ಆಗಿತ್ತು. ಆದರೆ ರಾಷ್ಟ್ರೀಯ ಆವರೇಜ್ 0.6 ಶೇಕಡವಾರಾಗಿತ್ತು. 0.9% ಪಕ್ಕದ ಕಾರ್ಖಾನೆಯಲ್ಲಿತ್ತು. ಕಾರ್ಮಿಕರಲ್ಲಿ ಒಟ್ಟು 11 ಜನ ಮಡಿದ ವರದಿ ಇತ್ತು. ಕಾರ್ಮಿಕರ ಊಹೆಯ ಪ್ರಕಾರ ಎಷ್ಟೋ ಸಂದರ್ಭಗಳಲ್ಲಿ ಒಬ್ಬ ಕಾರ್ಮಿಕ ಕ್ಯಾನ್ಸರ್ ಹೊಂದಿದ್ದಾಗ್ಯೂ ಕೂಡಾ ಕಂಪನಿಯ ಡಾಕ್ಟರ್‌ಗಳು ಅದನ್ನು ಬೇರೆಯೇ ಕಾಯಿಲೆಯೆಂದು ಹಣೆಪಟ್ಟಿ ಹಚ್ಚಿ ಬಿಡುತ್ತಿದ್ದರು. ತಮ್ಮ ಸಹ ಕಾರ್ಮಿಕನೊಬ್ಬರ ಬಗ್ಗೆ ಇವರು ಹೇಳಿದರು. ಆತ ಹೊಟ್ಟೆ ನೋವಿನಿಂದಾಗಿ ಕಂಪನಿಯ ಆಸ್ಪತ್ರೆಗೆ ತೆರಳಿದ. ಅಲ್ಲಿ ಆತನಿಗೆ ನೋವು ಶಮನದ ಗುಳಿಗೆಗಳನ್ನು ಕೊಡಲಾಯಿತು. ಆತ ಮೂರು ವಾರದೊಳಗೆಯೇ ಸತ್ತು ಹೋದ. ಡಾಕ್ಟರ್ ಆತನಿಗೆ ಟ್ಯೂಬರ್‌ಕ್ಯುಲೋಸಿಸ್ ಇತ್ತೆಂದು ಹೇಳಿದರು. ಆದರೆ ಕಂಪನಿಯಲ್ಲಿ ಕೆಲಸ ಮಾಡುವುದು ಆರೋಗ್ಯಕ್ಕೆ

ಅಪಾಯಕಾರಿ ಎಂಬುದು ಈ ಕಾರ್ಮಿಕರಿಗೆ ಅರ್ಥವಾಗಿತ್ತು. ಬೇರೆ ರೀತಿಯ ಕೆಲಸ ಸಿಕ್ಕರೆ ಇಲ್ಲಿ ಕೆಲಸ ಮಾಡುವುದಿಲ್ಲವೆಂಬುದು ಅನೇಕ ಕಾರ್ಮಿಕರ ಅಭಿಪ್ರಾಯವಾಗಿತ್ತು. ಕಾರ್ಮಿಕನೊಬ್ಬರ ವಿಧವೆಯೊಬ್ಬಳ ಮಗನಿಗೆ ಈ ಕಂಪನಿಯಲ್ಲಿಯೇ ಆಕೆಯ ಗಂಡನ ಮರಣಾನಂತರ ಕೆಲಸ ಸಿಕ್ಕಿತು. ಆಕೆ ಹೇಳಿದಳು, "ನನ್ನ ಮಗ ಕೆಲಸಕ್ಕೆ ಹೋಗಲು ಹೆದರುತ್ತಾನೆ, ಆತನ ತಂದೆ ಸತ್ತ ಹಾಗೆ ತಾನೂ ಸಾಯಬಹುದು ಎಂಬ ಭಯ ಆತನಿಗೆ". ಆದರೆ ಅವನಿಗೆ ಹೇಳಿ - ಹೊರಗಿರುವ ಜನರಿಗೂ ಕೂಡಾ ಕ್ಯಾನ್ಸರ್ ಬರಬಹುದು, ಅವರೂ ಕ್ಯಾನ್ಸರ್‌ನಿಂದ ಸಾಯಬಹುದು, ನಾವೇನು ಮಾಡಲು ಸಾಧ್ಯ ಹೇಳಿ? ನಮಗೆ ಅವನ ಕೆಲಸದ ಅಗತ್ಯವಿದೆ."

IREಯ ಕಾರ್ಮಿಕರ ಆರೋಗ್ಯದ ಬಗ್ಗೆ ಹೇಳಬಹುದಾದ ವರೆಂದರೆ ಆ ಕಂಪನಿಯವರು ಮಾತ್ರ. ಆದರೆ ಕಂಪನಿಯವರು ಕಾರ್ಖಾನೆಯ ಒಳಗೆ ನಡೆಯುವ ಅಪಾಯಗಳನ್ನು ಗುರುತಿಸು ವುದಕ್ಕೇ ಒಪ್ಪಿಕೊಳ್ಳುವುದಿಲ್ಲ. ಕಾರ್ಖಾನೆಯ ಒಳಗೆ ಪ್ರತಿಯೊಬ್ಬ ಕಾರ್ಮಿಕನೂ ಆತನು ಒಳಗಾಗಬಹುದಾದ ರೇಡಿಯೋ ಆಕ್ಟಿವಿಟಿಯಿಂದ ರಕ್ಷಣೆ ಪಡೆಯಲು ಕಾರ್ಖಾನೆಯ ಒಳಗೆ ಟ್ಯಾಗ್ ಒಂದನ್ನು ಧರಿಸಬೇಕಾಗುತ್ತದೆ. ಈ ಟ್ಯಾಗ್‌ಗಳನ್ನು ಬಾಂಬೆಯ ಬಾಬಾ ಅಟೋಮಿಕ್ ರೀಸರ್ಚ್ ಸಂಸ್ಥೆಯಲ್ಲಿ ಪರೀಕ್ಷಿಸಲಾಗುತ್ತದೆ. IREಯ ಅಧಿಕಾರ ವರ್ಗದವರಿಗೆ ಮಾತ್ರ ಇದರ ವರದಿಗಳು ಸಿಗುತ್ತವೆ. ಈ ಕಾರ್ಮಿಕರು ಆಸ್ಪತ್ರೆಯಲ್ಲಿ ಯಾಂತ್ರಿಕವಾಗಿ ಪರೀಕ್ಷೆಗೂ ಒಳಗಾಗಲ್ಪಡುತ್ತಾರೆ. ಕೆಲಸಗಾರನೊಬ್ಬ ಒಂದು ಅಪಾಯಕಾರಿ ವಿಭಾಗದಿಂದ ಅಪಾಯಕಾರಿಯಲ್ಲದ ವಿಭಾಗಕ್ಕೆ ವರ್ಗವಾದಾಗ ಏನೋ ಸಂಭವಿಸಿದೆಯೆಂದು ಕಾರ್ಮಿಕರು ಭಾವಿಸುತ್ತಾರೆ. ಈ ವಿಭಾಗಗಳನ್ನು ಅಧಿಕಾರಿಗಳು ಮಾಡಿರುವುದಿಲ್ಲ, ಆದರೆ ಯಾವುವು ಅಪಾಯಕಾರಿ ಕೆಲಸಗಳೆಂದು ಕಾರ್ಮಿಕರಿಗೆ ತಿಳಿದಿರುತ್ತದೆ. ಅಪಾಯಕಾರಿ ವಿಭಾಗದಿಂದ ಕಾರ್ಮಿಕನೊಬ್ಬ ವರ್ಗಾಯಿಸ ಲ್ಪಟ್ಟಾಗ ಮಾತ್ರವೇ ಆ ಕೆಲಸಗಾರನ ಮನಸ್ಸಿನ ಹಾಗೂ ಕಾತರತೆಯನ್ನು ಊಹಿಸಬಹುದಾಗಿದೆ. ಕಾರ್ಮಿಕರೂ ನಿಜ ವಾಗಿಯೂ ಭಯದಲ್ಲಿಯೇ ಬದುಕುತ್ತಿರುತ್ತಾರೆ.

ಇನ್ನೊಂದು ದುರಂತವೆಂದರೆ ಈ ಕಾರ್ಮಿಕರ ಮಕ್ಕಳ ಬಗೆಗಿನದು. ಈ ಮಕ್ಕಳಲ್ಲಿ ಹೆಚ್ಚು ಭಾಗ ದೈಹಿಕ ಊನತೆ ಹಾಗೂ ಮಾನಸಿಕ ಅಸ್ವಸ್ಥತೆ ಕಂಡುಬರುತ್ತದೆ. ಕೆಲಸಗಾರರು ಆಗಾಗ್ಗೆ ತಮ್ಮ ಕುಟುಂಬದ ಒಬ್ಬರು, ಇಬ್ಬರು ಅಥವಾ ಎಲ್ಲರೂ ದೈಹಿಕ ಊನತೆ ಹಾಗೂ ಮಾನಸಿಕ ಅಸ್ವಸ್ಥತೆಯಿಂದಲೇ ಹುಟ್ಟಿದ್ದಾರೆ ಎಂದು ಹೇಳುತ್ತಾರೆ. ಒಂದು ಕುಟುಂಬದ ನಾಲ್ಕೂ ಮಕ್ಕಳೂ ಅತ್ಯಂತ ತೀವ್ರವಾದ ಮಾನಸಿಕ ಅಸ್ವಸ್ಥತೆ ಹೊಂದಿದ್ದರು. ಸದಾ ಅವರ ಅಳಲೆಂದರೆ "ನಾವು ಸತ್ತಾಗ ನಮ್ಮ ಮಕ್ಕಳ ಭವಿಷ್ಯ ಏನು?".

ಸಂತಾನೋತ್ಪತ್ತಿಯ ಮೇಲಿನ ರೇಡಿಯೇಶನ್ ಪ್ರಭಾವಗಳನ್ನು ಚೆನ್ನಾಗಿ ಅಭ್ಯಾಸ ಮಾಡಲಾಗಿದೆ. ಆದರೆ IRE ಕಂಪನಿಯು ತಮ್ಮ ಕಾರ್ಯಕ್ರಮಗಳು ಅಪಾಯಕಾರಿ ಎಂಬುದನ್ನು ಒಪ್ಪಿಕೊಳ್ಳುವುದೇ ಇಲ್ಲ.

ಯಾವುದೇ ನ್ಯೂಕ್ಲಿಯರ್‌ನ ಕಾರ್ಯಕ್ರಮದಲ್ಲಿ ರೇಡಿಯೋ ಆಕ್ಟೀವ್‌ನ ವೇಸ್ಟನ್ನು ಬಿಸಾಕುವುದೇ ಒಂದು ದೊಡ್ಡ ಸಮಸ್ಯೆ. IRE ರೇಡಿಯೋ ಆಕ್ಟೀವ್ ತ್ಯಾಜ್ಯ ವಸ್ತುಗಳನ್ನು ಭರಿಸುತ್ತಲೇ ಇರುತ್ತದೆ. 1985ರಲ್ಲಿ ಕಂಪನಿಯು 1000 ಟನ್ನಷ್ಟು ರೇಡಿಯೋ ಆಕ್ಟೀವ್ ತ್ಯಾಜ್ಯ ವಸ್ತುವನ್ನು ಹತ್ತಿರದ ಹಳ್ಳಿಯೊಂದರಲ್ಲಿ ಬಿಸಾಕಲು ಪ್ರಯತ್ನಿಸಿತು. ಸ್ಥಳೀಯರು ಬಲವಾಗಿ ಪ್ರತಿಭಟಿಸಿದಾಗ ಕಂಪನಿಯು ತನ್ನ ಸ್ಥಳವನ್ನು ಬದಲಾಯಿಸಲು ಯೋಚಿಸಿತು. ನಂತರ ಕೇರಳದಿಂದ ಈ ತ್ಯಾಜ್ಯ ವಸ್ತುವನ್ನು ತಮಿಳುನಾಡಿನ ಅಣುಶಕ್ತಿ ಕೇಂದ್ರವಾದ ಕಲ್ಪಾಕಂಗೆ ಸಾಗಿಸಿತು. ಆದರೆ ಕಲ್ಪಾಕಂ ಜನರು ಹಿಂಸಾತ್ಮಕ ಕ್ರಮ ಕೈಗೊಳ್ಳುವ ಬಗ್ಗೆ ಹೆದರಿಸಿದಾಗ, ಆ ತ್ಯಾಜ್ಯ ವಸ್ತು ಮತ್ತೆ IRE ಕಂಪನಿಗೇ ವಾಪಸ್ಸು ಬಂದಿತು. ಕೊನೆಗೆ ಕಾರ್ಖಾನೆಯ ಪರಿಧಿಯಲ್ಲಿಯೇ ಈ ತ್ಯಾಜ್ಯ ವಸ್ತುವನ್ನು ಹೂತಿಡಲು ತೀರ್ಮಾನಿಸಲಾಯಿತು. ಈ ವೇಸ್ಟನ್ನು ಸಿಮೆಂಟಿನ ಟ್ಯಾಂಕಿನ ಬ್ಯಾರಲ್ಸ್‌ಗಳಲ್ಲಿ ತುಂಬಿ ಅದರ ಮೇಲೆ ಸಿಮೆಂಟಿನ ಕಲ್ಲುಗಳನ್ನು ಮುಚ್ಚಿ ಹೂಳಲು ತೀರ್ಮಾನಿಸಲಾಯಿತು. ಈ ಕೆಲಸದಲ್ಲಿ ತೊಡಗಿದ ಗುಂಪಿನಲ್ಲಿದ್ದ ಒಬ್ಬ ಕೆಲಸಗಾರ ಈ ಬ್ಯಾರಲ್ಸ್‌ಗಳು ಸೋರುತ್ತಿದ್ದವೆಂದು ಹೇಳಿದ. ಈ ಸೋರುವ ಬ್ಯಾರಲ್ಸ್‌ಗಳನ್ನು ದೈಹಿಕವಾಗಿ ಎತ್ತಿ ಇಳಿಸಿದ ಕಾರ್ಮಿಕರು ರೇಡಿಯೋ ಆಕ್ಟೀವ್‌ಗೆ ಒಳಗಾಗಿರುವುದನ್ನು ನಾವು ಊಹಿಸಬಹುದಾಗಿದೆ. ವಿಜ್ಞಾನಿಗಳೂ ಸೇರಿದಂತೆ ಬಹಳ ಜನರು ದೀರ್ಘಾವಧಿಯಲ್ಲಿ ಈ ಸಿಮೆಂಟಿನ ಟ್ಯಾಂಕ್‌ಗಳು ರೇಡಿಯೋ ಆಕ್ಟೀವಿಟಿಯನ್ನು ತಡೆದು ನಿಲ್ಲಿಸಲಾರವು ಎಂಬ ಭಯವನ್ನು ವ್ಯಕ್ತಪಡಿಸಿದ್ದರೆ. ಮಣ್ಣು ಆಸಿಡಿಕ್ ಆಗಿರುವುದರಿಂದ ಹಾಗೂ ಸಿಮೆಂಟಿನ ಟ್ಯಾಂಕಿನ ದಪ್ಪ ನಿಧಾನವಾಗಿ ಕರಗಿಹೋಗುವುದರಿಂದ ರೇಡಿಯೋ ಆಕ್ಟೀವ್ ಅಂಶವು ಮಣ್ಣಿನಲ್ಲಿ ಸೋರಿ ಹೋಗಬಹುದಾಗಿದೆ. ಹಾಗೂ ಆ ಸ್ಥಳದ ನೆಲದ ನೀರನ್ನು ಮಲಿನಗೊಳಿಸಬಹುದಾಗಿದೆ. ಅದು ಪೆರಿಯಾರ್ ನದಿಯನ್ನೂ ಸೇರಬಹುದಾಗಿದೆ. ಈ ಸ್ಥಳದ ಜನರು ರೇಡಿಯೋ ಆಕ್ಟೀವ್ ಅಂಶವನ್ನು ಕಾರ್ಖಾನೆಯ ಪರಿಧಿಯಲ್ಲಿ ಹೂಳುವುದನ್ನು ಗಟ್ಟಿಯಾಗಿ ವಿರೋಧಿಸಿದ್ದರು. ಅವರು ಕಾರ್ಖಾನೆಯ

ಅಧಿಕಾರಿಗಳಿಗೂ ಪ್ರತಿರೋಧ ತೋರಿಸಿದ್ದರು. ಆದರೆ ಪೊಲೀಸ್ ಬಳಸಿ ಅವರನ್ನು ಸದೆಬಡಿಯಲು ಪ್ರಯತ್ನಿಸಲಾಯಿತು. ಅವರು ನ್ಯಾಯಾಲಯಕ್ಕೂ ಹೋಗಿದ್ದರು, ಆದರೆ ಮ್ಯಾನೇಜ್‌ಮೆಂಟ್‌ನ ನಿರ್ಧಾರಕ್ಕೆ ತಡೆಯಾಜ್ಞೆ ತರುವುದಕ್ಕೂ ಸಹ ಇವರಿಗೆ ಸಾಧ್ಯವಾಗಲಿಲ್ಲ.

ಈ ಸಿನೆಮಾವನ್ನು ಕೇರಳದ ಕಾರ್ಮಿಕ ಸಂಘಟನೆಗಳ ಸಹಕಾರದಿಂದ ತಯಾರಿಸಲಾಯಿತು. ಆದರೆ ಸಿನೆಮಾ ನೋಡಿದ ಮೇಲೆ ಕಾರ್ಮಿಕ ಸಂಘಟನೆಗಳು ಈ ಸಿನೆಮಾವನ್ನು ಪ್ರತಿಭಟಿಸುವ ನಿರ್ಧಾರವನ್ನು ತೆಗೆದುಕೊಂಡರು. IRE ಅಧಿಕಾರಿ ವರ್ಗದವರ ಮಿತಿಗಳನ್ನು ತೋರಿಸುವ ಸಿನೆಮಾವಾಗಿದ್ದರೆ ಅವರು ಬೆಂಬಲ ತೋರಿಸುತ್ತಿದ್ದರು. ಆದರೆ ಅವರು ಅಣುಶಕ್ತಿಯ ವಿರುದ್ಧದ ಸಿನೆಮಾದ ಸಂದೇಶವನ್ನು ಒಪ್ಪಿಕೊಳ್ಳಲಿಲ್ಲ. ಅಣುಶಕ್ತಿ ಕಾರ್ಯಕ್ರಮಗಳ ಮೂಲವನ್ನೇ ಪ್ರಶ್ನಿಸುವ ನಿಲುವನ್ನು ಒಪ್ಪಿಕೊಳ್ಳುವುದು ಅವರಿಗೆ ಸಾಧ್ಯವಾಗಲಿಲ್ಲ. ಶಕ್ತಿಯ ಉತ್ಪಾದನೆಗೆ ಅಣುಶಕ್ತಿ ಬೇಕಾಗಿದ್ದು ಇದನ್ನು ಅಪಾಯ ರಹಿತವಾಗಿಸಬಹುದು ಎಂಬುದು ಇವರ ಅಭಿಪ್ರಾಯ. ಕೈಗಾರಿಕಾ ಬೆಳವಣಿಗೆಗೆ ಇದು ಅಗತ್ಯ ಹಾಗೂ ಈ ಮೂಲಕ ಕೆಲಸಗಳನ್ನು ಸೃಷ್ಟಿಸಬಹುದಲ್ಲದೇ ಆರ್ಥಿಕ ಪ್ರಗತಿಯನ್ನು ಸಾಧಿಸಬಹುದು ಎಂಬುದು ಇವರ ನಂಬಿಕೆಯಾಗಿತ್ತು.

ಈ ಸಿನೆಮಾವನ್ನು ಅನೇಕ ಕಾರ್ಯಕರ್ತ ಗುಂಪುಗಳು ಕ್ಯಾಂಪೇನ್‌ಗಾಗಿ ಈ ಸ್ಥಳದಲ್ಲಿ ಉಪಯೋಗಿಸಿಕೊಂಡರು. ಸ್ಥಳೀಯರಲ್ಲಿ ಅನೇಕ ಪ್ರತಿಭಟನೆಗಳಾದವು. ಈ ಪ್ರತಿಭಟನೆಗಳು ಕಾರ್ಖಾನೆಯ ಅಸ್ತಿತ್ವಕ್ಕೇ ಬೆದರಿಕೆ ಹುಟ್ಟಿಸುವಂತಿದ್ದವು. ಪಾರ್ಲಿಮೆಂಟ್‌ನಲ್ಲಿ ಈ ವಿಚಾರದ ಬಗ್ಗೆ ಚರ್ಚೆಗಳು ನಡೆದವು. ಮ್ಯಾನೇಜ್‌ಮೆಂಟ್‌ನವರು ಅನೇಕ ಸಮಸ್ಯೆಗಳ ಕಡೆ ಮತ್ತೆ ನೋಡುವಂತಾಯಿತು. ಪೆರಿಯಾರ್ ನದಿಯ ಮೇಲೆ ಕಟ್ಟಲಾದ ಮಾನೋಕ್ಸೈಡ್ ಶೇಖರಿಸುವಂತಿದ್ದ ಗೋಡೌನನ್ನು ಅಲ್ಲಿಂದ ವರ್ಗಾಯಿಸಲಾಯಿತು. ಹೊಸದಾದ ಹಾಗೂ ಗಟ್ಟಿಯಾದ ಕಟ್ಟಡವೊಂದನ್ನು ಸುರಕ್ಷಿತ ಸ್ಥಳದಲ್ಲಿ ಗೋಡೌನ್‌ಗಾಗಿ ಮಾಡಲಾಯಿತು. ಕಾರ್ಖಾನೆಯಲ್ಲಿ ಕೆಲಸಗಾರರಿಗೆ 'ರಿಸ್ಕ್ ಅಲೋಯನ್ಸ್' ಕೊಡುವುದಕ್ಕೆ ಪ್ರಾರಂಭಿಸಿದರು. ಆದರೆ ಮ್ಯಾನೇಜ್‌ಮೆಂಟಿನವರು 'ರೇಡಿಯೇಶನ್ ಅಪಾಯ ಕಾರಿಯಾದ್ದು' ಎಂಬುದನ್ನು ಒಪ್ಪಿಕೊಳ್ಳಲೇ ಇಲ್ಲ. ಈ ಸಿನೆಮಾದಲ್ಲಿ ಮಾತನಾಡಿದ ಯಾವ ಕೆಲಸಗಾರರನ್ನೂ ಬಲಿಪಶು ಗಳನ್ನಾಗಿಸಲಿಲ್ಲ. ಆದರೆ ಮೂಲಭೂತವಾಗಿ ಯಾವುದೂ ಬದಲಾವಣೆಯಾಗಿಲ್ಲ. ಕಾರ್ಖಾನೆ ಹಿಂದಿನಂತೆಯೇ ಮುಂದುವರಿಯುತ್ತಿದೆ, ಕಾರ್ಮಿಕರು ಅದೇ ಅಪಾಯಕರ ಸ್ಥಿತಿಯಲ್ಲಿಯೇ ಮುಂದುವರಿದಿದ್ದಾರೆ. ಅವರ ಆರೋಗ್ಯದ ಬಗ್ಗೆಗಿನ, ಅವರ ಬದುಕಿಗಿರುವ ಅಪಾಯ ಹಾಗೂ ಸಂತಾನೋತ್ಪತ್ತಿಯ ಮೇಲಿನ ಪರಿಣಾಮದ ಬಗ್ಗೆ ಇವರಿಗೆ ಮಾಹಿತಿ ದಕ್ಕಿಲ್ಲ. ಮರಳಿನಿಂದ ಮಾನೋಕ್ಸೈಡ್‌ನ್ನು ದೈಹಿಕವಾಗಿ ಬೇರ್ಪಡಿಸುವ ಕೆಲಸವನ್ನು ಸ್ಥಳೀಯ ಕೆಲಸಗಾರರು ಕಾಂಟ್ರ್ಯಾಕ್ಟ್ ಹಂತದಲ್ಲಿಯೇ ಮುಂದುವರಿಸಿದ್ದಾರೆ. ಮೇಲಾಗಿ ಅಣುಶಕ್ತಿಯ ಅಡಿಯಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮಗಳಿಗೂ 'ದಿ ಅಫಿಶಿಯಲ್ ಸೀಕ್ರೆಟ್ ಆಕ್ಟ್' ಒಂದು ಗಟ್ಟಿ ಕವಚವಾಗಿದೆ.

ಈ ಸಿನೆಮಾ ಹಲವಾರು ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುತ್ತದೆ. ಹಾಗೂ ಈ ಕಾರ್ಖಾನೆಯ ಉತ್ಪಾದನೆ ಹಲವಾರು ಘಟನೆಗಳಿಗೆ ಕಾರಣವಾಗಿದೆ ಎಂಬುದನ್ನೂ ಇದು ಹೇಳುತ್ತದೆ. ಅತ್ಯಂತ ಮೂಲಭೂತವಾದ ವಿಷಯವೆಂದರೆ 'ಶಾಂತಿ ಬಳಕೆ'ಗಾಗಿ ಎನ್ನುವ ಅಣುಶಕ್ತಿ ಎಷ್ಟು ಸುರಕ್ಷಿತವಾದದ್ದು ಎಂಬುದು. ಬಹುಮಂದಿ ವಿಜ್ಞಾನಿಗಳು ಹಾಗೂ ಬುದ್ಧಿ ಜೀವಿಗಳು ಇತ್ತೀಚೆಗೆ ಬಾಂಬ್ ಸಿಡಿತವನ್ನು ಪ್ರತಿಭಟಿಸಿದರೇ ಹೊರತು ಶಾಂತಿ ಬಳಕೆಗಾಗಿ ಬಳಸಲಾಗುವ ಅಣುಶಕ್ತಿಯನ್ನಲ್ಲ. ಅಣುಶಕ್ತಿ ಸುರಕ್ಷಿತವಾದದ್ದು ಅಥವಾ ಸುರಕ್ಷಿತಗೊಳಿಸು ವಂತಹದು, ಇದರ ಲಾಭಗಳು ಅಪಾಯಗಳಿಗಿಂತ ಹೆಚ್ಚು ಎನ್ನುವುದನ್ನು ನಂಬುವಂತೆ ಮಾಡುತ್ತಾರೆ. ಇದು ಪ್ರಶ್ನಾರ್ಹವಾದ ನಂಬಿಕೆ. ಈ ಸಿನೆಮಾ D.A.E.ನ ನಿರ್ದೇಶಕರಾಗಿದ್ದ ಪ್ರೊ. ಸತೀಶ್ ದಾವನ್‌ರವರನ್ನು ಸಂದರ್ಶಿಸಿದೆ.

ಅವರ ಪ್ರಕಾರ ಸಾಂಪ್ರದಾಯಿಕ ಶಕ್ತಿಗಳಾದ ಅಣೆಕಟ್ಟು ಹಾಗೂ ಥರ್ಮಲ್ ಪವರ್‌ಪ್ಲ್ಯಾಂಟ್‌ಗಳಲ್ಲಿ ಅಪಾಯದ ಪ್ರಮಾಣ ಕಡಿಮೆ, ಯಾಕೆಂದರೆ ಯಾವುದು ಸಮರ್ಥ ರೂಪದ ಅಪಾಯಗಳು ಎಂದು ನಮಗೆ ತಿಳಿದಿದೆ. ಅಣುಶಕ್ತಿಗೆ ಸಂಬಂಧಿಸಿದಂತೆ ನಮಗೆ ಪೂರ್ಣ ಪ್ರಮಾಣದ ಅಪಾಯದ ಬಗ್ಗೆ ಅರಿವು ಇರುವುದರಿಂದ ಅದನ್ನು ಮೆಚ್ಚಲು ನಮಗೆ ಸಾಧ್ಯವಾಗುವುದಿಲ್ಲ. ಅಮೇರಿಕಾದ ಥ್ರೀ ಮೈಲ್ ಐಲ್ಯಾಂಡ್‌ನ ಅಣುಶಕ್ತಿ ಕೇಂದ್ರದಲ್ಲಿ ನಡೆದ ದುರಂತ ಹಾಗೂ ರಷ್ಯಾದ ಚೆರ್ನೋಬೈಲ್‌ನ ಅಣುಶಕ್ತಿ ಕೇಂದ್ರದಲ್ಲಿ ನಡೆದ ಸರ್ವನಾಶದ ಬಗ್ಗೆಗಿನ ಉದಾಹರಣೆಗಳು ನಮ್ಮಲ್ಲಿವೆ. ಅಮೇರಿಕ ಹೊಸ ಅಣುಶಕ್ತಿ ಕೇಂದ್ರಗಳನ್ನು ತೆರೆಯುವುದನ್ನು ಕಾನೂನಿನ ಮೂಲಕ ನಿರಾಕರಿಸತೊಡಗಿದೆ ಹಾಗೂ ಯುರೋಪಿನ ಬಹುತೇಕ ರಾಷ್ಟ್ರಗಳು ಅಣುಶಕ್ತಿಯ ಆಯ್ಕೆಯನ್ನು ನಿರಾಕರಿಸತೊಡಗಿವೆ.

ಎರಡನೆಯದಾಗಿ ಮಾಹಿತಿಯನ್ನು ಪಡೆಯುವುದು ಎಲ್ಲರ ಹಕ್ಕಿನ ವಿಷಯ. ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಅಪಾಯಕಾರಿಯಾಗಿರುವ ಸಾಧ್ಯತೆಯನ್ನು ಹೊಂದಿದಂತಹ

ತಾಂತ್ರಿಕತೆಯ ಆಯ್ಕೆಯ ಪ್ರಶ್ನೆ - ಪೂರ್ಣ ಮಾಹಿತಿಯನ್ನು ನೀಡಿ ಹಾಗೂ ಸಾರ್ವಜನಿಕ ಚರ್ಚೆಗಳ ಮೇಲೆ ಅವಲಂಬಿತವಾಗಿರಬೇಕಾಗುತ್ತದೆ. ಅಥವಾ ಅದರ ಬಗ್ಗೆಗಿನ ಮಾಹಿತಿಗಳು ಎಲ್ಲರಿಗೂ ದಕ್ಕುವಂತಿರಬೇಕು. ಅಣುಶಕ್ತಿ ಸಂಬಂಧಿತ ಕಾರ್ಯಕ್ರಮಗಳು ಯಾವ ರೀತಿ ಇರಬೇಕು ಎಂಬುದನ್ನು ನಿರ್ಧರಿಸುವಂತಹ ಒಂದು ಅವಕಾಶ ಇರಬೇಕು ಹಾಗೂ ಈ ಕಾರ್ಯಕ್ರಮಗಳಿಂದ ಉಂಟಾಗುವ ಅಪಾಯಗಳ ಬಗ್ಗೆಯೂ ಇವರಿಗೆ ಪೂರ್ಣ ಮಾಹಿತಿ ಇರಬೇಕು. ಇಂತಹ ಸನ್ನಿವೇಶದಲ್ಲಿ ಮಾತ್ರ ಸರ್ಕಾರವನ್ನು ಹಾಗೂ ಈ ಕಾರ್ಯಕ್ರಮಗಳ ಮೇಲೆ ಹಿಡಿತ ಹೊಂದಿದವರಿಗೆ - ಈ ಕಾರ್ಯಕ್ರಮಗಳು ಅಪಾಯದಿಂದ ರಕ್ಷಣೆ ಹೊಂದಿರಬೇಕು, ಸುರಕ್ಷತೆ ಇರಬೇಕು ಎಂಬ ಒತ್ತಡವನ್ನು ತರಬಹುದಾಗಿದೆ.

ಕೊನೆಯದಾಗಿ, ತಾಂತ್ರಿಕತೆಯು, ಅಭಿವೃದ್ಧಿಗೆ ಮಾರಕ, ಕಾರ್ಮಿಕರಿಗೆ ವಿರೋಧ ಹಾಗೂ ಜನರಿಗೆ ವಿರೋಧವಾಗಿರುತ್ತದೆ ಎಂಬಂತಹ ಅಪಾಯಕಾರಿ ವಾದಗಳನ್ನು ಈ ಪ್ರಶ್ನೆಗಳು ಎತ್ತುತ್ತವೆ ಎಂದು ಸಾಧಾರಣೀಕರಿಸಿಬಿಡುವ ಅಪಾಯವಿದೆ. ಆದರೆ ಈ ಮೂಲಕ ಚರ್ಚೆಯ ಸಾಧ್ಯತೆಗಳನ್ನೇ ಮುರುಟಿಸಿಬಿಡುವ ಪ್ರಯತ್ನವಾಗುತ್ತದೆ. ಜನರ ಹಾಗೂ ಅವರ ಹಕ್ಕುಗಳ ಬಗ್ಗೆ ಕಾಳಜಿಯುಳ್ಳಂತಹ ಜನರ ನಡುವೆ ಮುಕ್ತವಾದ ಹಾಗೂ ಸ್ವಾತಂತ್ರ್ಯವಾದ ಚರ್ಚೆಗೆ ಸಾಧ್ಯವಾಗುವಂತಹ ಒಂದು ಅನುಕೂಲಕರ ವಾತಾವರಣವನ್ನು ನಾವು ಹುಟ್ಟುಹಾಕುವ ಅಗತ್ಯವಿದೆ. ಈ ಮೂಲಕ ಮಾತ್ರ ಅಧಿಕಾರ ಹೊಂದಿರುವವರು ಜನರಿಗೆ ಪ್ರಾಮಾಣಿಕವಾಗಿ ಜವಾಬ್ದಾರಿಯುತರಾಗಿರುವಂತೆ ನೋಡಿಕೊಳ್ಳಬಹುದಾಗಿದೆ. ಆಗ ಮಾತ್ರ ಅಣುಶಕ್ತಿ ಬಾಂಬ್ ಸಿಡಿತ ನಮಗೆ ಬೇಕಾಗಿದೆಯೇ ಎಂಬುದರ ಬಗ್ಗೆ ಜನರು ನಿರ್ಧರಿತವಾಗಿ ಹೇಳಬಹುದಾಗಿದೆ. ಜೊತೆಗೆ ಮತ್ತಷ್ಟು ಹಿರೋಶಿಮಾಗಳು ಸೃಷ್ಟಿಯಾಗದಂತಹ ಒಂದು ಸುರಕ್ಷಿತ ವಾತಾವರಣವನ್ನು ನಾವು ಸೃಷ್ಟಿಸಬಹುದಾಗಿದೆ.

*'ಲಿವಿಂಗ್ ಇನ್ ಫಿಯರ್' ಸಿನಿಮಾದ ಕನ್ನಡ ಪ್ರತಿಯು ಈ ಕೆಳಕಂಡ ವಿಳಾಸದಲ್ಲಿ ದೊರಕುತ್ತದೆ. 'ನೆಟ್ ವೇವ್ಸ್', 74, 10th ಕ್ರಾಸ್, 1ನೇ ಫೇಸ್, ಜೆ. ಪಿ. ನಗರ, - 560 078, ಫ್ಯಾಕ್ಸ್ : 080-6647316*

## ಬಾಂಬ್ ವಿರೋಧಿಸಿದ ವಿಜ್ಞಾನಿಗಳು

ಬಾಂಬ್ ಪರೀಕ್ಷೆ ನಡೆದ ಕೆಲವೇ ದಿನಗಳ ನಂತರ 100 ಜನ ಭಾರತೀಯ ವಿಜ್ಞಾನಿಗಳು ಬಾಂಬ್ ವಿರೋಧಿಸಿ ಪ್ರತಿಭಟನಾ ಹೇಳಿಕೆ ನೀಡಿದ್ದಾರೆ -

ನಾವು ವಿವಿಧ ಕ್ಷೇತ್ರಗಳಲ್ಲಿರುವ ವಿಜ್ಞಾನಿಗಳು, ಅಣುಬಾಂಬ್ ಪರೀಕ್ಷೆ ನಡೆಸಿದ ಸರ್ಕಾರದ ನಿಲುವಿಗೆ ಅಸಮಾಧಾನ, ಅಸಂತೋಷ ವ್ಯಕ್ತಪಡಿಸುತ್ತೇವೆ. ಬಾಂಬ್ ಪರೀಕ್ಷೆಯನ್ನು ವಿಜ್ಞಾನ, ತಂತ್ರಜ್ಞಾನದ ಸಾಧನೆಯೆಂದು ಕರೆಯಲಾಯಿತು.

ಸರ್ಕಾರ ನಡೆಸಿದ ಬಾಂಬ್ ಪರೀಕ್ಷೆ ಶಸ್ತ್ರಾಸ್ತ್ರ ಪೈಪೋಟಿಗೆ ಕಾರಣವಾಗಿ ದಕ್ಷಿಣ ಏಶಿಯಾದ ವಲಯವು ಮಲಿನಗೊಳ್ಳುತ್ತದೆ. ಇದರಿಂದಾಗಿ ಈಗಾಗಲೆ ಬಿಗಡಾಯಿಸಿರುವ ವಾತಾವರಣವು ಇನ್ನೂ ಹಾಳಾಗಿ ಶಾಂತಿಯುತ ವಾತಾವರಣ ಕಷ್ಟಸಾಧ್ಯವಾಗುತ್ತದೆ.

ಪರೀಕ್ಷೆಗಳಿಂದ ನಿಶ್ಶಸ್ತ್ರೀಕರಣ ಸಾಧ್ಯವೆಂದು ಹೇಳುವ ಬಲಿಷ್ಠ ಅಣುಶಕ್ತಿ ರಾಷ್ಟ್ರಗಳ ಸಿನಿಕ ಭಾಷೆಯನ್ನೇ ಭಾರತವು ಪಾಲಿಸಿದೆ. ಸರ್ಕಾರವು ಸಾರ್ವಜನಿಕ ಚರ್ಚೆಯಿಲ್ಲದ ದುಬಾರಿ ಶಸ್ತ್ರಾಸ್ತ್ರ ಯೋಜನೆಗೆ ಬದ್ಧವಾಗಿದೆ. ದೇಶದ ಭದ್ರತೆಗೆ ತುರ್ತು ಅಪಾಯಗಳೇನೂ ಇರಲಿಲ್ಲ. ಶಿಕ್ಷಣ, ಆರೋಗ್ಯ, ಉದ್ಯೋಗ ಇತ್ಯಾದಿ ಅಗತ್ಯಗಳ ಪೂರೈಸುವುದು ತುರ್ತಾಗಿ ಆಗಬೇಕಿದೆ. ಈಗಿನ ಸರ್ಕಾರ ರಾಷ್ಟ್ರೀಯ ಭದ್ರತೆ ಕುರಿತು ಚರ್ಚೆಯ ಆಶ್ವಾಸನೆ ನೀಡಿತ್ತು. ಆದರೆ ರಕ್ಷಣ ನೀತಿಯನ್ನು ಯಾವುದೇ ಚರ್ಚೆಯಿಲ್ಲದೆ ಜಾರಿಗೊಳಿಸಿಬಿಟ್ಟಿತು.

ಅಣ್ವಸ್ತ್ರಗಳನ್ನು ನಿರಂತರವಾಗಿ ವಿರೋಧಿಸುತ್ತಲೇ ಬಂದಿರುವ ವಿಜ್ಞಾನಿಗಳ ಪರಂಪರೆಯನ್ನು ನಾವು ಗೌರವಿಸುತ್ತೇವೆ. ಅಣುಯುದ್ಧದ ಭೀಕರತೆಯನ್ನು ವಿಜ್ಞಾನ-ತಂತ್ರಜ್ಞಾನದ ಹೆಗ್ಗಳಿಕೆಯಲ್ಲಿ ಮರೆಯಬಾರದು. ಈಗಲೂ ನಾವೂ ಹಿರೋಶಿಮಾದ ಮೇಲೆ ಬಾಂಬ್ ಹಾಕಬೇಕಾದ ಅನಿವಾರ್ಯತೆ ಕುರಿತು ಮಾತನಾಡುವುದನ್ನು ಕೇಳುತ್ತೇವೆ. 1991ರಲ್ಲಿ ಅಮೇರಿಕನ್ ಮಾಧ್ಯಮಗಳು ಗಲ್ಫ್ ಯುದ್ಧವನ್ನು ತಾಂತ್ರಿಕತೆಯ ಪ್ರತಿಷ್ಠೆ ಎಂದು ತೋರಿಸಿದ್ದು ನಮ್ಮಲ್ಲಿ ಜಿಗುಪ್ಸೆ ಹುಟ್ಟಿಸಿದೆ. ಅಣ್ವಸ್ತ್ರಗಳನ್ನು ತಾಕತ್ತು ಎಂದು ಕರೆದುಕೊಳ್ಳುವ, ಅದನ್ನು ಹಿಮ್ಮೆಟ್ಟಿಸುವ ತಂತ್ರವಾಗಿ ಬಳಸುವ ಜಗತ್ತಿನಲ್ಲಿ ನಾವು ಸಂತೋಷವಾಗಿ ಸುಭದ್ರವಾಗಿರಲು ಸಾಧ್ಯವೆ?

(100 ವಿಜ್ಞಾನಿಗಳ ಸಹಿಯಲ್ಲಿ ಟಿ. ಆರ್. ಗೋವಿಂದರಾಜನ್, ಕಮಲ್‌ಲೋದಯ, ಕೃಷ್ಣಮದ್ದಲಿ, ಕಪಿಲ್ ಸರಾಂಜಪೆ, ವೆಂಕಟೇಶ್ ರಾಮನ್, ಆರ್. ರಾಮಾನುಜಂ, ಸುದೇಷ್ಣ ಸಿನ್ಹ, ಆರ್. ಶಂಕರ್, ಟಿ. ಜಯರಾಮನ್ (IMSC), ಡಿ. ಇಂದುಮತಿ, ಪ್ರಮಥನಾಥ್ ಶಾಸ್ತ್ರಿ (MRI), ಜೈಕುಮಾರ್ ರಾಧಾಕೃಷ್ಣನ್ (TIFR), ಕೆ. ವಿ. ಸುಬ್ರಮಣ್ಯಂ (SMI) ಇನಾಕ್ಷಿ ಭಟ್ಟಾಚಾರ್ಯ (IIT, ಚೆನ್ನೈ) ಇದ್ದಾರೆ).

# ಬಾಂಬ್ ವಿರೋಧಿಸಿ ನಡೆದ ಪ್ರತಿಭಟನೆಗಳು

**ದಕ್ಷಿಣ ಏಶಿಯಾದಲ್ಲಿ ಅಣ್ವಸ್ತ್ರ ಸ್ಪರ್ಧೆ ಬೇಡ!**

ಅಂತರರಾಷ್ಟ್ರೀಯ ಇಂಜಿನಿಯರುಗಳ, ವಿಜ್ಞಾನಿಗಳ ಜಾಲವು ಇತ್ತೀಚೆಗೆ ಭಾರತ ನಡೆಸಿದ ಸರಣಿ ಅಣುಬಾಂಬ್ ಪರೀಕ್ಷೆಗಳನ್ನು ಖಂಡಿಸುತ್ತದೆ. ಭಾರತ ಸರ್ಕಾರ ಯಾವುದೇ ಸಮರ್ಥನೆ ನೀಡಲಿ, ಪರೀಕ್ಷೆ ಒಂದಂಶವನ್ನಂತು ಸ್ಪಷ್ಟಪಡಿಸುತ್ತದೆ. ಅದೆಂದರೆ ಈ ಪರೀಕ್ಷೆಗಳು, ಅಣ್ವಸ್ತ್ರಗಳ ಮೂಲಕ ನಾವು ಧ್ವಂಸ ಮಾಡಲು ಶಕ್ತರು ಎಂಬ ಭಯವನ್ನು ನೆರೆಯ ರಾಷ್ಟ್ರಗಳಲ್ಲಿ ತುಂಬಿರುವುದು.

ಅಂ.ಇಂ.ವಿ.ಜಾ.ವು (CTBT ಅಡಿಯಲ್ಲಿ ಬರದ ಇತ್ತೀಚಿನ ಪರೀಕ್ಷೆಗಳನ್ನು ಸೇರಿದಂತೆ) ಅಣ್ವಸ್ತ್ರಕ್ಕೆ ಸಂಬಂಧಿಸಿದ ಎಲ್ಲಾ ಪರೀಕ್ಷೆಗಳನ್ನು ವಿರೋಧಿಸಿದೆ ಮತ್ತು ಮುಂದೆಯೂ ವಿರೋಧಿಸುತ್ತದೆ. ಅಣ್ವಸ್ತ್ರಗಳ ಯೋಜನೆ ರೂಪಿಸಿ, ತಯಾರಿಸಿ, ಪರೀಕ್ಷಿಸಿ ಮತ್ತು ನಿರ್ವಹಿಸುವ ಚಟುವಟಿಕೆಗಳಿಗೆ ಯಾವ ಸಮರ್ಥನೆಯೂ ಇಲ್ಲ. ಯಾಕೆಂದರೆ ಅವು ಮೂಲಭೂತವಾಗಿ ಭಯ, ಸಾಮೂಹಿಕ ನಾಶದ ಅಸ್ತ್ರಗಳು.

ಭಾರತ ನಡೆಸಿದ ಐದು ಅಣುಬಾಂಬ್ ಪರೀಕ್ಷೆಗಳು ದಕ್ಷಿಣ ಏಶಿಯಾದಲ್ಲಿ ಅಣ್ವಸ್ತ್ರ ಪೈಪೋಟಿಗೆ ನಾಂದಿ ಹಾಡಿದೆ. ಅಣ್ವಸ್ತ್ರಗಳು ಹುಟ್ಟು ಹಾಕುವ ಅನಾಹುತಗಳು ಜಗತ್ತಿನ 1/5 ಭಾಗದಷ್ಟು ಜನರಿಗೆ ಮನೆಯಾಗಿರುವ ಭಾರತದಲ್ಲಿ ಭೀಕರ ಪರಿಣಾಮ ಬೀರಬಲ್ಲದು. ನೆರೆ ರಾಷ್ಟ್ರಗಳಲ್ಲಿ ಅಣ್ವಸ್ತ್ರ ವಾತಾವರಣದ ಕಾರಣ ನೀಡಿ ಪರೀಕ್ಷೆಗಳನ್ನು ಸಮರ್ಥಿಸಿಕೊಂಡಿವೆ. ಇಲ್ಲಿ ನೆರೆ ರಾಷ್ಟ್ರವೆಂದರೆ ಪಾಕಿಸ್ತಾನ, ಭಾರತ, ಚೈನ ಮತ್ತು ಭಾರತಕ್ಕೆ ಸಮೀಪವಿರುವ ಅಂತರರಾಷ್ಟ್ರೀಯ ನೀರಿನಲ್ಲಿ ಅಣ್ವಸ್ತ್ರ ರಾಷ್ಟ್ರಗಳು ಅಣ್ವಸ್ತ್ರಗಳನ್ನು ಇಟ್ಟಿರುವುದಕ್ಕೆ ಅನ್ವಯಿಸುತ್ತದೆ. ಕೊಲೆಗೆ ಸಮರ್ಥನೆ ಕೊಲೆಯಲ್ಲ ಎಂಬಂತೆ ಸಾಮೂಹಿಕ ಹತ್ಯೆಯನ್ನು ಬೇರೆಯವರು ಈಗಾಗಲೆ ಮಾಡಿದ್ದಾರೆಂಬ ಕಾರಣಕ್ಕೆ ಮಾಡುವುದು ಸರಿಯಲ್ಲ. ನಮ್ಮ ಈ ವಾದವೂ ಪಾಕಿಸ್ತಾನಕ್ಕೂ ಅನ್ವಯಿಸುತ್ತದೆ. ವಿಶ್ವವು ಒಟ್ಟಾರೆಯಾಗಿ ಸದ್ಯದ ವಿಷಮ ಪರಿಸ್ಥಿತಿಗೆ ಪ್ರತಿಕ್ರಿಯಿಸುವ ಅಗತ್ಯವಿದೆ ಮತ್ತು ಈಚೆಗಿನ ಪ್ರತಿಕ್ರಿಯೆಯ ಅಗತ್ಯವಿದೆ.

1. ನಾವು ಎಲ್ಲಾ ಜನರನ್ನು (International Community of Nations) ದಕ್ಷಿಣ ಏಶಿಯಾದಲ್ಲಿ ನಡೆಸುವ ಅಣ್ವಸ್ತ್ರ ಪರೀಕ್ಷೆಗಳನ್ನು, ಪರೀಕ್ಷೆಗೆ ನೀಡುವ ಕಾರಣಗಳನ್ನು ಕೈಬಿಡಬೇಕೆಂದು ಕೇಳುತ್ತೇವೆ.
2. ಭಾರತ ಸರ್ಕಾರವು ಮುಂದೆ ಪರೀಕ್ಷೆ ನಡೆಸದಿರುವುದಕ್ಕೆ, ಅಣ್ವಸ್ತ್ರ ಬೆಳವಣಿಗೆಯನ್ನು, ವಿಸ್ತರಣೆಯನ್ನು ನಿಲ್ಲಿಸಲು ಬದ್ಧವಾಗಬೇಕೆಂದು ಕೇಳುತ್ತೇವೆ.
3. ಪಾಕಿಸ್ತಾನ ಸರ್ಕಾರವು ಅಣ್ವಸ್ತ್ರ ಪರೀಕ್ಷೆಯನ್ನು ನಿಲ್ಲಿಸಬೇಕೆಂದು ಕೋರುತ್ತೇವೆ.
4. ಎಲ್ಲ ಅಣ್ವಸ್ತ್ರ ರಾಷ್ಟ್ರಗಳು ತತ್‌ಕ್ಷಣವೆ ಮತ್ತು ಸಾರ್ವಜನಿಕವಾಗಿ NPTಯ ಆರ್ಟಿಕಲ್ 6 (ವಿವರಕ್ಕೆ ಬಾಕ್ಸ್ ನೋಡಿ) ಅನ್ನು ಎತ್ತಿ ಹಿಡಿಯಲು ಬದ್ಧರಾಗುವವರೆಂದು ಘೋಷಿಸಬೇಕು ಮತ್ತು ಪಾಕಿಸ್ತಾನ ಮತ್ತು ಭಾರತದೊಟ್ಟಿಗೆ ಎಲ್ಲಾ ಅಣ್ವಸ್ತ್ರಗಳನ್ನು ರದ್ದುಪಡಿಸುವ ಅಣ್ವಸ್ತ್ರ ಸಮಾವೇಶವನ್ನು ಕುರಿತ ಮಾತುಕತೆಯನ್ನು ಪ್ರಾರಂಭಿಸಬೇಕು.
5. ಇತರ ರಾಷ್ಟ್ರಗಳು ಮತ್ತು ಸಂಬಂಧಪಟ್ಟ ನಾಗರೀಕರು ಬಹುಪಾಲು ರಾಷ್ಟ್ರಗಳು ತೆಗೆದುಕೊಂಡಿರುವ ಅಣ್ವಸ್ತ್ರ ಹೊಂದುವ, ಅಥವಾ ಸಾಮೂಹಿಕ ನಾಶಕ್ಕೆ ಕಾರಣವಾಗುವ ಇತರ ಯಾವುದೆ ಅಸ್ತ್ರವನ್ನು ವಿರೋಧಿಸುವ ನಿಲುವನ್ನು ಪಾಲಿಸಬೇಕೆಂದು ಅಣ್ವಸ್ತ್ರ ರಾಷ್ಟ್ರಗಳನ್ನು ಒತ್ತಾಯಿಸಬೇಕೆಂದು ಕೇಳುತ್ತೇವೆ.

**ಅಂ.ರಾ.ಇಂ. ವಿ ಜಾಲದ ಸಮನ್ವಯ ಸಮಿತಿ :**

ಅನತೋಲಿ ಡಯ್‌ಕೋವ್ (ರಷ್ಯಾ) ಮಾರ್ಟಿನ್ ಕಲಿನೊವಸ್ಕಿ (ಜರ್ಮನಿ),ಜಾರ್ಜ್. ಲೆವಿಸ್ (ಯು.ಎಸ್.ಎ.), ಜಿಯಾ ಮಿಆನ್ (ಪಾಕಿಸ್ತಾನ), ಡಿಂಗ್ಲಿಶೆನ್ (ಚೈನಾ) ಫರ್‌ನೆಂಡೊ ಡಿಸೋಜ ಚಿರ‍್ರೊಸ್ (ಬ್ರೆಜಿಲ್), ಜಾನ್ ಸ್ವಾನ್ (ಸ್ವೀಡನ್).

**ಇಸ್ಲಾಮಬಾದ್-ಲಾಹೋರ್**

ಭಾರತ-ಪಾಕಿಸ್ತಾನ ಶಾಂತಿ ಮತ್ತು ಪ್ರಜಾತಂತ್ರ ಜನರ ವೇದಿಕೆಯು ಭಾರತದಲ್ಲಿ ಅಣುಬಾಂಬ್ ಪರೀಕ್ಷೆಯನ್ನು ಖಂಡಿಸಿತು. ವೇದಿಕೆಯು ಪಾಕಿಸ್ತಾನ ಸರ್ಕಾರವು ಅಣ್ವಸ್ತ್ರ ಯುದ್ಧದ ವಿರುದ್ಧ ಜವಾಬ್ದಾರಿಯುತವಾಗಿ ಪ್ರತಿಕ್ರಿಯಿಸಬೇಕೆಂದು ಒತ್ತಾಯಿಸಿತು. ಪಾಕಿಸ್ತಾನವು ಪರೀಕ್ಷೆ ನಡೆಸಿದ ನಂತರ ವೇದಿಕೆಯು ಇಸ್ಲಾಮಾಬಾದಿನಲ್ಲಿ ಪತ್ರಿಕಾ ಸಮಾವೇಶವೊಂದನ್ನು ವ್ಯವಸ್ಥಾಪಿಸಿತು. ಎರಡು ಕೋಮುವಾದಿ ಗುಂಪುಗಳಾದ ಜಾಮಾತ್-ಇ-ಇಸ್ಲಾಮಿ ಮತ್ತು ಶಹಬ್-ಇ-ಮಿಲ್ಲಿ ಸಭೆಯಲ್ಲಿ ಗಲಾಟೆ ಎಬ್ಬಿಸಿ ವ್ಯವಸ್ಥಾಪಕರ ಮೇಲೆ ಚೇರುಗಳನ್ನು ಎಸೆದಾಡಿ ವೇದಿಕೆಯು ಭಾರತ ಪರವೆಂದು ಕೂಗಾಡಿದವು. ಆದರೆ ವ್ಯವಸ್ಥಾಪಕರು ಎದೆಗುಂದದೆ ಇಬ್ಬರು ನೆರೆ ರಾಷ್ಟ್ರಗಳ ನಡುವೆ ಅಣ್ವಸ್ತ್ರ ಪೈಪೋಟಿಯನ್ನು ವಿರೋಧಿಸುತ್ತೇವೆ, ನಮಗೆ ಶಾಂತಿ ಮುಖ್ಯ ಎಂದು ಖಂಡಿತವಾಗಿ ಹೇಳಿದರು. ಅಲ್ಲದೆ ಎರಡೂ ದೇಶಗಳ ಪರೀಕ್ಷೆಗೆ ಯಾವ ಸಮರ್ಥನೆಯೂ ಇಲ್ಲ ಎಂದು ವೇದಿಕೆ ಹೇಳಿಕೆ ನೀಡಿತು.

ಇದಲ್ಲದೆ ಕಾನೂನಿನ ವಿದ್ಯಾರ್ಥಿಗಳು ಲಾಹೋರಿನಲ್ಲಿ ಬಾಂಬ್ ವಿರೋಧಿಸಿ ಮೆರವಣಿಗೆ ನಡೆಸಿದರು.

**ನವದೆಹಲಿ**

ಬಾಂಬ್ ವಿರೋಧಿಸಿ ನಾಲ್ಕು ದೊಡ್ಡ ಪ್ರತಿಭಟನೆಗಳು ದೆಹಲಿಯಲ್ಲಿ ನಡೆದವು. ಮೇ ಮಧ್ಯದಲ್ಲಿ ನಡೆದ ಪ್ರತಿಭಟನಾ ಮೆರವಣಿಗೆಯಲ್ಲಿ ವಿವಿಧ ಸಂಘಟನೆಗಳಿಗೆ ಸೇರಿದ 500 ಜನರು ಭಾಗವಹಿಸಿದರು. ಜೂನ್ ಮೊದಲ ವಾರದಲ್ಲಿ ಅಣ್ವಸ್ತ್ರ ಪೈಪೋಟಿ ವಿರೋಧಿಸಿ ಎಚ್ಚರಿಕೆಯ ಸಂಕೇತವಾಗಿ ಮೇಣದ ಬತ್ತಿಗಳನ್ನು ಹಚ್ಚಲಾಯ್ತು. ಅಣ್ವಸ್ತ್ರಗಳ ನಿಶ್ಶಸ್ತ್ರೀಕರಣಕ್ಕಾಗಿಯೇ ಒಂದು ಸಂಘಟನೆಯನ್ನು ಪ್ರಾರಂಭಿಸಿ ವಿವಿಧ ನಗರಗಳಲ್ಲಿ ಅದರ ಶಾಖೆಗಳನ್ನು ತೆರೆಯುವ ಯೋಜನೆಯನ್ನು ಮುಂದಿಡಲಾಯ್ತು.

**ದೆಹಲಿ-ಕರಾಚಿ**

ಎರಡು ದೇಶಗಳ ಪತ್ರಕರ್ತರ ವೇದಿಕೆಯು ಜಂಟಿಯಾಗಿ ಹೇಳಿಕೆ ನೀಡಿ ಎರಡೂ ದೇಶಗಳ ಸರ್ಕಾರಗಳು, ಅಣ್ವಸ್ತ್ರ ಪೈಪೋಟಿಗೆ ಬದಲು ಬಡತನ, ನಿರಕ್ಷರತೆಯನ್ನು ಹೋಗಲಾಡಿಸಲು ಸ್ಪರ್ಧಿಸಬೇಕೆಂದು ಕೋರಿದೆ.

ನಾವು ವೃತ್ತಿನಿರತ ಪತ್ರಕರ್ತರು ಭಾರತ ಮತ್ತು ಪಾಕಿಸ್ತಾನ ಸರ್ಕಾರಗಳು, ಅಣ್ವಸ್ತ್ರ ಪೈಪೋಟಿಯ ಮೂಲಕ ಉಪಖಂಡದಲ್ಲಿ ಉದ್ರಿಕ್ತ ಸ್ಥಿತಿಯನ್ನುಂಟುಮಾಡಬಾರದೆಂದು ಕೇಳುತ್ತೇವೆ ಎಂದು ಪಾಕಿಸ್ತಾನದ ಹಮೀದ್ ಚಾಪು ಮತ್ತು ಭಾರತದ ಕೆ. ಶ್ರೀನಿವಾಸರೆಡ್ಡಿಯವರು ವೇದಿಕೆ ಪರವಾಗಿ ಹೇಳಿಕೆ ನೀಡಿದ್ದಾರೆ.

ಲಾಹೋರಿನ ವಿಮೆನ್ಸ್ ಆ್ಯಕ್ಷನ್ ಫೋರಂ ಎಂಬ ಮಹಿಳಾ ಸಂಘಟನೆಯ ಕಾರ್ಯಕಾರಿ ಸಮಿತಿಯು ಜೂನ್ 3, 1998ರಂದು ಹೇಳಿಕೆಯೊಂದನ್ನು ನೀಡಿ ಉಪಖಂಡದಲ್ಲಿ ಅಣ್ವಸ್ತ್ರ ಪೈಪೋಟಿ ಪ್ರಾರಂಭಿಸಿರುವುದನ್ನು ತೀವ್ರವಾಗಿ ಖಂಡಿಸಿದೆ. ಅಣ್ವಸ್ತ್ರ ಪೈಪೋಟಿಗೆ ನಾಂದಿ ಹಾಡಿದ ಭಾರತ ಸರ್ಕಾರವನ್ನು ಮತ್ತು ಅದಕ್ಕೆ ಪರೀಕ್ಷೆ ಮೂಲಕ ಪ್ರತಿಕ್ರಿಯಿಸಿದ ಪಾಕಿಸ್ತಾನವನ್ನು ಖಂಡಿಸಿದೆ. ಈ ಮಹಿಳಾ ಸಂಘಟನೆಯು ಅಣ್ವಸ್ತ್ರೀಕರಣ ಮತ್ತು ಯುದ್ಧವನ್ನು ತೀವ್ರವಾಗಿ ಖಂಡಿಸುತ್ತಾ ಬಂದಿದ್ದು ಚರ್ಚೆ ಮತ್ತು ಶಾಂತಿಯುತ ದಾರಿಗಳ ಮೂಲಕ ಸಮಸ್ಯೆ ಬಗೆಹರಿಸುವುದಕ್ಕೆ ಪ್ರಾಧಾನ್ಯತೆ ನೀಡುತ್ತದೆ. ಸಂಘಟನೆಯು :

- ಪಾಕಿಸ್ತಾನದಲ್ಲಿ ತುರ್ತುಪರಿಸ್ಥಿತಿಯನ್ನು ತೆಗೆದು ಮಾನವ ಹಕ್ಕುಗಳ ಸ್ಥಾಪನೆಗೆ
- ಭಾರತ ಮತ್ತು ಪಾಕಿಸ್ತಾನದ ನಾಯಕತ್ವದಲ್ಲಿ ನಡೆಯುತ್ತಿರುವ ಹಿಂಸೆ ಮತ್ತು ಯುದ್ಧದ ನಿಲುಗಡೆಗೆ
- ದಕ್ಷಿಣ ಏಶಿಯಾ ಮತ್ತು ಜಗತ್ತಿನ ಜನರ ಶಾಂತಿಯುತ ಬಾಳ್ವೆಗೆ ಸಂಬಂಧಿಸಿದ ತುರ್ತು ವಿಷಯಗಳ ಚರ್ಚೆಗೆ ಹಿಂಸೆಯ ಮೂಲಕ ತಡೆಯೊಡ್ಡುತ್ತಿರುವ ಶಕ್ತಿಗಳ ವಿರುದ್ಧ ತಕ್ಷಣವೇ ಕ್ರಮಕೈಗೊಳ್ಳಲು
- ಪಾಕಿಸ್ತಾನ ಮತ್ತು ಭಾರತ ಕಾಶ್ಮೀರದ ಸಮಸ್ಯೆಯಲ್ಲದೆ ಇನ್ನಿತರ ವಿಷಯಗಳನ್ನು ಶಾಂತಿ ಮತ್ತು ವಿವೇಕ ವಾತಾವರಣದಲ್ಲಿ ಚರ್ಚೆಯ ಮೂಲಕ ತಕ್ಷಣವೇ ಬಗೆಹರಿಸಿಕೊಳ್ಳಬೇಕೆಂದು, ಭಾರತ ಮತ್ತು ಪಾಕಿಸ್ತಾನ ಯುದ್ಧ ನಿಷೇಧಕ್ಕೆ ಮತ್ತು ಸಿಟಿಬಿಟಿ, ಎನ್‌ಪಿಟಿ ಒಪ್ಪಂದಕ್ಕೆ ಕೂಡಲೆ ಸಹಿ ಹಾಕಬೇಕೆಂದು
- ಎಲ್ಲಾ ಅಣ್ವಸ್ತ್ರ ರಾಷ್ಟ್ರಗಳು ತಮ್ಮ ಯುದ್ಧಾಸ್ತ್ರಗಳನ್ನು ನಾಶಪಡಿಸಿ ಕಪಟ ಮತ್ತು ದ್ವಂದ್ವ ನೀತಿಗೆ ಕೊನೆ ಹಾಕಬೇಕೆಂದು ಒತ್ತಾಯಿಸಿದೆ.

**ಮುಂಬೈ**

ಮೇ 26ರಂದು ವಿವಿಧ ಸಂಸ್ಥೆಗಳಿಗೆ ಸೇರಿದ ಸುಮಾರು 200 ಜನರು ಹುತಾತ್ಮ ಚೌಕದಲ್ಲಿ ಅಣುಬಾಂಬ್ ವಿರೋಧಿಸಿ

ಧರಣಿ ನಡೆಸಿದರು. ನಂತರ ಜೂನ್ 10ರಂದು ಅಣು-ವಿರೋಧಿ ಗುಂಪಿನವರು ಒಟ್ಟುಗೂಡಿ ಬಾಂಬ್ ವಿರೋಧಿಸಿ ಸಹಿ ಸಂಗ್ರಹಿಸಲು ಸೇರಿದಾಗ ಪೊಲೀಸರು ತಡೆದರು. ಉಪ-ಖಂಡದಲ್ಲಿ ಸಿಡಿಸಲಾಗಿರುವ 10 ಅಣುಬಾಂಬ್‌ಗಳನ್ನು ವಿರೋಧಿಸಿ ನಗರದ ಹಲವಾರು ಸಂಸ್ಥೆಗಳು ಅಣುಬಾಂಬ್ ವಿರೋಧಿ ಆಂದೋಳನವನ್ನು ಪ್ರಾರಂಭಿಸಲು ಮುಂದೆ ಬಂದಿವೆ.

**ಯು.ಎಸ್.ಎ.**

The alliance for Secular and Democratic South Asia, The Pakistan students Society, MIT Programme in Science, Technology & Society at MITಯವರು ಒಟ್ಟು ಸೇರಿ ಮೇ 12ರಂದು ಧರಣಿ ನಡೆಸಿದರು. ಧರಣಿಯ ವಿಷಯ ಭಾರತ ಮತ್ತು ಪಾಕಿಸ್ತಾನ ಬಾಂಬ್‌ಗಳನ್ನು ವಿರೋಧಿಸಿ ಎಂಬುದಾಗಿತ್ತು. ಇಸ್ಲಾಮಾಬಾದ್ ವಿಶ್ವವಿದ್ಯಾನಿಲಯದಲ್ಲಿ ಭೌತಶಾಸ್ತ್ರ ವಿಭಾಗದ ಪ್ರೊಫೆಸರ್ ಆದ ಮತ್ತು ಮೇರಿಲ್ಯಾಂಡ್ ವಿಶ್ವವಿದ್ಯಾಲಯಕ್ಕೆ ಸಂದರ್ಶಕ ಪ್ರೊಫೆಸರ್ ಆಗಿರುವ ಡಾ. ಪರ್ವೇಜ್‌ಹೂದ್‌ಬಾಯ್ ಅವರು ಧರಣಿಯನ್ನು ಉದ್ದೇಶಿಸಿ ಮಾತನಾಡಿದರು. ಇತ್ತೀಚಿನ ಅಣ್ವಸ್ತ್ರ ಪರೀಕ್ಷೆಗಳನ್ನು ಕುರಿತಂತೆ ಅವರು ಮಾತನಾಡಿದರು. ದಿಗ್ಬಂಧನ ಹೇರಿರುವ ಪಶ್ಚಿಮದ ಕಪಟ ನೀತಿಯನ್ನು ಮತ್ತು ಅಣ್ವಸ್ತ್ರ ಪೈಪೋಟಿಯನ್ನು ವಿರೋಧಿಸಿ ಹೂಡಿದ 'ಪೆಟಿಶನ್ (ಮೊಕದ್ದಮೆಯ) ಪ್ರತಿಗಳನ್ನು ಹಂಚಲಾಯ್ತು. ಈಗಾಗಲೆ 3,000 ಅಮೆರಿಕ ಮತ್ತು ಕೆನಡಾದ ಸಂಸ್ಥೆಗಳ ಸಹಿಯನ್ನು ಪಡೆಯಲಾಗಿದೆ.

ಯು.ಕೆ., ಫ್ರಾನ್ಸ್, ಜರ್ಮನಿಗೆ ಸೇರಿದ 94 ಜನ ಶಿಕ್ಷಣ ತಜ್ಞರು ಮತ್ತು ಸಮಾಜ ಸೇವಕರು ಭಾರತ ಮತ್ತು ಪಾಕಿಸ್ತಾನದಲ್ಲಿ ನಡೆಸಿದ ಅಣ್ವಸ್ತ್ರ ಪರೀಕ್ಷೆಗಳನ್ನು ತೀವ್ರವಾಗಿ ಖಂಡಿಸಿದ್ದಾರೆ. "ಭಾರತ ಮತ್ತು ಪಾಕಿಸ್ತಾನದಲ್ಲಿ ನಡೆಸಿದ ಅಣ್ವಸ್ತ್ರ ಪರೀಕ್ಷೆಗಳನ್ನು ತೀವ್ರವಾಗಿ ಖಂಡಿಸುತ್ತೇವೆ. ಎರಡೂ ಸರ್ಕಾರಗಳು ತಮ್ಮ ಜನತೆಯ ಮೂಲಭೂತ ಅಗತ್ಯಗಳನ್ನು ಕಡೆಗಣಿಸಿ, ಅಮೂಲ್ಯ ಸಂಪನ್ಮೂಲಗಳನ್ನು ಶಸ್ತ್ರಾಸ್ತ್ರ ಪೈಪೋಟಿಗೆ ವ್ಯಯಿಸಿರುವುದನ್ನು ನಾವು ಖಂಡಿಸುತ್ತೇವೆ" ಎಂಬ ಹೇಳಿಕೆಯನ್ನು ನೀಡಿದ್ದಾರೆ. ಅಲ್ಲದೆ ಭಾರತದ ಬಿಜೆಪಿ ಮುಂದಾಳತ್ವದ ಸರ್ಕಾರವು ಏಶಿಯಾ ಖಂಡದಲ್ಲಿ ಅಣು ಉದ್ವಿಗ್ನತೆಯನ್ನು ಉಂಟುಮಾಡಿ ಮೊದಲೆ ವಿಷಮಗೊಂಡಿದ್ದ ಚೀನಾ, ಪಾಕಿಸ್ತಾನ ನೆರೆ ರಾಷ್ಟ್ರಗಳೊಂದಿಗಿನ ಸಂಬಂಧವನ್ನು ಇನ್ನೂ ವಿಷಮಗೊಳಿಸಿದ್ದಾರೆ ಹಾಗು ಪಾಕಿಸ್ತಾನದ ವಿರುದ್ಧ ಕೋಮುವಾದಿ ಭಾವನೆಗಳಿಗೆ ಎಡೆಮಾಡಿಕೊಟ್ಟಿದೆ ಎಂದು ಹೇಳಿದೆ.

**ಕರಾಚಿ**

ಪಾಕಿಸ್ತಾನದಲ್ಲಿಯೂ 200 ಬುದ್ಧಿಜೀವಿಗಳು ಒಟ್ಟಾಗಿ ಬಂದು ಅಣ್ವಸ್ತ್ರ ಪೈಪೋಟಿ ವಿರೋಧಿಸಲು ಕರೆ ನೀಡಿದ್ದಾರೆ. ಭಾರತ ಮತ್ತು ಪಾಕಿಸ್ತಾನದ ಸರ್ಕಾರಗಳು ನಡೆಸಿದ ಅಣ್ವಸ್ತ್ರ ಪರೀಕ್ಷೆಗಳನ್ನು ಖಂಡಿಸಿರುವ ಅವರು ಈ ಬೇಡಿಕೆಗಳನ್ನು ಮುಂದಿಟ್ಟು ಪಾಕಿಸ್ತಾನ ಮತ್ತು ಜಗತ್ತಿನ ಜನರನ್ನು ಬೆಂಬಲಿಸಲು ಕೋರಿದ್ದಾರೆ.

* ಪಾಕಿಸ್ತಾನ ಸರ್ಕಾರವು ಮುಂದೆ ಅಣ್ವಸ್ತ್ರ ಪರೀಕ್ಷೆಯನ್ನೂ, ಅಣ್ವಸ್ತ್ರ ತಯಾರಿಕೆ ಬಳಕೆಯನ್ನು ನಿಷೇಧಿಸಲು ಬದ್ಧವಾಗಬೇಕು. ಹಾಗೆಯೇ ಭಾರತ ಸರ್ಕಾರವು ಅದನ್ನೆ ಮಾಡಬೇಕು.
* ಭಾರತ ಮತ್ತು ಪಾಕಿಸ್ತಾನವು ತಕ್ಷಣವೆ ಮಾತುಕತೆ ನಡೆಸಿ ಬಿಕ್ಕಟ್ಟುಂಟುಮಾಡಿರುವ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಿಸಬೇಕು ಮತ್ತು ಆ ಮೂಲಕ ಶಾಂತಿ, ಅಭಿವೃದ್ಧಿಗೆ ಭದ್ರ ತಳಪಾಯ ಹಾಕಬೇಕು.

**ಬೆಂಗಳೂರು**

ಬೆಂಗಳೂರಿನ ವಿಮೋಚನಾ ಮಹಿಳಾ ಹಕ್ಕುಗಳ ವೇದಿಕೆಯು ಭಾರತ-ಪಾಕಿಸ್ತಾನ ಸರ್ಕಾರಗಳು ನಡೆಸಿದ ಅಣ್ವಸ್ತ್ರ ಪರೀಕ್ಷೆಗಳನ್ನು ಖಂಡಿಸಿ ದಿನಾಂಕ 4-6-1998 ಮತ್ತು 11-6-1998ರಂದು M.G. ರಸ್ತೆಯ ಗಾಂಧಿ ಚೌಕದ ಬಳಿ ಕಪ್ಪು ಬಟ್ಟೆ ತೊಟ್ಟು ಮೌನ ಪ್ರತಿಭಟನೆ ನಡೆಸಿದರು. ಮತ್ತು ದಿನಾಂಕ 10-6-1998ರಂದು ವಿಚಾರ ಸಂಕಿರಣವೊಂದನ್ನು ಏರ್ಪಡಿಸಿದ್ದರು. ಪ್ರಫುಲ್‌ಬಿದ್ವಾಯಿ, ಅಶಿಶ್‌ನಂದಿ, ಜಸ್ಟಿಸ್ ಕೃಷ್ಣ ಅಯ್ಯರ್ ಮತ್ತು ವಿಮೋಚನದ ಕಾರಿನ್ ಅವರು ಶಸ್ತ್ರೀಕರಣ, ಭಾರತದ ಅಣ್ವಸ್ತ್ರ ನೀತಿ, ಶಾಂತಿ ಮತ್ತು ನಿಶ್ಶಸ್ತ್ರೀಕರಣದ ತುರ್ತಿನ ಬಗ್ಗೆ ಮಾತನಾಡಿದರು.

ಸಿ.ಪಿ.ಐ., ಸಿ.ಪಿ.ಐ.ಎಂ. ಪಕ್ಷಗಳು ದಿನಾಂಕ 6-8-98ರಂದು ಬಾಂಬ್ ವಿರುದ್ಧ ಪ್ರತಿಭಟಿಸಿದರು. ಚಿಕ್ಕ ಲಾಲ್‌ಬಾಗ್‌ನಿಂದ ಕಾರ್ಪೊರೇಷನ್ ಬಳಿ ಇರುವ ಬನ್ನಪ್ಪ ಪಾರ್ಕ್‌ನವರೆಗೆ ಮೆರವಣಿಗೆಯಲ್ಲಿ ಹೋಗಲಾಯ್ತು. ನಂತರ ಸಾರ್ವಜನಿಕ ಸಭೆಯನ್ನು ಏರ್ಪಡಿಸಲಾಗಿತ್ತು. ಸಭೆಯಲ್ಲಿ

ಲೇಖಕ ಜಿ. ಕೆ. ಗೋವಿಂದರಾವ್, ಕಾರ್ಮಿಕ ನಾಯಕ ಸೂರ್ಯನಾರಾಯಣರಾವ್, ವಿಜ್ಞಾನ ಪರಿಷತ್‌ನ ಸೇತುರಾವ್, ಪತ್ರಕರ್ತ ಸಿಂಹಾದ್ರಿ, ಮಹಿಳಾ ಸಮಖ್ಯಾ ಕಾರ್ಮಿಕ ಸಂಘಟನೆಯ ಗಾಯತ್ರಿಯವರು ಬಾಂಬ್ ಪರೀಕ್ಷೆಗಳನ್ನು ವಿರೋಧಿಸಿ ಮಾತನಾಡಿದರು. ಸುರಿವ ಮಳೆಯನ್ನು ಲೆಕ್ಕಿಸದೆ ಜನರು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದರು.

ಅಣು ವಿರೋಧಿ ಜನಶಕ್ತಿ (ಸಹಭಾಗಿ ಸಂಘಟನೆಗಳು : ಪ್ರಜಾತಾಂತ್ರಿಕ ಜನರ ವೇದಿಕೆ (P.D.F.), ಕರ್ನಾಟಕ ವಿಮೋಚನಾ ರಂಗ, ದುಡಿಯೋರ ಹೋರಾಟ, ಕನ್ನಡ ಸಂಘರ್ಷ ಸಮಿತಿ, ಸಮುದಾಯ, ಸರ್ವೋದಯ, ಮಹಿಳಾ ಜಾಗೃತಿ, ಸಿದ್ಧ ಉಡುಪು ಕಾರ್ಮಿಕರ ಸಂಘ, ಕಾರ್ಮಿಕರ ಶೈಕ್ಷಣಿಕ ಸಾಂಸ್ಕೃತಿಕ ವೇದಿಕೆ, ಕೆ.ಎಸ್.ಆರ್.ಟಿ.ಸಿ., ವಿಚಾರ ರಂಗ, ಕರ್ನಾಟಕ ಯುವಜನ ಸಂಘಟನೆ, ಜಗಮೆಚ್ಚಿದ ಮಗ ಡಾ. ರಾಜ್ ಅಭಿಮಾನಿಗಳ ಸಂಘ, ಬಂಡಾಯ ಸಾಹಿತ್ಯ ಸಂಘಟನೆ, ಸಾಮ್ರಾಜ್ಯಶಾಹಿ ವಿರೋಧಿ ಒಕ್ಕೂಟ ಇತ್ಯಾದಿ.)ಯು ದಿನಾಂಕ 9-8-98ರಂದು (ಹಿರೋಶಿಮಾದ ಮೇಲೆ ಅಮೆರಿಕ ಬಾಂಬ್ ಹಾಕಿದ ದಿನ) ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು. ಅಣ್ವಸ್ತ್ರ ಸ್ಪರ್ಧೆಯನ್ನು, ಯುದ್ಧೋನ್ಮಾದವನ್ನು ಖಂಡಿಸುವ ಕರಪತ್ರವನ್ನು ಹಂಚಲಾಯ್ತು; ಅಣುಶಕ್ತಿ ವಿರೋಧಿ ಜನಶಕ್ತಿಯು ಕರಪತ್ರದ ಮೂಲಕ ಈ ಬೇಡಿಕೆಗಳನ್ನು ಮುಂದಿಟ್ಟಿದೆ.

* ಭಾರತ ಸರಕಾರ ಈ ಕೂಡಲೇ ತನ್ನ ಬಳಿಯಿರುವ ಎಲ್ಲಾ ಅಣ್ವಸ್ತ್ರಗಳನ್ನೂ ನಾಶಪಡಿಸಬೇಕು ಹಾಗೂ ಆ ನೆಲೆಗಟ್ಟಿನಿಂದ, ಜಗತ್ತಿನ ಇತರ ದೇಶಗಳೂ ಸಹ ಎಲ್ಲಾ ಅಣ್ವಸ್ತ್ರಗಳನ್ನೂ ನಾಸಪಡಿಸಬೇಕೆಂದು ಒತ್ತಾಯಿಸಬೇಕು; ಅಣ್ವಸ್ತ್ರ ಮುಕ್ತ ವಿಶ್ವಕ್ಕಾಗಿ ಪ್ರಾಮಾಣಿಕವಾಗಿ ಶ್ರಮಿಸಬೇಕು.
* ಕಾಶ್ಮೀರಿ ಜನತೆಯನ್ನೂ ಒಳಗೊಂಡು ಕಾಶ್ಮೀರದ ಸಮಸ್ಯೆಯನ್ನು ಸೌಹಾರ್ದಯುತ ಮಾತುಕತೆಯ ಮೂಲಕ ಪರಿಹರಿಸಿಕೊಳ್ಳಬೇಕು. ಹಾಗೆಯೇ, ಚೀನಾ ಸೇರಿದಂತೆ ಎಲ್ಲಾ ನೆರೆಹೊರೆಯ ದೇಶಗಳೊಂದಿಗಿನ ವಿವಾದಗಳನ್ನೂ ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಬೇಕು.
* ಯಾವುದೇ ಅಣುಸ್ಥಾವರ ಅಥವಾ ಅಣುಶಕ್ತಿ ಯೋಜನೆಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಸಾರ್ವಜನಿಕರು ಪಡೆಯಲು ಸಾಧ್ಯವಾಗುವಂತೆ ಭಾರತದ ಅಣುಶಕ್ತಿ ಕಾಯಿದೆಯನ್ನು ಸಮಗ್ರವಾಗಿ ತಿದ್ದುಪಡಿ ಮಾಡಬೇಕು. ಅಲ್ಲಿಯವರೆಗೂ, ಅಣು ದ್ರವ್ಯದ ಗಣಿಗಾರಿಕೆಯೂ ಸೇರಿದಂತೆ ಎಲ್ಲಾ ಅಣು ಸ್ಥಾವರಗಳು ಹಾಗೂ ಅಣು ಸಂಬಂಧಿ ಯೋಜನೆ ಮತ್ತು ಕಾರ್ಯಕ್ರಮಗಳನ್ನೂ ತಕ್ಷಣದಿಂದಲೇ ರದ್ದುಗೊಳಿಸಬೇಕು. ಈವರೆಗಿನ ಇಂಥ ಎಲ್ಲಾ ಚಟುವಟಿಕೆಗಳಿಗೆ ಸಂಬಂಧಿಸಿದ ಸಮಗ್ರ ಮಾಹಿತಿಯನ್ನು ಸಾರ್ವಜನಿಕರಿಗೆ ಒದಗಿಸಬೇಕು.

ದೇಶದ ಕೋಟ್ಯಾಂತರ ಜನತೆಯ ಮೂಲಭೂತ ಸಮಸ್ಯೆಗಳ ಪರಿಹಾರಕ್ಕಾಗಿ ಬಳಕೆಯಾಗಬೇಕಾದ ಸಾವಿರಾರು ಕೋಟಿ ರೂ.ಗಳ ಅಮೂಲ್ಯ ಸಂಪನ್ಮೂಲವನ್ನು ದೇಶದ ರಕ್ಷಣೆಯ ಹೆಸರಿನಲ್ಲಿ ಮಿಲಿಟರಿ ತಂತ್ರಜ್ಞಾನದ ಸಂಶೋಧನೆಗೆ ಮತ್ತು ಮಿಲಿಟರಿ ವೆಚ್ಚಕ್ಕೆ ಪೋಲು ಮಾಡುತ್ತಿರುವುದು ಕೂಡಲೇ ನಿಲ್ಲಬೇಕು. ಮೂಲಭೂತ ಸಮಸ್ಯೆಗಳ ನಿವಾರಣೆಗೆ ಸಹಕಾರಿಯಾಗುವಂಥ ಹಾಗೂ ಸುರಕ್ಷಿತ ಬದಲಿ ಮೂಲಗಳಿಂದ ವಿದ್ಯುತ್ ಉತ್ಪಾದನೆ ಮಾಡುವಂಥ ಸಂಶೋಧನೆಗಳಿಗೆ ಅತಿ ಹೆಚ್ಚಿನ ಉತ್ತೇಜನ ನೀಡಬೇಕು.

ಬೆಳಗ್ಗೆ ಚಿಕ್ಕಲಾಲ್‌ಬಾಗ್‌ನಿಂದ ಶೇಷಾದ್ರಿಪುರಂನಲ್ಲಿರುವ ವರದಾಚಾರ್ ಕಲಾಕ್ಷೇತ್ರದವರೆಗೆ, ಪ್ರತಿಭಟನಾ ಮೆರವಣಿಗೆ ನಡೆಸಲಾಯ್ತು. ಮಧ್ಯಾನದ ನಂತರ ವಿಚಾರ ಸಂಕಿರಣ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವರದಾಚಾರ್ ಕಲಾಕ್ಷೇತ್ರದಲ್ಲಿ ಏರ್ಪಡಿಸಲಾಗಿತ್ತು. ವಿಚಾರ ಸಂಕಿರಣದಲ್ಲಿ ಲೇಖಕರಾದ ಶ್ರೀ ಜಿ. ಕೆ. ಗೋವಿಂದರಾವ್, ವಿಜ್ಞಾನಿ ರಾಮಲಿಂಗಂ, ದುಡಿಯೋರ ಹೋರಾಟ ಸಂಘಟನೆಯ ಜಗದೀಶ್, ಪ್ರಜಾ ತಾಂತ್ರಿಕ ಜನರ ವೇದಿಕೆಯ ಶ್ರೀಧರ್, ಪ್ರಗತಿಪರ ನಿರ್ದೇಶಕರಾದ ಕೆ. ಪಿ. ಶಶಿ ಅವರುಗಳು ಅಣುವಿಜ್ಞಾನದ ಮಿಲಿಟರೀಕರಣ, ಅಣು ಶಸ್ತ್ರಾಸ್ತ್ರ ಗಳಿಂದಾಗುವ ಹಾನಿ ಮತ್ತು ಅವುಗಳ ಹಿಂದಿರುವ ರಾಜಕೀಯ, ಸರ್ಕಾರದ ಜನ ವಿರೋಧಿ ನೀತಿ ಇತ್ಯಾದಿ ಕುರಿತು ಮಾತನಾಡಿದರು. ಕರ್ನಾಟಕ ವಿಮೋಚನಾ ರಂಗದ ಸಿರಿಮನೆ ನಾಗರಾಜ್ ಅವರು ಕಾರ್ಯಕ್ರಮ ನಡೆಸಿಕೊಟ್ಟರು. ವಿಚಾರ ಸಂಕಿರಣದ ನಂತರ ಹಾಡು, ಬೀದಿನಾಟಕ, ಕವಿಗೋಷ್ಠಿ, ಮಕ್ಕಳಿಂದ ಚಿತ್ರ ರಚಿಸುವ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಇಡೀ ಕಾರ್ಯಕ್ರಮ ದಲ್ಲಿ ಕರ್ನಾಟಕದ ವಿವಿಧ ಪ್ರದೇಶಗಳಿಂದ ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ಕಾರ್ಯಕ್ರಮದ ಮಧ್ಯದಲ್ಲಿ ಕರೆಂಟ್ ಹೋದರೂ ಸಭೆಗೆ ಅಡಚಣೆಯಾಗದಂತೆ ಸಭಿಕರು ಆಸಕ್ತಿಯಿಂದ, ಉತ್ಸಾಹದಿಂದ ಪಾಲ್ಗೊಂಡದ್ದು ಒಂದು ವಿಶೇಷ.

ಮಾನಸ ಪತ್ರಿಕೆ ಯಾವ ಸಂಸ್ಥೆಯು, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವಾಯತ್ತ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ.

**ವಾರ್ಷಿಕ ಚಂದಾ : 40 ರೂ.**

**ಸಂಸ್ಥೆಗಳಿಗೆ : 75 ರೂ.**

*ಸಂ. ಮಂಡಳಿ*

REGD NO. KRNA 271

BOOK-POST
PRINTED MATTER

ವಿಳಾಸ :
**ಮಾನಸ**
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067